*ಸನ್ಮಾನ್ಯ ಸಭಾಧ್ಯಕ್ಷರೇ,*

1. ನಾನು ಕರ್ನಾಟಕ ಸರ್ಕಾರದ 2006-07ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸಲು ಹರ್ಷಿಸುತ್ತೇನೆ.

2. ತಮಗೆಲ್ಲ ತಿಳಿದಿರುವಂತೆ ಭಾರತದಲ್ಲಿ ಈಗ ಸಮ್ಮಿಶ್ರ ಸರ್ಕಾರಗಳ ಯುಗ ಆರಂಭವಾಗಿದೆ. ಕೇಂದ್ರವೂ ಸೇರಿದಂತೆ ಹಲವಾರು ರಾಜ್ಯಗಳಲ್ಲಿ ಸಮ್ಮಿಶ್ರ ಸರ್ಕಾರಗಳು ಆಡಳಿತ ನಡೆಸುತ್ತಿವೆ. ಕರ್ನಾಟಕದಲ್ಲಿ ಸಹ ಭಾರತೀಯ ಜನತಾಪಾರ್ಟಿ ಮತ್ತು ಜಾತ್ಯಾತೀತ ಜನತಾದಳದ ನೂತನ ಮೈತ್ರಿಕೂಟ ಸರ್ಕಾರ **"ಕರ್ನಾಟಕ ಅಭಿವೃದ್ಧಿ ರಂಗ"** ಅಧಿಕಾರಕ್ಕೆ ಬಂದಿದೆ. ಹೆಸರೇ ಸೂಚಿಸುವಂತೆ ಇದು **ಕರ್ನಾಟಕದ ಅಭಿವೃದ್ಧಿಗಾಗಿಯೇ ರಚಿತವಾಗಿರುವ ಸರ್ಕಾರ.** ನಮ್ಮ ರಾಜಕೀಯ ತತ್ವ, ಸಿದ್ಧಾಂತಗಳೇನೇ ಇದ್ದರೂ ರಾಜ್ಯದ ಅಭಿವೃದ್ಧಿಗಾಗಿ ಒಗ್ಗೂಡಿ ದುಡಿಯಲು ಇದು ಸಕಾಲ.

3. ಇದು ನೂತನ ಮೈತ್ರಿಕೂಟ ಸರ್ಕಾರದ ಮೊದಲ ಮುಂಗಡ ಪತ್ರ. ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಯೇ-ನಮ್ಮ ಗುರಿ. ಸ್ವಚ್ಛ, ದಕ್ಷ ಹಾಗೂ ಕಾಳಜಿ ಸಹಿತ ಆಡಳಿತ-ನಮ್ಮ ದಾರಿ. ಸರ್ವರಿಗೂ ಸಮಬಾಳನ್ನೀಯುವ ಸಾಮಾಜಿಕ ನ್ಯಾಯ-ನಮ್ಮ ದಿಕ್ಸೂಚಿ. ಎಂ. ಗೋಪಾಲಕೃಷ್ಣ ಅಡಿಗರು ತಮ್ಮ ಒಂದು ಕವಿತೆಯಲ್ಲಿ ಆಶಿಸಿದಂತೆ

*ಅನ್ನವನು ಕೊಡು ಮೊದಲು,*
*ಬಟ್ಟೆಯನು ಕೊಡು ಉಡಲು,*
*ಕಟ್ಟಿಕೊಡು ಮನೆಗಳನು,*
*ಇದು ಮೊದಲು, ಆ ಮೇಲೆ ಉಳಿದುದೆಲ್ಲ!*

4. ಇದು ನಮ್ಮ ಸರ್ಕಾರದ ಆದ್ಯ ಕಾರ್ಯಕ್ರಮಗಳ ಮುನ್ನೋಟವಾಗಿದೆ. ಭಾರತದ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ ಪಥದಲ್ಲಿ ಕರ್ನಾಟಕವನ್ನು ಮೊದಲ ಸ್ಥಾನಕ್ಕೆ ಏರುವಂತೆ ಮಾಡುವುದು ಈ ಮುಂಗಡ ಪತ್ರದ ಗುರಿಯಾಗಿದೆ.

5. ಕರ್ನಾಟಕ ರಾಜ್ಯದ ಮೂಲಭೂತ ಸಾಧನ ಸಂರಚನೆ (Infrastructure) ಯನ್ನು ಸುಧಾರಿಸಿ, ನಾಡಿನ ಐದೂವರೆ ಕೋಟಿಯ ಜನರ ಬದುಕಿನ ಗುಣಮಟ್ಟವನ್ನು ಹೆಚ್ಚಿಸುವುದು ನಮ್ಮ ಹಂಬಲ.

6. ಬಿಜೆಪಿ- ಜೆಡಿ (ಎಸ್) ಮೈತ್ರಿ ಸರ್ಕಾರ ಕರ್ನಾಟಕದ ಜನತೆಗೆ 21ನೇ ಶತಮಾನದ ಮೊದಲ ದಶಕದ ಸ್ಪರ್ಧಾತ್ಮಕ ಜಗತ್ತಿನೊಡನೆ ದಾಪುಗಾಲು ಇಡಲು ಪೂರಕವಾದ ಮುಂಗಡ ಪತ್ರವನ್ನು ನೀಡುತ್ತಿದೆ.

7. ನಮ್ಮ ಗೌರವಾನ್ವಿತ ರಾಷ್ಟ್ರಪತಿಗಳಾದ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ರವರ ಮಾರ್ಗದರ್ಶನದ ಅದೃಷ್ಟವೂ ನಮಗೆ ದೊರೆತಿದೆ. ಭಾರತದ ರಾಷ್ಟ್ರಪತಿಗಳು ಕರ್ನಾಟಕ ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ಮಂಡಿಸಿದ 'ಕರ್ನಾಟಕದ ಪ್ರಗತಿಗೆ ಸೂತ್ರಗಳು' ಎನ್ನುವ ಚಿಂತನಾಶೀಲ ಭಾಷಣಕ್ಕೆ ಈ ಮೂಲಕ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

8. ನಮ್ಮ ಸರ್ಕಾರವು ಅಭಿವೃದ್ಧಿಯ ಚೈತನ್ಯ ಪಥದಲ್ಲಿ ಸಾಗುತ್ತಾ ಕರ್ನಾಟಕದ ನಾಗರೀಕರಿಗೆ ಶಾಂತಿ, ಸಮೃದ್ಧಿ ಮತ್ತು ಸಂತೃಪ್ತಿಯನ್ನು ತರಲು ಬಯಸುತ್ತದೆ. ಮೈತ್ರಿಕೂಟ ಸರ್ಕಾರದ ಕೆಲವು ಅಭಿವೃದ್ಧಿ ಆದ್ಯತೆಗಳನ್ನು ಇಲ್ಲಿ ನಾನು ಪ್ರಸ್ತಾಪಿಸಲು ಬಯಸುತ್ತೇನೆ.

- ಕೋಮು ಸೌಹಾರ್ದತೆ ಮತ್ತು ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ರಾಜ್ಯದ ಸಮಗ್ರ ಅಭಿವೃದ್ಧಿ.

- GSDP ವೃದ್ಧಿ ದರ ಶೇ.8 ರಿಂದ 10ಕ್ಕೆ ಏರಿಕೆ. ಕೃಷಿ ವಲಯದಲ್ಲಿ ಶೇ.4ಕ್ಕಿಂತ ಹೆಚ್ಚಿನ ವೃದ್ಧಿ. ರಾಷ್ಟ್ರೀಯ ಸರಾಸರಿಯನ್ನು ಮೀರಿಸುವುದು.

- ರೈತರ, ಪರಿಶಿಷ್ಟಜಾತಿ/ ಬುಡಕಟ್ಟುಗಳು, ಹಿಂದುಳಿದ ಜಾತಿಗಳು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಕಲ್ಯಾಣ.

- ಕುಡಿಯುವ ನೀರು, ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ, ಮತ್ತು ಆರೋಗ್ಯ ಸೌಕರ್ಯ ಒದಗಿಸಲು ಸಮರೋಪಾದಿಯ ಕಾರ್ಯಾಚರಣೆ.

- ಉತ್ತಮ ಗುಣಮಟ್ಟದ ಜೀವನ ಮತ್ತು ಬಂಡವಾಳ ಹೂಡಿಕೆಗೆ ಉತ್ತೇಜನ ನೀಡುವಂತಹ ಮೂಲಸೌಕರ್ಯಗಳ ಸಮರ್ಪಣೆ.

- ಕನ್ನಡ ನಾಡು, ನುಡಿ, ಕಲೆ ಮತ್ತು ಜಲಸಂಪನ್ಮೂಲಗಳ ಸಂರಕ್ಷಣೆ.

- ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕಿಸುವುದು.

- ಪ್ರಾಂತೀಯ ಅಸಮತೋಲನ ನಿವಾರಣೆ.

- ಎಲ್ಲಾ ಮಟ್ಟದಲ್ಲೂ ಭ್ರಷ್ಟಾಚಾರದ ನಿಯಂತ್ರಣ.

**ಆರ್ಥಿಕ ಸ್ಥಿತಿಗತಿ**

9. ಕೇಂದ್ರದ ಆರ್ಥಿಕ ಸಮೀಕ್ಷೆಯ ಪ್ರಕಾರ 2005-06 ನೇ ಸಾಲಿನಲ್ಲಿ ರಾಷ್ಟ್ರದ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಶೇ.8.1 ರ ವೃದ್ಧಿಯನ್ನು ಕಂಡಿದೆ. ಇದೇ ಸಾಲಿನಲ್ಲಿ ಕರ್ನಾಟಕವೂ ಸಹ ಹೆಚ್ಚಿನ ಆರ್ಥಿಕ ವೃದ್ಧಿ ಸಾಧಿಸಿದೆ. ಸ್ಥಿರಬೆಲೆಗಳ ಆಧಾರದಲ್ಲಿ ರಾಜ್ಯದ ಆರ್ಥಿಕತೆ 2005-06 ನೇ ಸಾಲಿನಲ್ಲಿ ಶೇ. 8.7 ರ ವೃದ್ಧಿಯನ್ನು ಸಾಧಿಸುವ ನಿರೀಕ್ಷೆಯಿದೆ. ಈ ಸಾಲಿನಲ್ಲಿ ರಾಜ್ಯದ ಪ್ರಾಥಮಿಕ ವಲಯವು ಶೇ. 6.3 ಮತ್ತು ಉತ್ಪಾದನಾ ವಲಯವು ಶೇ. 5.7 ಹಾಗೂ ಸೇವಾವಲಯವು ಶೇ. 11.2 ರ ದರದಲ್ಲಿ ವೃದ್ಧಿಯಾಗುವ ನಿರೀಕ್ಷೆಯಿದೆ.

10. ಹಣದುಬ್ಬರವು ಆರ್ಥಿಕ ಸ್ಥಿರತೆಯ ಒಂದು ಸೂಚಕ. ಹಿಂದಿನ ವರ್ಷಗಳಲ್ಲಿ ಕಂಡುಬಂದಂತೆ ಕರ್ನಾಟಕ ರಾಜ್ಯದ ಹಣದುಬ್ಬರವು ರಾಷ್ಟ್ರೀಯ ಹಣದುಬ್ಬರಕ್ಕಿಂತ ಕಡಿಮೆಯಿರುತ್ತದೆ. 2005-06 ರಲ್ಲಿ ರಾಜ್ಯದ ಹಣದುಬ್ಬರವು ಶೇ. 4.4 ರಷ್ಟಾಗುವ ಅಂದಾಜಿದ್ದು ಇದು ಶೇ.4.7 ರ ರಾಷ್ಟ್ರೀಯ ಹಣದುಬ್ಬರಕ್ಕಿಂತ ಕಡಿಮೆಯಾಗಿದೆ. ಇದು ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಉತ್ತೇಜನ ಒದಗಿಸಿ ರಾಜ್ಯದ ಪ್ರಗತಿ ರಥಕ್ಕೆ ಚುರುಕಿನ ಚಾಲನೆ ನೀಡಲಿದೆ.

11. ಕರ್ನಾಟಕವು ವಿತ್ತೀಯ ಸುಧಾರಣೆಗಳ ಮೂಲಕ ರಾಜಸ್ವ ಉಳಿಕೆ ಸಾಧಿಸಿದೆ. ಅಷ್ಟೇ ಅಲ್ಲ, ಅದನ್ನು ಆಸ್ತಿ ನಿರ್ಮಾಣದಲ್ಲಿ ಹೂಡಿಕೆ ಮಾಡಿ ರಾಜ್ಯದ ವೃದ್ಧಿದರಕ್ಕೆ ಕೊಡುಗೆ ನೀಡುತ್ತಿದೆ. ವಿತ್ತೀಯ ಕೊರತೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದು ಆರ್ಥಿಕ ಸುಸ್ಥಿರತೆಯನ್ನೂ ಸಾಧಿಸಿದೆ. **ನಾವು ರೂಪಿಸುವ ವಿತ್ತೀಯ ಸುಧಾರಣಾ ನೀತಿಗಳು ಮುಂಬರುವ ವರ್ಷದಲ್ಲಿ ಶೇ.8 ರ ವೃದ್ಧಿದರ ಸಾಧನೆಗೆ ನೆರವಾಗಲಿವೆ.**

**12.** ರಾಜ್ಯದಲ್ಲಿ ಆರ್ಥಿಕ ಪ್ರಗತಿಗೆ ಉತ್ತೇಜನ ನೀಡುವ ವಾತಾವರಣವಿದ್ದು ಇದು ನಮ್ಮಲ್ಲಿ ಆಶಾವಾದ ಮೂಡಿಸಿದೆ. ಆದರೆ ಇದರ ಫಲಶೃತಿಗಳನ್ನು ಸಮಾಜದ ದುರ್ಬಲ ವರ್ಗಗಳಿಗೆ ತಲುಪಿಸುವುದು ಈಗ ನಮ್ಮ ಮುಂದಿರುವ ಕಾಳಜಿಯಾಗಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕ ವೆಚ್ಚದ ಹಣ ಪರಿಣಾಮಕಾರಿಯಾಗಿ ಬಳಕೆಯಾಗಲು ಅದರ ತಾಂತ್ರಿಕ ಮತ್ತು ಹಂಚಿಕೆ ದಕ್ಷತೆಯನ್ನು ಸುಧಾರಿಸಲು ನಾವು ಶೀಘ್ರ ಕ್ರಮ ಕೈಗೊಳ್ಳಬೇಕು.

**ರಾಜ್ಯದ ಹಣಕಾಸು**

13. ನಮ್ಮ ಇತ್ತೀಚಿನ ವರ್ಷಗಳ ವಿತ್ತೀಯ ಸುಧಾರಣೆಗಳು **ಕರ್ನಾಟಕದಲ್ಲಿ ಆರ್ಥಿಕ ಸ್ಥಿರತೆಯನ್ನು ತಂದಿವೆ.** ರಾಜ್ಯದ ಬಹುತೇಕ ತೆರಿಗೆಗಳು ತಮ್ಮ ಆಯವ್ಯಯ ಗುರಿಯನ್ನು ಸಾಧಿಸಿವೆ. 2005-06 ನೇ ಸಾಲಿಗೆ ರಾಜ್ಯದ ಸ್ವಂತ ತೆರಿಗೆ ಆದಾಯದ ಪರಿಷ್ಕೃತ ಅಂದಾಜು 19504.80 ಕೋಟಿ ರೂ.ಗಳಾಗಿದ್ದು ಆಯವ್ಯಯ ಅಂದಾಜಿನ 18680.16 ಕೋಟಿ ರೂ.ಗಳಿಗೆ ಹೋಲಿಸಿದರೆ ಇದು ಏರಿಕೆ ಕಂಡಿದೆ. **ಈ ಪ್ರಗತಿಗೆ ರಾಜ್ಯ ಅಬಕಾರಿ** ತೆರಿಗೆಯ 3375 ಕೋಟಿ ರೂ.ಗಳ ಕೊಡುಗೆ ಪ್ರಮುಖವಾಗಿದ್ದು, ಇದು ಆಯವ್ಯಯ ಅಂದಾಜಿನ 2997 ಕೋಟಿ ರೂ.ಗಳಿಗಿಂತ ಹೆಚ್ಚಾಗಲಿದೆ. **ಮೋಟಾರು ವಾಹನ** ತೆರಿಗೆಯ ಪರಿಷ್ಕೃತ ಅಂದಾಜು 1218 ಕೋಟಿ ರೂ.ಗಳಾಗಲಿದ್ದು ಆಯವ್ಯಯ ಅಂದಾಜಿನ 1180 ಕೋಟಿ ರೂ.ಗಳಿಗಿಂತ ಹೆಚ್ಚಾಗಲಿದೆ. ವ್ಯಾಟ್ ಅನುಷ್ಠಾನದಿಂದ ಈವರೆಗೆ ಉಂಟಾಗಿರುವ ನಷ್ಟದ ಬಾಬ್ತು ಒಟ್ಟು 1041 ಕೋಟಿ ರೂ.ಗಳಾಗಿದೆ. ಇದರಲ್ಲಿ ಈವರೆಗೆ 251.6 ಕೋಟಿ ರೂ.ಗಳ ಪರಿಹಾರವನ್ನು ಭಾರತ ಸರ್ಕಾರ ನೀಡಿದೆ. ಬಾಕಿ ನಷ್ಟದ ಹಣವು ಶೀಘ್ರದಲ್ಲಿಯೇ ಬರಲಿದೆ. ವ್ಯಾಟ್ ಅನುಷ್ಠಾನದಿಂದ ಆಗುತ್ತಿರುವ ನಷ್ಟವು

ನಿರೀಕ್ಷಿತವಾಗಿದ್ದು, ಮುಂದಿನ ಎರಡು ವರ್ಷಗಳಲ್ಲಿ ಇದು ಸುಧಾರಣೆಗೊಂಡು ಸ್ಥಿರಗೊಳ್ಳಲಿದೆ.

14. ಈ ವರ್ಷದ ಆಯವ್ಯಯ ವೆಚ್ಚಗಳ ನಂತರವೂ ರಾಜ್ಯದ ರಾಜಸ್ವ ಖಾತೆಯಲ್ಲಿ ಉಳಿಕೆಯಾಗಲಿದೆ. ತತ್ಪರಿಣಾಮವಾಗಿ ವಿತ್ತೀಯ ಕೊರತೆಯು ಒಟ್ಟು ರಾಜ್ಯ ಆಂತರಿಕ ಉತ್ಪನ್ನದ ಶೇ.3 ಕ್ಕಿಂತ ಕಡಿಮೆಯಾಗಲಿದೆ. ಇದು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಕಾಯಿದೆಯಲ್ಲಿ ನಿಗದಿಪಡಿಸಿರುವ ಗುರಿಗೆ ಅನುಗುಣವಾಗಿದೆ. ಈ ವಿತ್ತೀಯ ಗುರಿಸಾಧನೆಗೆ ಹನ್ನೊಂದನೆ ಹಣಕಾಸು ಆಯೋಗದ 65 ಕೋಟಿ ರೂ.ಗಳ ಪ್ರೋತ್ಸಾಹಧನ ರಾಜ್ಯಕ್ಕೆ ದೊರೆತಿದೆ. ಇದರ ಜೊತೆಗೆ ಹನ್ನೆರಡನೆ ಹಣಕಾಸು ಆಯೋಗವು ಸೂಚಿಸಿದ್ದ ಸಾಲಗಳ ಒಗ್ಗೂಡಿಕೆ ಸೌಲಭ್ಯದಿಂದ 309 ಕೋಟಿ ರೂ.ಗಳು ರಾಜ್ಯಕ್ಕೆ ದಕ್ಕಿದೆ. ಇದರಿಂದ ರಾಜ್ಯಕ್ಕೆ 2005-06 ನೇ ಆರ್ಥಿಕ ವರ್ಷದಲ್ಲಿ 374 ಕೋಟಿ ರೂ.ಗಳ ನಿವ್ವಳ ಅನುಕೂಲ ಲಭ್ಯವಾಗಿದೆ.

15. ಇದಲ್ಲದೆ ಮುಂದಿನ ವರ್ಷಗಳಲ್ಲಿ ಕರ್ನಾಟಕವು ರಾಜಸ್ವ ಕೊರತೆಯನ್ನು ನಿವಾರಿಸಿಕೊಂಡು ವಿತ್ತೀಯ ಕೊರತೆಯನ್ನು ರಾಜ್ಯ ಆಂತರಿಕ ಉತ್ಪನ್ನದ ಶೇ. 3 ಕ್ಕಿಂತ ಕಡಿಮೆ ಮಟ್ಟದಲ್ಲಿ ಹೊಂದಿಸಿಕೊಂಡಲ್ಲಿ 12ನೇ ಹಣಕಾಸು ಆಯೋಗವು ಸೂಚಿಸಿರುವ ಪ್ರೋತ್ಸಾಹ ಕ್ರಮಗಳಲ್ಲಿ ಒಂದಾದ ಸಾಲಮನ್ನಾ ಸೌಲಭ್ಯ ಪಡೆಯಲಿದೆ. 2006-07 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯವು 358 ಕೋಟಿ ರೂ.ಗಳ ಸಾಲ ಮರುಪಾವತಿ ಮಾಡಬೇಕಾಗಿರುತ್ತದೆ. 2006-07 ರ ಅಂತ್ಯಕ್ಕೆ ರಾಜ್ಯವು ತನ್ನ ವೆಚ್ಚ ನಿಯಂತ್ರಿಸಿಕೊಂಡು ವಿತ್ತೀಯ ಗುರಿ ಸಾಧನೆ ಮಾಡಿದಲ್ಲಿ ಒಟ್ಟು 358 ಕೋಟಿ ರೂ.ಗಳ ಸಾಲವನ್ನು ಮರುಪಾವತಿ ಮಾಡುವ ಅಗತ್ಯವಿರುವುದಿಲ್ಲ.

16. ಬಂಡವಾಳ ಹೂಡಿಕೆದಾರರಿಗೆ ಮಾಹಿತಿ ನೀಡುವ ರಾಷ್ಟ್ರಮಟ್ಟದ ಶ್ರೇಣಿ ನೀಡಿಕೆ ಏಜೆನ್ಸಿಯಾದ 'ಇಕ್ರಾ' ಕರ್ನಾಟಕ ರಾಜ್ಯಕ್ಕೆ 'ಅತ್ಯುತ್ತಮ' [AAA-] ಶ್ರೇಣಿ ನೀಡಿದೆ. ಈ ಶ್ರೇಣಿ ಇದುವರೆಗೂ ಯಾವ ರಾಜ್ಯಕ್ಕೂ ಲಭಿಸಿರುವುದಿಲ್ಲ.

**ವಿತ್ತೀಯ ಸುಧಾರಣೆಗಳು**

17. ವಿತ್ತೀಯ ಸುಧಾರಣೆಯ ಹಾದಿಯಲ್ಲಿ ರಾಜ್ಯವು ಕಳೆದ ಐದು ವರ್ಷಗಳಲ್ಲಿ ಹಲವಾರು ತೆರಿಗೆ ಮತ್ತು ವೆಚ್ಚಗಳಲ್ಲಿ ಸುಧಾರಣೆಗಳನ್ನು ಜಾರಿಗೆ ತಂದಿದೆ. ಆದ್ದರಿಂದ ನಾನು **ವಿತ್ತೀಯ ಸುಧಾರಣೆಯ ಹಾದಿಯಲ್ಲಿ ಮುನ್ನಡೆಯುವುದನ್ನು ಪ್ರಸ್ತಾಪಿಸುತ್ತಿದ್ದೇನೆ.** ಈ ನಿಟ್ಟಿನಲ್ಲಿ ಹಲವಾರು ತೆರಿಗೆ ಸುಧಾರಣೆಗಳನ್ನು ಜಾರಿಗೆ ತರಲು ನಾನು ಉದ್ದೇಶಿಸಿದ್ದು ಅವುಗಳನ್ನು ನನ್ನ ಭಾಷಣದ ಎರಡನೆ ಭಾಗದಲ್ಲಿ ಪ್ರಸ್ತಾಪಿಸುತ್ತೇನೆ.

18. ಸಂಪನ್ಮೂಲ ಸಂಗ್ರಹದಲ್ಲಿ ಹೆಚ್ಚಳ, ತೆರಿಗೆ ಸೋರಿಕೆಗೆ ತಡೆ ಮತ್ತು ಶೇ.5 ರಷ್ಟು ಯೋಜನೇತರ ವೆಚ್ಚವನ್ನು ಕಡಿತಗೊಳಿಸುವುದು ನಮ್ಮ ಮೂರು ಮುಖ್ಯ ಆದ್ಯತೆಗಳಾಗಿವೆ. ಈ ಬಗ್ಗೆ ಎರಡು ತಿಂಗಳಲ್ಲಿ ಖಚಿತ ಕ್ರಿಯಾ ಯೋಜನೆ ಸಿದ್ದಪಡಿಸಲು ತಜ್ಞರ ಕಾರ್ಯಪಡೆಯೊಂದನ್ನು ನೇಮಿಸಲಾಗುವುದು.

19. **ಪಿಂಚಣಿ ಪಾವತಿಗಳು** ನಮ್ಮ ರಾಜ್ಯದ ಯೋಜನಾ ವೆಚ್ಚಗಳ ಪ್ರಮುಖ ಭಾಗವಾಗಿವೆ. ಆದ್ದರಿಂದ ರಾಜ್ಯವು ಹೊಸ ನೇಮಕಾತಿ ಸಂದರ್ಭದಲ್ಲಿ **'ನಿಗದಿತ ಕೊಡುಗೆ ಯೋಜನೆ'ಗೆ** ವರ್ಗಾವಣೆಗೊಳ್ಳಲು ನಿರ್ಧರಿಸಿದೆ. ಈ ಯೋಜನೆಯಡಿ ಪಿಂಚಣಿ ಪಾವತಿಯನ್ನು ಸಿಬ್ಬಂದಿ ಮತ್ತು ಸರ್ಕಾರಗಳೆರಡೂ ವಂತಿಗೆ ನೀಡಿದ ನಿಧಿಯಿಂದ ಭರಿಸಲಾಗುತ್ತದೆ.

ಈ ವಿಧಾನದಿಂದ ಸಿಬ್ಬಂದಿಗಳ ಪಿಂಚಣಿ ಪಾವತಿಯ ಜವಾಬ್ದಾರಿಯು ಮುಂದಿನ ಪೀಳಿಗೆಗೆ ವರ್ಗಾವಣೆಯಾಗುವುದಿಲ್ಲ.

20. ಕರ್ನಾಟಕ ಸರ್ಕಾರಿ ಸಾಲಗಳ ಮೇಲಿನ ಖಾತರಿ ಕಾಯಿದೆ 1999 ಜಾರಿಯಲ್ಲಿದೆ. ಸಾದಿಲ್ವಾರು ಹೊಣೆಗಾರಿಕೆಗಳನ್ನು ನಿರ್ವಹಿಸುವ ಸಂಬಂಧ ವಿವರವಾದ ವಿಧಿ ವಿಧಾನಗಳನ್ನು ಈ ಕಾಯಿದೆಯಡಿ ಮುಂದಿನ ಆರ್ಥಿಕ ವರ್ಷದಲ್ಲಿ ರೂಪಿಸಲಾಗುವುದು.

21. ಆಯವ್ಯಯ ನಿಯಂತ್ರಣ ಪದ್ಧತಿಯನ್ನು ಮುಂದಿನ ಆರ್ಥಿಕ ವರ್ಷದಿಂದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಕೂಡ ವಿಸ್ತರಿಸಲು ನಾನು ಉದ್ದೇಶಿಸಿದ್ದೇನೆ. ಇದರಿಂದ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ವ್ಯವಹಾರಗಳಲ್ಲಿ ಆಯವ್ಯಯ ನಿಷ್ಠೆಯನ್ನು ಸಾಧಿಸಬಹುದಾಗಿದೆ.

22. ಸರ್ಕಾರಿ ಅನುದಾನ ಪಡೆಯುವ ಶಿಕ್ಷಣ ಸಂಸ್ಥೆಗಳು ಹಾಗೂ ವಸತಿ ಶಾಲೆಗಳ ಗುಣಮಟ್ಟವನ್ನು ಮರುಪರಿಶೀಲನೆ ಮಾಡಲು ಸರ್ಕಾರವು ನಿರ್ಧರಿಸಿದೆ. ಅನುದಾನಿತ ಸಂಸ್ಥೆಗಳಿಗೆ ನೀಡುವ ಸಹಾಯಧನದಿಂದ ಸಮಾಜಕ್ಕೆ ದೊರಕುವ ಫಲಶ್ರುತಿ ಆಧಾರದ ಮೇಲೆ ಅನುದಾನ ನೀಡುವ ಪದ್ಧತಿಯನ್ನು ಜಾರಿಗೊಳಿಸುವುದರ ಬಗ್ಗೆ ಚಿಂತನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

23. ಪ್ರಸ್ತುತ ಜಾರಿಯಲ್ಲಿರುವ ಆಸ್ತಿ ನೋಂದಣಿ ವ್ಯವಸ್ಥೆಯು ಆಸ್ತಿ ಮೇಲಿನ ಹಕ್ಕನ್ನು ಸಂಪೂರ್ಣವಾಗಿ ಖಾತರಿಪಡಿಸುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಆದ್ದರಿಂದ ಆಸ್ತಿ ಮೇಲಿನ ಹಕ್ಕನ್ನು ಖಾತರಿಪಡಿಸುವ ಅಥವಾ ಹಕ್ಕನ್ನು ಗುರುತಿಸಿ ವಿಮೆ ಮಾಡುವ ವಿಧಾನವೊಂದನ್ನು ರೂಪಿಸುವ ಅಗತ್ಯವಿದೆ. ಈ ದಿಶೆಯಲ್ಲಿ ಆಸ್ತಿ ಹಕ್ಕನ್ನು ಖಾತರಿಗೊಳಿಸುವ

ಯೋಜನೆಯನ್ನು ರೂಪಿಸಿ, ಅನುಷ್ಠಾನ ಮಾಡುವ ಉದ್ದೇಶವನ್ನು ಹೊಂದಿದ್ದೇನೆ. ಇದು ನಗರದ ಆಸ್ತಿ ಖರೀದಿದಾರರಲ್ಲಿ ವಿಶ್ವಾಸವನ್ನು ಮೂಡಿಸುವುದರ ಜೊತೆಗೆ ನೋಂದಣಿ ಸಂಖ್ಯೆಯನ್ನು ಗಣನೀಯವಾಗಿ ಏರಿಸುತ್ತದೆ.

24. ವಿತ್ತೀಯ ಸುಧಾರಣೆಯ ಭಾಗವಾಗಿ ಇಡೀ ರಾಜ್ಯಕ್ಕೆ ಒಂದು **'ಇ-ಪ್ರಕ್ಯೂರ್‌ಮೆಂಟ್' ಕೇಂದ್ರವನ್ನು ತಕ್ಷಣದಲ್ಲೇ ತೆರೆಯಲಾಗುತ್ತಿದೆ.** ಈ ಕೇಂದ್ರದ ಅನುಕೂಲವನ್ನು ಎಲ್ಲ ಇಲಾಖೆಗಳು ಹಂತಹಂತವಾಗಿ ಬಳಸಿಕೊಳ್ಳುವಂತೆ ಮಾಡಲಾಗುವುದು. ಈ ಉದ್ದೇಶಕ್ಕಾಗಿ ಕೆಟಿಪಿಪಿ ಕಾಯಿದೆಗೆ ಸೂಕ್ತ ತಿದ್ದುಪಡಿ ತರಲಾಗುತ್ತಿದ್ದು, ಈ ಸುಧಾರಣಾ ಕ್ರಮಗಳು ಸರ್ಕಾರಕ್ಕೆ ಸಂಬಂಧಿಸಿದ ಖರೀದಿ ಮತ್ತು ಸಂಗ್ರಹಣೆಗಳಲ್ಲಿ ಉತ್ತಮ ಪಾರದರ್ಶಕತೆ ಮತ್ತು ದಕ್ಷತೆಗೆ ದಾರಿ ಮಾಡಿಕೊಡಲಿವೆ.

25. ಲಿಂಗ ಆಧಾರಿತ (ಜೆಂಡರ್ ಬೇಸಡ್) ಆಯವ್ಯಯವು ಮಹಿಳೆಯರ ಆದ್ಯತೆಯನ್ನು ಗುರುತಿಸಲು ನೆರವಾಗುವುದರ ಜೊತೆಗೆ ಸಾರ್ವಜನಿಕ ವೆಚ್ಚಗಳಲ್ಲಿ ಮಹಿಳೆಯರ ಬಗ್ಗೆ ಸರ್ಕಾರದ ಕಾಳಜಿಯನ್ನು ಬಿಂಬಿಸಲು ಶಕ್ತವಾಗುತ್ತದೆ. ಇದಕ್ಕೆ ವಿಶೇಷ ಗಮನ ನೀಡಲು ಹಣಕಾಸು ಇಲಾಖೆಯಲ್ಲಿ ಲಿಂಗ ಆಧಾರಿತ ಆಯವ್ಯಯ ಕೋಶವನ್ನು ಸ್ಥಾಪಿಸಲಾಗುವುದು. ಈ ಕೋಶವು ಆಯವ್ಯಯದಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಸಂಪನ್ಮೂಲಗಳ ಗಾತ್ರ, ಹಂಚಿಕೆ ಮತ್ತು ವೆಚ್ಚ ಹಾಗೂ ನೀತಿಗಳ ಸೂಕ್ತ ಅಳವಡಿಕೆಯನ್ನು ಗುರುತಿಸುತ್ತದೆ.

**ಈಗ ನಾನು ನನ್ನ ಮುಂಗಡ ಪತ್ರದ ಪ್ರಧಾನ ಅಂಶಗಳನ್ನು ಪ್ರಸ್ತಾಪಿಸುತ್ತೇನೆ.**

- ಸಹಕಾರಿ ಸಂಸ್ಥೆಗಳ ಮೂಲಕ ಶೇ.4 ರ ಬಡ್ಡಿ ದರದಲ್ಲಿ ಕೃಷಿ ಸಾಲ.
- ಕೃಷಿ ಕಾರ್ಮಿಕರಿಗೆ "ಸುವರ್ಣ ಸುರಕ್ಷಾ ಯೋಜನೆ".
- ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ರಸ್ತೆ ನಿರ್ವಹಣೆ ಮತ್ತು ಸುಧಾರಣೆಗೆ 50 ಲಕ್ಷ ರೂ.
- ಶಾಸಕರ ಕ್ಷೇತ್ರನಿಧಿ ಮುಂದುವರಿಕೆ.
- ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿಯ - 82 ಕೋಟಿ ರೂ. ಬಾಕಿ ಮನ್ನಾ.
- ರಾಜ್ಯದ ಎಲ್ಲಾ ಕೆರೆಗಳ ಒತ್ತುವರಿ ತೆರವು, ಗಡಿ ಗುರುತಿಸಿ ರಕ್ಷಣೆಗೆ ಕ್ರಮ.
- 'ಬಸವ ಪುರಸ್ಕಾರ' ಪ್ರಶಸ್ತಿ - 10 ಲಕ್ಷ ರೂ.
- ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ಆದ್ಯತೆ.
- ಬಡ ಕುಟುಂಬಗಳಲ್ಲಿ ಜನಿಸಿದ ಹೆಣ್ಣು ಮಕ್ಕಳ ಭವಿಷ್ಯದ ಭದ್ರತೆಗಾಗಿ "ಭಾಗ್ಯಲಕ್ಷ್ಮಿ" ಯೋಜನೆ.
- ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುವ ಹೆಣ್ಣು ಮಕ್ಕಳಲ್ಲಿ ಆತ್ಮ ವಿಶ್ವಾಸ ಮೂಡಿಸಲು ಪ್ರೇರಣೆ.

- ಪ್ರತಿಭಾವಂತ ಹೆಣ್ಣು ಮಕ್ಕಳನ್ನು ಪ್ರೋತ್ಸಾಹಿಸಲು 'ಕಿತ್ತೂರು ರಾಣಿ ಚೆನ್ನಮ್ಮ' ಪುರಸ್ಕಾರ.
- ಹೊಸ ಪ್ರೌಢಶಾಲೆಗಳು, ಪದವಿಪೂರ್ವ ಕಾಲೇಜುಗಳು, ಪ್ರಥಮ ದರ್ಜೆ ಕಾಲೇಜುಗಳು ಮತ್ತು ಐಟಿಐಗಳ ಸ್ಥಾಪನೆ.
- ಪ್ರತಿಭಾವಂತ ಬಡ ಕುಟುಂಬಗಳ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ಶುಲ್ಕ ಉಚಿತ.
- ಸಾಹಸಿ ಮಕ್ಕಳಿಗೆ 'ಹೊಯ್ಸಳ' ಹಾಗೂ 'ಕೆಳದಿ ಚೆನ್ನಮ್ಮ' ಪ್ರಶಸ್ತಿಗಳು.
- ಪ್ರತ್ಯೇಕ ಗ್ರಾಮೀಣ ಕ್ರೀಡಾ ನಿಧಿ ಸ್ಥಾಪನೆ.
- ಮಹಿಳಾ ಸ್ವಸಹಾಯ ಗುಂಪುಗಳು ಉತ್ಪಾದಿಸುವ ವಸ್ತುಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ.
- ಒಣಭೂಮಿ ಅಭಿವೃದ್ಧಿಗೆ 50 ಸಾವಿರ ಕೃಷಿ ಹೊಂಡಗಳ ನಿರ್ಮಾಣ.
- ರಾಜ್ಯದ ಪ್ರತಿ ಹೋಬಳಿಗೂ ಭೂಮಿ ಯೋಜನೆ ವಿಸ್ತರಣೆ.
- ಬಡ್ಡಿ ಮನ್ನಾ ಅವಧಿ ವಿಸ್ತರಣೆ.
- ಹನಿ ನೀರಾವರಿಗೆ ಶೇ.75 ರಷ್ಟು ಸಹಾಯಧನ ಮತ್ತು ರಾಜ್ಯದಾದ್ಯಂತ ಈ ಸೌಲಭ್ಯ ವಿಸ್ತರಣೆ.
- ದೇಸಿ ಗೋತಳಿ ಸಂರಕ್ಷಣೆಗೆ ಆದ್ಯತೆ.
- ತೋಟಗಾರಿಕೆ ಉತ್ಪನ್ನಗಳ ರಫ್ತು ಹೆಚ್ಚಿಸಲು ಪ್ರೋತ್ಸಾಹ.

- ಮಾರುಕಟ್ಟೆ ಮಧ್ಯ ಪ್ರವೇಶಕ್ಕೆ ಆವರ್ತ ನಿಧಿಯಲ್ಲಿ ಹೆಚ್ಚಳ.
- ಜೈವಿಕ ಇಂಧನದ ಅಭಿವೃದ್ಧಿಗೆ ಹೆಚ್ಚು ಅನುದಾನ.
- 39 ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಕ್ರಮ.
- ನೀರಾವರಿ ಕಾಮಗಾರಿಗಳ ಬಜೆಟ್ ಅನುದಾನ ಶೇ.44 ರಷ್ಟು ಹೆಚ್ಚಳ.
- ದುರ್ಬಲ ವರ್ಗದ ಏಳಿಗೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ಬಜೆಟ್ ಬೆಂಬಲ.
- ಗಂಗಾ ಕಲ್ಯಾಣ ಯೋಜನೆಯ ಘಟಕ ವೆಚ್ಚದಲ್ಲಿ ಏರಿಕೆ.
- ಭೂ ಖರೀದಿಗೆ ಹೆಚ್ಚಿನ ಅನುದಾನ.
- ದುರ್ಬಲ ವರ್ಗಗಳ ಮಕ್ಕಳ ವಿದ್ಯಾಭ್ಯಾಸಕ್ಕೆ 110 ಹಾಸ್ಟೆಲ್ ಮಂಜೂರು.
- ಪರಿಶಿಷ್ಟ ವರ್ಗದ ಕಲ್ಯಾಣಕ್ಕೆ ಪ್ರತ್ಯೇಕ ಅಭಿವೃದ್ಧಿ ನಿಗಮ.
- ಅಂಬೇಡ್ಕರ್ ಅಭಿವೃದ್ಧಿ ನಿಗಮ, ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅನುದಾನದಲ್ಲಿ ಗಣನೀಯ ಏರಿಕೆ.
- ಆಶ್ರಯ ಯೋಜನೆಯಡಿ ಘಟಕ ವೆಚ್ಚದಲ್ಲಿ ಏರಿಕೆ.
- ನೇಕಾರರಿಗೆ ಮತ್ತು ಮೀನುಗಾರರಿಗೆ ಪ್ರತ್ಯೇಕ ಆಶ್ರಯ ಯೋಜನೆ.
- ನೇಕಾರರಿಗೆ ಹೆಚ್ಚಿನ ವಿದ್ಯುತ್ ಸಹಾಯ ಧನ.

- ದೇವರದಾಸಿಮಯ್ಯ ಪೀಠ ಸ್ಥಾಪನೆ.
- ಮೀನುಗಾರರಿಗೆ ನೀಡುವ ರಿಯಾಯ್ತಿ ದರದ ಡೀಸಲ್ ಪ್ರಮಾಣದಲ್ಲಿ ಹೆಚ್ಚಳ.
- ಅಂಗವಿಕಲರ ಮತ್ತು ವಿಧವೆಯರ ಮಾಸಾಶನ ಹೆಚ್ಚಳ.
- ನಿರ್ಮಾಣ ಕ್ಷೇತ್ರದ ಕಾರ್ಮಿಕರ ಕಲ್ಯಾಣಕ್ಕೆ ಕಾಯ್ದೆ.
- ಪ್ರವಾಸೋದ್ಯಮ ಅಭಿವೃದ್ಧಿಗೆ ಬಜೆಟ್‌ನಲ್ಲಿ ಹೆಚ್ಚು ಬೆಂಬಲ.
- ಸಹಕಾರಿ ಕ್ಷೇತ್ರದ ಎಲ್ಲಾ ಸದಸ್ಯರಿಗೆ ಯಶಸ್ವಿನಿ, ಆರೋಗ್ಯ ಯೋಜನೆ.
- 'ಪುರ' ಯೋಜನೆಯ ಅನುಷ್ಠಾನ.
- ಆರು ನೂತನ ವೈದ್ಯಕೀಯ ಕಾಲೇಜುಗಳನ್ನು ಪೂರ್ಣಗೊಳಿಸುವುದು.
- ಕರ್ನಾಟಕ ಸಂಸ್ಕೃತಿ ಸಂರಕ್ಷಣಾ ಪ್ರಾಧಿಕಾರದ ರಚನೆ.
- ಬಸವ ಕಲ್ಯಾಣ ಮತ್ತು ಕಾಗಿನೆಲೆ ಕ್ಷೇತ್ರಗಳ ಅಭಿವೃದ್ಧಿಗೆ ಹೆಚ್ಚು ಹಣ.
- ರಾಷ್ಟ್ರಕವಿ ಪ್ರಶಸ್ತಿ-ಸುವರ್ಣ ಕರ್ನಾಟಕ ವರ್ಷದಲ್ಲಿ ಪುನರಾರಂಭ.
- ಜನರಲ್ ತಿಮ್ಮಯ್ಯನವರು ಹುಟ್ಟಿದ ಮನೆ ಸ್ಮಾರಕವಾಗಿ ಪರಿವರ್ತನೆ.
- ಸುವರ್ಣ ಕರ್ನಾಟಕ ಆಚರಣೆಗೆ ಅದ್ದೂರಿಯ ಸಿದ್ಧತೆ.

## ಕೃಷಿ ಮತ್ತು ರೈತರು

*ಬಡಗಿ ಬೇಸಾಯಿ ಕರ್ಮಿಗರೇನು ಯೋಗಿಗಳೊ!*
*ಮುಡುಪವರ ಮನಸೆಲ್ಲ ಕೈಯ ದುಡಿತಕ್ಕೆ*
*ಬಿಡುವಿರದು ಬಣಗು ಚಿಂತೆಗೆ, ಬುತ್ತಿಹಂಗಿರದು*
*ಕಡಿದಲ್ಲವರ್ಗೆ ಬಾಳ್ - ಮಂಕುತಿಮ್ಮ*

26. ಡಿ.ವಿ.ಜಿ. ಅವರು ತಮ್ಮ "ಮಂಕುತಿಮ್ಮನ ಕಗ್ಗ" ದಲ್ಲಿ ಸ್ವಾವಲಂಬಿ ಮತ್ತು ಸ್ವಾಭಿಮಾನಿಗಳಾದ ಬಡಗಿ, ಬೇಸಾಯಗಾರ ಮೊದಲಾದ ಶ್ರಮಿಕ ವರ್ಗದ ಬಗ್ಗೆ ಕಟ್ಟಿರುವ ಈ ಕವಿತೆ ಬಹು ಅರ್ಥಪೂರ್ಣ.

27. ಮುಂಗಡ ಪತ್ರವನ್ನು ಸಿದ್ದಪಡಿಸುವಾಗ ನನ್ನ ಚಿತ್ತದಲ್ಲಿ ನಾಡಿಗೆ ಅನ್ನ ನೀಡುವ ನೇಗಿಲಯೋಗಿಯ ಚಿತ್ತಾರ ಮೂಡಿತ್ತು. ಒಬ್ಬ ರೈತನ ಮಗನಾಗಿ, ರೈತಪರ ಹೋರಾಟಗಳಲ್ಲಿ ಸಕ್ರಿಯವಾಗಿದ್ದ ನಾನು ರೈತಾಪಿ ಜನತೆಯ ನೋವು ನಲಿವುಗಳ ನಾಡಿಮಿಡಿತವನ್ನು ಬಲ್ಲೆ. ಕುಶಲ ಕರ್ಮಿಗಳು ಇಂದು ಎದುರಿಸುತ್ತಿರುವ ಬಹುವಿಧ ಸಮಸ್ಯೆಗಳ ಅರಿವು ನನಗಿದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ರೈತಾಪಿ ಜನ ಬಹುಮುಖಿ ಸಂಕಷ್ಟಕ್ಕೊಳಗಾಗಿದ್ದಾರೆ. ಮಳೆ ಬೆಳೆ ವೈಫಲ್ಯ, ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದಾದ ನಷ್ಟ ಮೊದಲಾದ ಕಾರಣಗಳಿಗೆ ಬೇಸತ್ತು ಹಲವರು ಆತ್ಮಹತ್ಯೆಗೆ ಮುಂದಾಗಿದ್ದು ದುಃಖಕರ ಸಂಗತಿ. ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರು ಲೇವಾದೇವಿದಾರರ ಕಪಿ ಮುಷ್ಠಿಯಲ್ಲಿ ಸಿಲುಕಿ ನಲುಗಿಹೋಗಿದ್ದಾರೆ.

*ರೈತರ ಸಂಕಷ್ಟಗಳನ್ನು ನೋಡುವಾಗ ನನಗೆ ತೆಲುಗಿನ ಖ್ಯಾತ ದರ್ಶನ ಕವಿ ನಗ್ನ ಮುನಿಯ ಕವನವೊಂದು ನೆನಪಾಗುತ್ತಿದೆ.*

***ಹೊತ್ತು ಮೇಲೇರುವ ಮೊದಲೇ***
***ಹೆಗಲಮೇಲೆ ನೇಗಿಲು ಹೊತ್ತು,***
***ಸೋತು ಸೊರಗಿದ ಎತ್ತುಗಳು ಹಿಂಬಾಲಿಸುತಿರಲು***
***ಹೊಲದೆಡೆಗೆ ನಡೆವ ಪ್ರತಿರೈತನೂ ನನಗೆ***
***ಶಿಲುಬೆ ಹೊತ್ತ ಜೀಸಸ್‌ನಂತೆ ಕಾಣುತ್ತಾನೆ.***

28. ನಾನು 2006-07 ರ ಮುಂಗಡ ಪತ್ರವನ್ನು ಅಂತಿಮ ಗೊಳಿಸುವುದಕ್ಕೆ ಮುಂಚೆ ಖ್ಯಾತ ಕೃಷಿ ವಿಜ್ಞಾನಿಗಳು, ಆರ್ಥಿಕ ತಜ್ಞರು, ರೈತ ಮುಖಂಡರು, ಸ್ವಯಂ ಸೇವಾ ಸಂಸ್ಥೆಗಳ ಪ್ರಮುಖರೊಡನೆ ಚರ್ಚಿಸಿ ಅವರ ಸಲಹೆಗಳನ್ನು ಪರಿಗಣಿಸಿದ್ದೇನೆ. ನನ್ನ ಸರ್ಕಾರವು ಕೃಷಿಯಲ್ಲಿ ತ್ವರಿತ ಬೆಳವಣಿಗೆ ಸಾಧಿಸಲು **'ಪಂಚಸೂತ್ರ' ಎನ್ನುವ ನೂತನ ಕಾರ್ಯಕ್ರಮವನ್ನು ಜಾರಿಗೊಳಿಸಲಿದೆ.** ಈ ಸೂತ್ರದ ಅಂಶಗಳೆಂದರೆ ಮಣ್ಣಿನ ಆರೋಗ್ಯದ ಸಂರಕ್ಷಣೆ ಮತ್ತು ಸುಧಾರಣೆಗೆ ಕ್ರಮ, ನೀರು ಮತ್ತು ಕಿರುನೀರಾವರಿಗೆ ವಿಶೇಷವಾಗಿ ಸಂಬಂಧಿಸಿದಂತೆ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಸಕಾಲದಲ್ಲಿ ಸಾಲದ ಲಭ್ಯತೆ, ಕೊಯ್ಲಿನ ನಂತರದ ಸಂರಕ್ಷಣೆ, ಮತ್ತು ಪ್ರಯೋಗಾಲಯದಿಂದ ರೈತರ ಜಮೀನಿಗೆ ತಂತ್ರಜ್ಞಾನದ ವರ್ಗಾವಣೆ.

29. **ಕೃಷಿ ಆದಾಯ ತೆರಿಗೆ ಪಾವತಿಯಿಂದ ರೈತರಿಗೆ ವ್ಯಕ್ತಿಗತ ವಿನಾಯಿತಿ ನೀಡಲು ಪ್ರಸ್ತಾವಿಸುತ್ತಿದ್ದು ಇನ್ನು ಮುಂದೆ ಈ ಕಾಯಿದೆಯು ಕೇವಲ ಸಂಘ ಸಂಸ್ಥೆಗಳಿಗೆ ಮಾತ್ರ ಅನ್ವಯವಾಗಲಿದೆ.**

30. ಜಾಗತೀಕರಣ ತಂದೊಡ್ಡಿರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ನಮ್ಮ ರೈತರನ್ನು ಸಜ್ಜುಗೊಳಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಈ ದಿಶೆಯಲ್ಲಿ ನಮ್ಮ ಸರ್ಕಾರ ಚಿಂತನೆ ನಡೆಸಿದೆ. ನಮ್ಮ

ರೈತರು ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನದ ಯುಕ್ತ ಬಳಕೆ ಮೂಲಕ ಉತ್ಪಾದಕತೆಯನ್ನು ಹೆಚ್ಚಿಸಿಕೊಂಡು ಕೃಷಿ ಉತ್ಪನ್ನಗಳನ್ನು ಯೋಗ್ಯ ಬೆಲೆಗೆ (ಲಾಭದಾಯಕ) ಮಾರಾಟ ಮಾಡಲು ಪೂರಕವಾದ ವ್ಯವಸ್ಥೆ ಕಲ್ಪಿಸಿಕೊಡಲಾಗುವುದು.

31. ನಮ್ಮ ಕೃಷಿ ವ್ಯವಸ್ಥೆಯ ಆಮೂಲಾಗ್ರ ಅಧ್ಯಯನ ಮಾಡಿ ಪುನರ್‌ರಚನೆ ಮತ್ತು ಆಧುನೀಕರಣಕ್ಕೆ ಪೂರಕವಾದ ಶಿಫಾರಸ್ಸುಗಳನ್ನು ನೀಡಲು **"ಕೃಷಿ ತಂತ್ರಜ್ಞರ ಸಮಿತಿ"** ಯನ್ನು ರಚಿಸಲು ಉದ್ದೇಶಿಸಿದ್ದೇನೆ.

32. ಖರೀದಿ ಕಾರ್ಯಾಚರಣೆಗೆಂದೇ ನಿರ್ದಿಷ್ಟವಾಗಿ ಸ್ಥಾಪಿಸಿರುವ ಮಾರುಕಟ್ಟೆ ಆವರ್ತ ನಿಧಿಯನ್ನು ಮತ್ತಷ್ಟು ಬಲಪಡಿಸಲಾಗುವುದು. **ಆವರ್ತ ನಿಧಿಯು ಈಗಿನ 200 ಕೋಟಿ ರೂ.ಗಳಿಂದ 240 ಕೋಟಿ ರೂ.ಗಳಿಗೆ ಏರಿಕೆಯಾಗಲಿದೆ.**

33. ಜೈವಿಕ ಇಂಧನವನ್ನು ಉತ್ತೇಜಿಸುವ ನೂತನ ಅವಕಾಶಗಳನ್ನು ಭಾರತದ ಗೌರವಾನ್ವಿತ ರಾಷ್ಟ್ರಪತಿಗಳು ನಮಗೆ ತೋರಿಸಿದ್ದಾರೆ. ಜತ್ರೋಪ, ಹೊಂಗೆ ಇತ್ಯಾದಿ ಬೆಳೆಗಳ ಮೂಲಕ ಜೈವಿಕ ಇಂಧನಗಳ ಉತ್ಪಾದನೆ ಮತ್ತು ಸಂಸ್ಕರಣೆ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ನಾನು 20 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ. ಇದಕ್ಕಾಗಿ ಅಗತ್ಯ ಆಡಳಿತಾತ್ಮಕ ಸಿಬ್ಬಂದಿ ಮತ್ತು ವ್ಯವಸ್ಥೆಗಳನ್ನು ಕಲ್ಪಿಸಲಾಗುವುದು.

34. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಕೃಷಿ-ಸಂಸ್ಕರಣಾ ಘಟಕಗಳು ಅಗತ್ಯವಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಸಂಸ್ಕರಣಾ ಪಾರ್ಕ್‌ಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ನಾನು 2006-07ನೇ ಸಾಲಿನಲ್ಲಿ 20 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

35. ಬಿತ್ತನೆ ಬೀಜಗಳು, ಪೋಷಕಾಂಶಗಳು ಮತ್ತು ನೀರು ಕೃಷಿಗೆ ಅತ್ಯಗತ್ಯವಾಗಿವೆ. ಈಗ ಜಾರಿಯಲ್ಲಿರುವ ಶೇ.50 ರ ಸಹಾಯಧನವನ್ನು ಶೇ. 75 ಕ್ಕೆ ಏರಿಸಲು ಉದ್ದೇಶಿಸಿದ್ದೇನೆ. ಇದಕ್ಕಾಗಿ ನಾನು 42.50 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

36. ರಾಜ್ಯಾದ್ಯಂತವಿರುವ ರೈತ ಸಂಪರ್ಕ ಕೇಂದ್ರಗಳಲ್ಲಿ ಮಣ್ಣು ಪರೀಕ್ಷಾ ಕಿಟ್‌ಗಳನ್ನು ಇಡಲಾಗುವುದು. ವಿಸ್ತರಣಾ ಕಾರ್ಯಕರ್ತರು ಇದನ್ನು ಬಳಸಿಕೊಂಡು ರೈತರಿಗೆ ಬೆಳೆ ಆಧರಿಸಿ ಸೂಕ್ತ ಮಾಹಿತಿ ನೀಡಬಹುದಾಗಿದೆ. ಈ ಉದ್ದೇಶಕ್ಕಾಗಿ ನಾನು 4.8 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

37. ಸುಸ್ಥಿರ ಬೇಸಾಯಕ್ಕಾಗಿ ಸಾವಯವ ಕೃಷಿಯನ್ನು ಸೂಕ್ತ ತಂತ್ರಜ್ಞಾನವೆಂದು ಗುರುತಿಸಲಾಗುತ್ತಿದೆ. ಆದ್ದರಿಂದ ಸಾವಯವ ಕೃಷಿಯನ್ನು ಉತ್ತೇಜಿಸಲು ನಾನು 8 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

38. ಕೃಷಿ ಯಾಂತ್ರೀಕರಣ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ಸ್ಪರ್ಧೆ ಮೂಡಿಸಲು ಹೆಚ್ಚಿನ ಪ್ರಮಾಣದ ನೆರವಿನ ಅಗತ್ಯವಿದೆ. ಈ ಉದ್ದೇಶಕ್ಕಾಗಿ ನಾನು 30 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ. ಪ್ರತೀ ತಾಲ್ಲೂಕಿಗೆ 10 ಟ್ರ್ಯಾಕ್ಟರ್, 10 ಮಿನಿಟ್ರ್ಯಾಕ್ಟರ್ ಮತ್ತು 20 ಟಿಲ್ಲರ್‌ಗಳನ್ನು ಶೇ 50 ರ ಸಹಾಯಧನದಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಒದಗಿಸಲು ಈ ಮೊತ್ತವನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ.

39. ಹಲವಾರು ಸಣ್ಣ ಮತ್ತು ಅತಿಸಣ್ಣ ರೈತರು ಕೃಷಿ ಚಟುವಟಿಕೆಗಳಿಗೆ ಈಗಲೂ ಎತ್ತು ಹಾಗೂ ಗಾಡಿಗಳನ್ನೇ ಅವಲಂಬಿಸಿದ್ದಾರೆ. ಇವುಗಳನ್ನು ಖರೀದಿಸಲು ಶೇ. 50 ರ ಸಹಾಯಧನದ ಸೌಲಭ್ಯವನ್ನು ಸಣ್ಣ ಮತ್ತು

ಅತಿಸಣ್ಣ ರೈತರಿಗೆ ಒದಗಿಸಲು 5 ಕೋಟಿ ರೂ.ಗಳನ್ನು ನಾನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

**ಜಲಾನಯನ ಅಭಿವೃದ್ಧಿ (ಸುವರ್ಣ ಕೃಷಿ ಹೊಂಡ)**

40. ಜಲಾನಯನ ಅಭಿವೃದ್ಧಿ ಚಟುವಟಿಕೆಗಳು ಸಂಪನ್ಮೂಲಗಳ ಸಂರಕ್ಷಣೆಯ ಪ್ರಯತ್ನವಾಗಿವೆ. ಈ ಕಾರ್ಯಕ್ರಮಗಳು ಸ್ಥಳೀಯ ಜನ ಸಮುದಾಯವನ್ನು ತೊಡಗಿಸಿಕೊಳ್ಳುತ್ತಿದ್ದು ದೀರ್ಘಕಾಲದ ಅನುಕೂಲಗಳನ್ನು ಇದರಿಂದ ನಿರೀಕ್ಷಿಸಬಹುದಾಗಿದೆ. ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ವಿಶ್ಲೇಷಿಸುವ ಅಗತ್ಯವಿದೆ. ಆದ್ದರಿಂದ ಪ್ರಸ್ತುತ ಜಾರಿಯಲ್ಲಿರುವ **ಕಾರ್ಯಕ್ರಮಗಳ ಪರಿಶೀಲನೆ ನಡೆಸಲು ಉನ್ನತಮಟ್ಟದ ಸಮಿತಿ ರಚಿಸಲು ನಾನು** ಉದ್ದೇಶಿಸಿದ್ದೇನೆ.

41. ರಾಜ್ಯದಲ್ಲಿ ಒಣಭೂಮಿ ಅಭಿವೃದ್ಧಿಗೆ ನಮ್ಮ ಸರ್ಕಾರ ಹೆಚ್ಚು ಗಮನ ನೀಡಲಿದೆ. ಒಣಭೂಮಿಯಲ್ಲಿ ಕೃಷಿಗೆ ಸಾಕಷ್ಟು ನೀರು ದೊರೆಯುವಂತೆ ಮತ್ತು ಸಂಕಷ್ಟದ ಪ್ರಮಾಣ ತಗ್ಗಿಸಲು ಸಣ್ಣ ಮತ್ತು ಅತಿಸಣ್ಣ ರೈತರು **"ಮಳೆ ನೀರು ಸುಗ್ಗಿ"** ಪದ್ಧತಿಯನ್ನು ಅನುಸರಿಸಲು ಅನುವಾಗುವಂತೆ **50,000 ಸುವರ್ಣ ಕೃಷಿ ಹೊಂಡಗಳನ್ನು 2006-07 ನೇ ಸಾಲಿನಲ್ಲಿ ನಿರ್ಮಿಸಲು ನಾನು 50 ಕೋಟಿ ರೂ.ಗಳನ್ನು ಒದಗಿಸಲು** ಉದ್ದೇಶಿಸಿದ್ದೇನೆ.

**ತೋಟಗಾರಿಕೆ**

42. ಕೇಂದ್ರ ಸರ್ಕಾರವು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ರಾಜ್ಯ ಸರ್ಕಾರಕ್ಕೆ 85.21 ಕೋಟಿ ರೂ.ಗಳನ್ನು ನೀಡಿದೆ.

ಇದು ನಮಗೆ ಹರ್ಷದಾಯಕ ಸಂಗತಿ. ಇನ್ನು ಮುಂದೆಯೂ ಸಹ ಕೇಂದ್ರ ಸರ್ಕಾರವು ತೋಟಗಾರಿಕೆ ಮಿಷನ್ ಯೋಜನೆಯಡಿ ಹೆಚ್ಚಿನ ಹಣ ಒದಗಿಸುವ ನಿರೀಕ್ಷೆಯಿದ್ದು ರೈತರು ಇದರ ಪೂರ್ಣ ಪ್ರಯೋಜನ ಪಡೆಯಲು ಸಕಲ ಕ್ರಮಗಳನ್ನು ಸರ್ಕಾರವು ಕೈಗೊಳ್ಳಲಿದೆ.

43. ತೋಟಗಾರಿಕೆ ಬೆಳೆಗಳ ಉತ್ಪಾದನೆ ಮತ್ತು ಸಂಸ್ಕರಣೆ ವಲಯದಲ್ಲಿ ಮೂಡುತ್ತಿರುವ ಅವಕಾಶಗಳನ್ನು ಬಳಸಿಕೊಳ್ಳುವ ಅಗತ್ಯವಿದೆ. ಭಾರತದ ಗೌರವಾನ್ವಿತ ರಾಷ್ಟ್ರಪತಿಗಳು, ತೋಟಗಾರಿಕೆ ಬೆಳೆಗಳ ಬೇಸಾಯ ಮತ್ತು ಸಂಸ್ಕರಣೆಗಳ ಬಗ್ಗೆ ಗಮನ ಹರಿಸಬೇಕೆಂದು ಸಲಹೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ತೋಟಗಾರಿಕೆ ಬೆಳೆಗಳ ಸಂಸ್ಕರಣಕ್ಕೆ ಪ್ರೋತ್ಸಾಹ ನೀಡಲು ನಾನು 20 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

44. ಕರ್ನಾಟಕ ಕೃಷಿ ಉತ್ಪನ್ನ ರಫ್ತು ನಿಗಮವು (ಕೆಪೆಕ್) ಕೃಷಿ ಉತ್ಪನ್ನಗಳ ರಫ್ತು ಕಾರ್ಯದಲ್ಲಿ ನಿರತವಾಗಿದೆ. ಕೃಷಿ ರಫ್ತಿಗೆ ಉತ್ತೇಜನ ನೀಡಲು ನಾನು 10 ಕೋಟಿ ರೂ.ಗಳನ್ನು ಮೂಲಭೂತ ಸೌಲಭ್ಯಗಳ ನಿರ್ಮಾಣಕ್ಕಾಗಿ ಅನುದಾನವಾಗಿ ನೀಡಲು ಉದ್ದೇಶಿಸಿದ್ದೇನೆ.

45. ಕರ್ನಾಟಕದಲ್ಲಿ ದ್ರಾಕ್ಷಿ ಬೆಳೆ ವ್ಯಾಪಕವಾಗಿದೆ. ಈ ಸಂಬಂಧ ದ್ರಾಕ್ಷಿ ಮಾರುಕಟ್ಟೆಗೆ ಅನುಕೂಲವಾಗುವಂತೆ ನಾನು 'ದ್ರಾಕ್ಷಾರಸ ಉತ್ಪಾದನಾ ನೀತಿ'ಯನ್ನು ರೂಪಿಸಲು ಉದ್ದೇಶಿಸಿದ್ದೇನೆ.

46. ಹಲವಾರು ತೋಟಗಾರಿಕೆ ಬೆಳೆಗಳ ಬೇಸಾಯಕ್ಕೆ ಉತ್ತೇಜನ ನೀಡಲು ಪ್ರಸ್ತುತ ಜಾರಿಯಲ್ಲಿರುವ ಹನಿ ನೀರಾವರಿ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲು ಉದ್ದೇಶಿಸಿದ್ದೇನೆ. ಇದಕ್ಕಾಗಿ 44 ಕೋಟಿ ರೂ.ಗಳನ್ನು ಒದಗಿಸುತ್ತಿದ್ದು ಈ ಯೋಜನೆಯನ್ನು ತೋಟಗಾರಿಕೆ ಬೆಳೆಗಳ ಕೃಷಿ ಸಂಸ್ಕರಣಾ ಯೋಜನೆಯ ಜೊತೆ ಸಂಯೋಜಿಸಿ

ಜಾರಿಗೊಳಿಸಲಾಗುವುದು. ಕೋಲಾರ ಮತ್ತು ಬಿಜಾಪುರ ಜಿಲ್ಲೆಗಳಿಗೆ ಈಗಿರುವಂತೆ ಶೇ.100 ರ ಸಹಾಯಧನವು ಮುಂದುವರಿಯಲಿದೆ. ಪ್ರಸ್ತುತ ಉಳಿದ ಜಿಲ್ಲೆಗಳಿಗೆ ಶೇ. 50 ರಷ್ಟಿರುವ ಸಹಾಯಧನವನ್ನು ಶೇ. 75ಕ್ಕೆ ಹೆಚ್ಚಿಸಿ ಗರಿಷ್ಠ ಎರಡು ಹೆಕ್ಟೇರ್ ಜಮೀನಿನವರೆಗೆ ನೀಡಲಾಗುವುದು.

47. ರೈತರಿಗೆ ಉತ್ತಮ ಬಿತ್ತನೆ ಸಸಿಗಳನ್ನು ಒದಗಿಸಲು ರಾಜ್ಯಾದ್ಯಂತ ತೋಟಗಾರಿಕೆ ಫಾರಂಗಳನ್ನು ಸ್ಥಾಪಿಸಲಾಗಿದೆ. ಈ **ತೋಟಗಾರಿಕೆ ಫಾರಂಗಳ ಅಭಿವೃದ್ಧಿಗೆ ದೀರ್ಘಕಾಲದ ನೆರವನ್ನು ಒದಗಿಸಲು ನಾನು 5.75 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.**

## ಕೃಷಿ ಸಂಶೋಧನೆ ಮತ್ತು ಶಿಕ್ಷಣ

48. ಕೃಷಿ ಸಂಶೋಧನೆ ಮತ್ತು ಶಿಕ್ಷಣಕ್ಕೆ ಉತ್ತೇಜನ ನೀಡಲು ಹೊಸ ನೀತಿ ರೂಪಿಸಲಾಗುತ್ತಿದ್ದು ಇದರಲ್ಲಿ **ಕೃಷಿ ಮತ್ತು ತೋಟಗಾರಿಕೆ ಕಾಲೇಜುಗಳನ್ನು ಸ್ಥಾಪಿಸಲು ಖಾಸಗಿ ವಲಯಕ್ಕೆ ಪ್ರೋತ್ಸಾಹ ನೀಡಲಾಗುವುದು.**

49. ಸಾವಯವ ಕೃಷಿಯ ಸಂಶೋಧನೆಗೆ ನೆರವು ನೀಡಲು ಶಿವಮೊಗ್ಗದಲ್ಲಿ ಸಾವಯವ ಕೃಷಿ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಲು ನಾನು 2 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

*ರೈತ ಪರ ಕಾರ್ಯಕ್ರಮಗಳನ್ನು ರೂಪಿಸಿ ಮಂಡಿಸುತ್ತಿರುವ ಈ ಸಮಯ*
*ಡೇನಿಯಲ್ ವೆಬ್‌ಸ್ಟರ್ ಹೇಳಿರುವ ಅನುಭವಾಮೃತದ ಮಾತುಗಳನ್ನು*
*ನೆನೆದು ಕೊಳ್ಳುವ ಸಮಯ ಕೂಡ*

*"ರೈತರೇ ಮಾನವ ನಾಗರೀಕತೆಯ ಸ್ಥಾಪಕರು"*

**ಪಶುಸಂಗೋಪನೆ (ದೇಶಿ ಗೋತಳಿ ಸಂರಕ್ಷಣೆ)**

50. ಗೋ ಸಂರಕ್ಷಣೆ ಹಾಗೂ ದೇಸಿ ತಳಿಗಳ ಅಭಿವೃದ್ದಿಗೆ ಆದ್ಯತೆ ನೀಡಲಾಗುವುದು. ಪ್ರತಿ ಜಿಲ್ಲೆಯಲ್ಲಿ 20 ಎಕರೆ ಜಮೀನನ್ನು ದೇಸಿ ತಳಿ ಅಭಿವೃದ್ದಿ ಪಡಿಸುವವರಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲಾಗುವುದು. ಈ ಕಾರ್ಯಕ್ಕಾಗಿ 2006-07 ನೇ ಸಾಲಿನಲ್ಲಿ 2.70 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

51. ಈ ಯೋಜನೆಯ ಫಲಾನುಭವಿಗಳು ಕನಿಷ್ಠ 100 ಹಸುಗಳನ್ನು ಸಾಕುವುದಲ್ಲದೆ ಗೋಮೂತ್ರವನ್ನು ಸಂಗ್ರಹಿಸುವುದು ಕಡ್ಡಾಯ. ಗೋಮೂತ್ರದ ಉಪಯುಕ್ತತೆಯ ಬಗ್ಗೆ ಪಶು ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಸಂಶೋಧನೆ ಕೈಗೊಳ್ಳಲು ಉತ್ತೇಜನ ನೀಡಲಾಗುವುದು.

52. **ಹೊಸ ಪಶುಚಿಕಿತ್ಸಾಲಯಗಳನ್ನು ಸ್ಥಾಪಿಸಲು 8 ಕೋಟಿ ರೂ.ಗಳ ಅನುದಾನವನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.** ಅಲ್ಲದೇ ಪಶುಔಷಧಿಗಳು ಅಗತ್ಯ ಪ್ರಮಾಣದಲ್ಲಿ ಲಭ್ಯವಿರುವಂತೆ ನೋಡಿಕೊಳ್ಳಲು 20 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

53. ಬೆಂಗಳೂರು ಮತ್ತು ಬೀದರ್ ಹೊರತುಪಡಿಸಿದರೆ ರಾಜ್ಯದಲ್ಲಿ ಬೇರೆಲ್ಲಿಯೂ ಪಶುವೈದ್ಯಕೀಯ ಕಾಲೇಜುಗಳು ಇರುವುದಿಲ್ಲ. ಆದರೆ ಪಶುವೈದ್ಯಕೀಯ ಪದವೀಧರರಿಗೆ ತುಂಬಾ ಬೇಡಿಕೆಯಿದ್ದು ನಾನು **ಶಿವಮೊಗ್ಗದಲ್ಲಿ ನೂತನ ಸರ್ಕಾರಿ ಪಶುವೈದ್ಯಕೀಯ ಕಾಲೇಜು** ಆರಂಭಿಸಲು ಉದ್ದೇಶಿಸಿದ್ದು, ಪ್ರಾಥಮಿಕ ವೆಚ್ಚಗಳಿಗೆ ಒಂದು ಕೋಟಿ ರೂ.ಗಳನ್ನು ನಿಗದಿಪಡಿಸಲಿದ್ದೇನೆ.

54. ಕೇಂದ್ರ ನೆರವಿನ ಕಾರ್ಯಕ್ರಮದಡಿಯಲ್ಲಿ 'ಗ್ರಾಮೀಣ ನಿರ್ವಹಣೆ ಮತ್ತು ಆಡಳಿತ ಸಂಸ್ಥೆ'ಯ (IRMA) ಮಾದರಿಯಲ್ಲಿ ರಾಜ್ಯದಲ್ಲಿಯೂ ಸಹ 'ಗ್ರಾಮೀಣ ನಿರ್ವಹಣೆ ಸಂಸ್ಥೆ'ಯನ್ನು ಸ್ಥಾಪಿಸಲು ನೆರವು ನೀಡಲಾಗುವುದು.

55. ಕರ್ನಾಟಕ ಹಾಲು ಒಕ್ಕೂಟ ಮತ್ತು ಜಿಲ್ಲಾ ಹಾಲಿನ ಯೂನಿಯನ್‌ಗಳು ದಕ್ಷಿಣಕರ್ನಾಟಕ ಜಿಲ್ಲೆಗಳಲ್ಲಿ ಮೆಚ್ಚುಗೆಯ ಸಾಧನೆಯನ್ನು ಮಾಡಿವೆ. ಇದೇ ಮಾದರಿಯ ಸಾಧನೆಯನ್ನು ಉತ್ತರಕರ್ನಾಟಕ ಜಿಲ್ಲೆಗಳಲ್ಲಿ ಸಾಧಿಸಲು ಉತ್ತರಕರ್ನಾಟಕದ ಜಿಲ್ಲಾ ಹಾಲು ಯೂನಿಯನ್‌ಗಳನ್ನು ಪುನಶ್ಚೇತನಗೊಳಿಸಿ ಸುಧಾರಣೆಪಡಿಸಲು ಇದು ಸಕಾಲವಾಗಿದೆ. ಈ ಉದ್ದೇಶಕ್ಕಾಗಿ ನಾನು 11 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ. ಈ ಯೋಜನೆಗಳ ಜೊತೆಗೆ ನಾನು ಕೇಂದ್ರ ನೆರವಿನ 'ಮೇವು ಅಭಿವೃದ್ಧಿ ಯೋಜನೆ', 'ಸ್ವಚ್ಛ ಹಾಲು' ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ಇದಕ್ಕಾಗಿ 51.28 ಕೋಟಿ ರೂ.ಗಳನ್ನು ನಿಗದಿಪಡಿಸಲಿದ್ದೇನೆ.

## ಮೀನುಗಾರರ ಕ್ಷೇಮಾಭಿವೃದ್ಧಿ

56. ಮೀನುಗಾರರಿಗೆ ಈ ಆರ್ಥಿಕ ವರ್ಷದಲ್ಲಿ 10,000 ಮನೆಗಳನ್ನು ನಿರ್ಮಿಸಿಕೊಡಲಾಗುವುದು.

57. ಪ್ರಸ್ತುತ ನಾಡದೋಣಿ ನಡೆಸುವವರಿಗೆ 200 ಲೀಟರ್ ಸೀಮೆಎಣ್ಣೆಯನ್ನು ನೀಡುತ್ತಿದ್ದು, ಇದನ್ನು 400 ಲೀಟರ್‌ಗೆ ಏರಿಸಲಾಗುವುದು.

58. ಮೀನುಗಾರಿಕೆ ಯಾಂತ್ರಿಕ ದೋಣಿಗಳಿಗೆ ಈವರೆಗೆ 55 ಸಾವಿರ ಕಿಲೋಲೀಟರ್ ಡೀಸಲ್‌ನ್ನು ಕರ ರಿಯಾಯಿತಿಯಲ್ಲಿ ನೀಡುತ್ತಿದ್ದು, ಇದನ್ನು 70 ಸಾವಿರ ಕಿಲೋಲೀಟರ್‌ಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ.

59. ಮೀನುಗಾರರಿಗೂ ಸಹ ಶೇ. 4 ರಷ್ಟು ಬಡ್ಡಿ ದರದಲ್ಲಿ ಸಾಲ ಕೊಡುವ ವ್ಯವಸ್ಥೆ ಮಾಡಲಾಗುವುದು. ನಗರ ಸಹಕಾರಿ ಬ್ಯಾಂಕುಗಳಲ್ಲಿ ಇವರು ಈ ಸೌಲಭ್ಯವನ್ನು ಪಡೆಯಬಹುದಾಗಿದೆ.

60. ಮೀನುಗಾರಿಕೆಯಲ್ಲಿ ತೊಡಗಿ ಅಪಘಾತ ಹೊಂದಿದಾಗ ಕೊಡುವ ಆಪತ್‌ಧನವನ್ನು 25,000 ರೂ.ಗಳಿಂದ 50,000 ರೂ.ಗಳಿಗೆ ಹೆಚ್ಚಿಸಲಾಗುವುದು.

61. "ಮತ್ಸ್ಯ ಮಹಿಳಾ ಸ್ವಾವಲಂಬನಾ ಯೋಜನೆ" ಯಡಿಯಲ್ಲಿ ಒಂದು ಲಕ್ಷ ಮಹಿಳೆಯರು ಈ ವೃತ್ತಿಯಲ್ಲಿ ನಿರತರಾಗಿದ್ದು, ಇವರಿಗೆ ದುಡಿಯುವ ಬಂಡವಾಳಕ್ಕಾಗಿ ಕಡಿಮೆ ಬಡ್ಡಿ ದರದಲ್ಲಿ ಪ್ರತೀ ತಂಡಕ್ಕೆ ರೂ.10,000 ಗಳನ್ನು ನೀಡಲು ನಿರ್ಧರಿಸಲಾಗಿದೆ.

## ಆಹಾರ ಸುರಕ್ಷೆ

62. ಸಮಾಜದ ದುರ್ಬಲ ವರ್ಗದವರಿಗೆ ಮುಂಬರುವ ವರ್ಷಗಳಲ್ಲಿಯೂ ಆಹಾರ ಸಬ್ಸಿಡಿಯನ್ನು ಮುಂದುವರೆಸಲು ನಾನು ಉದ್ದೇಶಿಸಿದ್ದೇನೆ. ಪ್ರಸ್ತುತ ವರ್ಷದಲ್ಲಿ ಆಹಾರ ಸಬ್ಸಿಡಿಗಾಗಿ ರೂ.720 ಕೋಟಿಗಳನ್ನು ಮೀಸಲಿಡಲಾಗಿದೆ. ಬರುವ ವರ್ಷಗಳಲ್ಲಿ ಈ ಯೋಜನೆಯ ಲಾಭವನ್ನು ಸಂಪೂರ್ಣವಾಗಿ ಯೋಜನಾಬದ್ಧ ಗೊಳಿಸಲಾಗುವುದು ಮತ್ತು ಅವಶ್ಯಕವಿರುವವರಿಗೆ ಹಾಗೂ ಕಡುಬಡತನದಲ್ಲಿರುವವರಿಗೆ ಮಾತ್ರ ಇದರ ಲಾಭ ದೊರೆಯುವಂತೆ

ನೋಡಿಕೊಳ್ಳಲಾಗುವುದು. ಈ ಯೋಜನೆಯ ಕಾರ್ಡ್‌ದಾರರಿಗೆ ಬಯೊಮೆಟ್ರಿಕ್ ಗುರ್ತಿಸುವಿಕೆ ಹೊಂದಿರುವ ಗಣಕೀಕೃತ ಕಾರ್ಡ್‌ಗಳನ್ನು ಒದಗಿಸಲಾಗುವುದು.

**ಕಂದಾಯ, ದತ್ತಿ ಮತ್ತು ಸಾಮಾಜಿಕ ಸುರಕ್ಷೆ**

63. ಅರಣ್ಯ ಭೂಮಿ ಮತ್ತು ಗೋಮಾಳಗಳನ್ನು ಹೊರತುಪಡಿಸಿ ಕೃಷಿ ಉದ್ದೇಶಕ್ಕಾಗಿ ಒತ್ತುವರಿ ಮಾಡಿಕೊಂಡಿರುವ ಎರಡು ಹೆಕ್ಟೇರ್‌ವರೆಗಿನ ಗ್ರಾಮ ಪ್ರದೇಶಗಳಲ್ಲಿನ ಕೃಷಿ ಜಮೀನನ್ನು ಸಕ್ರಮಗೊಳಿಸಲಾಗುವುದು.

64. ಪಹಣಿ ಮತ್ತಿತರ ಭೂದಾಖಲೆಗಳನ್ನು ಭೂಮಿ ಯೋಜನೆಯಡಿ ವಿತರಿಸುತ್ತಿದ್ದು ಪ್ರಸ್ತುತ ತಾಲ್ಲೂಕು ಮಟ್ಟಕ್ಕೆ ಸೀಮಿತವಾಗಿರುವ ಈ ಸೌಲಭ್ಯವನ್ನು ರಾಜ್ಯದ 740 ಹೋಬಳಿಗಳಿಗೂ ವಿಸ್ತರಿಸಲಾಗುವುದು.

65. ಅನಾಥ ವಿಧವೆಯರ ಮತ್ತು ಅಂಗವಿಕಲರ ಅಗತ್ಯಗಳನ್ನು ಪರಿಶೀಲಿಸಿ ಅವರಿಗೆ ನೀಡುತ್ತಿರುವ ವೇತನವನ್ನು ವೃದ್ಧಾಪ್ಯ ವೇತನದಂತೆ ಮಾಸಿಕ 200 ರೂ.ಗಳಿಗೆ ಹೆಚ್ಚಿಸಲಾಗುವುದು. ಇನ್ನು ಮುಂದಿನ ವರ್ಷಗಳಲ್ಲಿ ಈ ಹಣವನ್ನು 3 ತಿಂಗಳಿಗೊಮ್ಮೆ ಬ್ಯಾಂಕ್ ಅಥವಾ ಅಂಚೆ ಕಛೇರಿಗಳ ಮೂಲಕ ಪಾವತಿಸಲಾಗುವುದು.

66. ಗ್ರಾಮೀಣ ಪ್ರದೇಶದಲ್ಲಿನ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ದುಡಿಯುವ ಸದಸ್ಯನು ಆಕಸ್ಮಿಕವಾಗಿ ಮರಣ ಹೊಂದಿದರೆ ಅವನ ಕುಟುಂಬದ ಸದಸ್ಯರಿಗೆ ರಾಷ್ಟ್ರೀಯ ಕುಟುಂಬ ಯೋಜನೆಯಡಿ ರೂ. 10,000ಗಳ ಪರಿಹಾರವನ್ನು ನೀಡಲಾಗುವುದು. ರಾಷ್ಟ್ರೀಯ ಕುಟುಂಬ ನೆರವಿನ ಯೋಜನೆಯಡಿ 20,000ಕ್ಕೂ ಹೆಚ್ಚು ಅರ್ಜಿಗಳು ಐದು ವರ್ಷಗಳಿಂದ ವಿಲೇವಾರಿಯಾಗದೇ ಉಳಿದಿರುತ್ತವೆ.

ಇವುಗಳೆಲ್ಲವನ್ನೂ ವಿಲೇವಾರಿ ಮಾಡುವ ಉದ್ದೇಶಕ್ಕಾಗಿ ನಾನು 20 ಕೋಟಿ ರೂ.ಗಳನ್ನು ರಾಷ್ಟ್ರೀಯ ಕುಟುಂಬ ಯೋಜನೆಗೆ ನೀಡಲು ಉದ್ದೇಶಿಸಿದ್ದೇನೆ.

67. ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿನ ಮೃತರ ಶವಸಂಸ್ಕಾರಕ್ಕಾಗಿ ಅವರ ಹತ್ತಿರದ ಬಂಧುಗಳಿಗೆ 1,000 ರೂ.ಗಳನ್ನು ನೀಡಲು ನಾನು ಉದ್ದೇಶಿಸಿದ್ದೇನೆ. ಈ ಉದ್ದೇಶಕ್ಕಾಗಿ 8 ಕೋಟಿ ರೂಗಳನ್ನು ಹಂಚಿಕೆ ಮಾಡಲಾಗುವುದು.

68. ಪ್ರಕೃತಿ ವಿಕೋಪಗಳಿಂದ ಉಂಟಾಗುವ ಬೆಳೆ ನಷ್ಟಕ್ಕೆ ನೀಡುವ ಪರಿಹಾರವನ್ನು ದ್ವಿಗುಣಗೊಳಿಸಲು ನಾನು ಉದ್ದೇಶಿಸಿದ್ದೇನೆ. ಈ ಪರಿಷ್ಕೃತ ಪರಿಹಾರ ಮೊತ್ತ 1-4-2006 ರಿಂದ ಜಾರಿಯಾಗಲಿದೆ.

69. 'ಆರಾಧನಾ' ಯೋಜನೆಯಡಿಯಲ್ಲಿ ದೇವಸ್ಥಾನಗಳ ಅಭಿವೃದ್ಧಿಗಾಗಿ 2.50 ಲಕ್ಷ ರೂ.ಗಳನ್ನು ನೀಡುತ್ತಿದ್ದು ಇನ್ನು ಮುಂದೆ ಪ್ರತಿ ವಿಧಾನಸಭಾ ಕ್ಷೇತ್ರಗಳಿಗೆ ದೇವಸ್ಥಾನದ ಅಭಿವೃದ್ಧಿಗಾಗಿ ತಲಾ 5 ಲಕ್ಷ ರೂ.ಗಳ ಅನುದಾನ ದೊರೆಯುವಂತೆ ಒಟ್ಟು 11.20 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

70. ಇನಾಂ ರದ್ದತಿ ಕಾಯಿದೆಯಡಿ ನಿಗದಿಪಡಿಸಿರುವ 'ತಸ್ಥಿಕ್' ಮೊತ್ತ ಹಾಗೂ ಭೂ ಸುಧಾರಣೆ ಕಾಯಿದೆಯಡಿ ನಿಗದಿಪಡಿಸಿರುವ 'ವಾರ್ಷಿಕ' ಹಣದ ಮೊತ್ತವು ಕಳೆದ 20-25 ವರ್ಷಗಳಿಂದ ಪರಿಷ್ಕೃತವಾಗಿಲ್ಲ. ಆದ್ದರಿಂದ ನಾನು 'ತಸ್ಥಿಕ್' ಮತ್ತು 'ವಾರ್ಷಿಕ' ಮೊತ್ತವನ್ನು ದ್ವಿಗುಣಗೊಳಿಸಲು ಉದ್ದೇಶಿಸಿದ್ದೇನೆ. ಇವುಗಳ ಮೊತ್ತವು ಕನಿಷ್ಟ 500 ರೂ. ಆಗಿರಬೇಕೆಂದು ನಿಗದಿಪಡಿಸಲು ನಾನು ಉದ್ದೇಶಿಸಿದ್ದೇನೆ. ಈ ಉದ್ದೇಶಕ್ಕಾಗಿ 24.3 ಕೋಟಿ ರೂ.ಗಳನ್ನು ಮೀಸಲಿಡಲಾಗುವುದು.

71. ಮುಜರಾಯಿ ಇಲಾಖಾ ವ್ಯಾಪ್ತಿಯಲ್ಲಿನ ದೇವಾಲಯಗಳ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಸಮಿತಿಯೊಂದನ್ನು ರಚಿಸಲಾಗುವುದು. ತಲಕಾಡು ಪಂಚಲಿಂಗದರ್ಶನವು 12 ವರ್ಷಗಳ ನಂತರ ನವಂಬರ್ 2006ರಲ್ಲಿ ಲಭಿಸಲಿದೆ. ಈ ಉತ್ಸವಕ್ಕೆ ಸರ್ಕಾರವು ಅಗತ್ಯ ಅನುದಾನ ಒದಗಿಸಲಿದೆ.

72. ತಿರುಪತಿಯಲ್ಲಿ ಕರ್ನಾಟಕ ಯಾತ್ರಾರ್ಥಿಗಳ ಅನುಕೂಲಕ್ಕಾಗಿ **ನೂತನ ಕೊಠಡಿಗಳನ್ನು ನಿರ್ಮಿಸಲು ನಾನು 2006-07ನೇ ಸಾಲಿನಲ್ಲಿ 5 ಕೋಟಿ ರೂ.ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ.**

*"ಬೇರೆ ಸಂಸ್ಕೃತಿಯನ್ನು ಪ್ರೀತಿಸು, ಆದರೆ ನಿನ್ನ ಸಂಸ್ಕೃತಿಯಲ್ಲಿ ಜೀವಿಸು".*

***ರಾಷ್ಟ್ರಪಿತ ಮಹಾತ್ಮ ಗಾಂಧೀಜೀಯವರ ಈ ಮಾತು***
***ಬಹು ಅರ್ಥಪೂರ್ಣ ಮತ್ತು ಸಂಸ್ಕೃತಿ ಸಂರಕ್ಷಣೆಗೆ ಸ್ಫೂರ್ತಿ.***

73. ಕರ್ನಾಟಕದಲ್ಲಿ ನೂರಾರು ಇತಿಹಾಸ ಪ್ರಸಿದ್ಧ ದೇವಾಲಯಗಳಿವೆ. ನಮ್ಮ ಸಂಸ್ಕೃತಿಯ ಸಂಕೇತಗಳಾಗಿರುವ ಐತಿಹಾಸಿಕ ದೇವಾಲಯಗಳ ಪುನರುಜ್ಜೀವನ ಮತ್ತು ಸಂರಕ್ಷಣೆ ಮತ್ತು ಅವುಗಳನ್ನು ಪ್ರವಾಸೋದ್ಯಮ ಅಭಿವೃದ್ಧಿಗೆ ಸಾಧನವಾಗಿ ಬಳಸಿಕೊಳ್ಳಲು ನಮ್ಮ ಸರ್ಕಾರ ನಿರ್ಧರಿಸಿದೆ. ಈ ಕಾರ್ಯಕ್ಕೆ ತಜ್ಞರುಳ್ಳ **'ಕರ್ನಾಟಕ ಸಂಸ್ಕೃತಿ ಸಂರಕ್ಷಣಾ ಪ್ರಾಧಿಕಾರ'** ರಚಿಸಲಾಗುವುದು. ಕೇಂದ್ರ ಸರ್ಕಾರ ಮತ್ತು ಯುನೆಸ್ಕೋನಂತಹ ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಆರ್ಥಿಕ ಸಹಾಯ ಪಡೆದು ರಾಜ್ಯದ ಐತಿಹಾಸಿಕ ದೇವಾಲಯಗಳ ಸಂರಕ್ಷಣೆಗೆ ಬಳಸಲಾಗುವುದು. ನಂದಿಬೆಟ್ಟದ ಬಳಿಯಿರುವ ಭೋಗನಂದೀಶ್ವರ ದೇವಸ್ಥಾನ, ಅಕ್ಕಮಹಾದೇವಿಯವರ ಜನ್ಮಸ್ಥಳವಾದ ಉಡುತಡಿ, ಅಲ್ಲಮಪ್ರಭುಗಳ ಬಳ್ಳಿಗಾವಿ..... ಇತ್ಯಾದಿ ದೇವಸ್ಥಾನಗಳನ್ನು ಸಂರಕ್ಷಿಸಲಾಗುವುದು.

ಕಂದಾಯ ಇಲಾಖೆ ಮೂಲಕ ಕೈಗೊಳ್ಳುವ ಈ ಕಾರ್ಯಕ್ಕೆ ರಾಜ್ಯ ಸರ್ಕಾರದ ವತಿಯಿಂದ 5 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗುವುದು.

74. ಕೂಡಲಸಂಗಮದ ಮಾದರಿಯಲ್ಲಿ ಜಗಜ್ಯೋತಿ ಬಸವೇಶ್ವರ ರವರ ಕಾರ್ಯಕ್ಷೇತ್ರವಾದ ಐತಿಹಾಸಿಕ ಬಸವಕಲ್ಯಾಣವನ್ನು ಅಭಿವೃದ್ಧಿಪಡಿಸಲು 20 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಬಸವೇಶ್ವರರ ಜನ್ಮಸ್ಥಳವಾದ ಬಸವನಬಾಗೇವಾಡಿಯನ್ನು ಅಭಿವೃದ್ಧಿಪಡಿಸುವ ಹೊಣೆಯನ್ನು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಿಕೊಡಲಾಗುವುದು.

75. ಕಾಗಿನೆಲೆ ಕನಕ ಪೀಠದ ಅಭಿವೃದ್ಧಿಗೆ 3 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

76. ಆದ್ಯ ವಚನಕಾರ ದೇವರದಾಸೀಮಯ್ಯ ಪೀಠವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲಾಗುವುದು.

**77. ಕರ್ನಾಟಕದಿಂದ ಮಾನಸ ಸರೋವರಕ್ಕೆ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳ ಅನುಕೂಲಕ್ಕಾಗಿ 25 ಲಕ್ಷ ರೂ.ಗಳನ್ನು ಒದಗಿಸಲು ನಾನು ಉದ್ದೇಶಿಸಿದ್ದೇನೆ.**

78. ನೂತನ ಮಿನಿ ವಿಧಾನಸೌಧಗಳ ನಿರ್ಮಾಣ ಕಾರ್ಯವನ್ನು 13 ತಾಲ್ಲೂಕುಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು. ಈ ಉದ್ದೇಶಕ್ಕಾಗಿ ನಾನು 6 ಕೋಟಿ ರೂ.ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ.

79. ಉಪನೋಂದಣಾಧಿಕಾರಿಗಳ ಕಚೇರಿ ನಿರ್ಮಾಣಕ್ಕಾಗಿ ನಾನು 2 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

**ಸಹಕಾರ**

80. ಸರ್ಕಾರವು 2005-06ನೇ ಸಾಲಿನಲ್ಲಿ ಜಾರಿಗೆ ತಂದ ಬಡ್ಡಿ ಮನ್ನಾ ಯೋಜನೆಯ ಬಗ್ಗೆ ರೈತರಿಂದ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ಈ ಯೋಜನೆ ಜಾರಿಯಾದಾಗಿನಿಂದ ನಮ್ಮ ರೈತರು 1658 ಕೋಟಿ ರೂ.ಗಳಷ್ಟು ಸಾಲದ ಅಸಲನ್ನು ಪಾವತಿಸಿದ್ದಾರೆ. 2005-06ನೇ ಸಾಲಿನಲ್ಲಿ ಬಡ್ಡಿ ಮನ್ನಾ ಸೌಲಭ್ಯಕ್ಕಾಗಿ 450 ಕೋಟಿ ರೂ.ಗಳನ್ನು ಹಣಕಾಸು ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿತ್ತು. ಇದಲ್ಲದೆ 2005-06ನೇ ಸಾಲಿನಲ್ಲಿಯೇ ಈ ಉದ್ದೇಶಕ್ಕಾಗಿ 400 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ನೀಡಲಾಗುವುದು. 2006-07ನೇ ಸಾಲಿನಲ್ಲಿ ಉಳಿಕೆ ಹಣವನ್ನು ಒದಗಿಸಲು ನಾನು ಉದ್ದೇಶಿಸಿದ್ದೇನೆ. ಕೆಲವು ರೈತರಿಗೆ ಸೆಪ್ಟೆಂಬರ್ 2005ರ ಅಂತ್ಯಕ್ಕೆ ಸಾಲದ ಅಸಲನ್ನು ಪಾವತಿಸಲು ಸಾಧ್ಯವಾಗಿಲ್ಲ. ಇವರಿಗೆ ಅನುಕೂಲವಾಗುವಂತೆ ಈ ಯೋಜನೆ ಲಾಭ ಪಡೆಯಲು ಸಾಲ ಮರುಪಾವತಿಯ ಅಂತಿಮ ದಿನಾಂಕವನ್ನು 2006ರ ಏಪ್ರಿಲ್ 30ರ ವರೆಗೆ ವಿಸ್ತರಿಸಲು ಉದ್ದೇಶಿಸಲಾಗಿದೆ.

81. ರೈತರು ಸಹಕಾರಿ ಸಂಘಗಳಿಂದ ಪಡೆಯುತ್ತಿರುವ ಕೃಷಿ ಸಾಲದ ಮೇಲಿನ ಬಡ್ಡಿ ಈಗ ಶೇ. 6 ರಷ್ಟಿದೆ. ಕೇಂದ್ರ ಸರ್ಕಾರವು ಶೇ. 7ರ ಬಡ್ಡಿದರದಲ್ಲಿ ಸಾಲದ ನೆರವನ್ನು ನೀಡಲು ನಿರ್ಧರಿಸಿದ್ದರ ಹಿನ್ನೆಲೆಯಲ್ಲಿ ರೈತರಿಗೆ ಇನ್ನೂ ಹೆಚ್ಚು ಅನುಕೂಲ ಮಾಡಲು ನಾನು ರೈತರಿಗೆ ಶೇ. 4 ರ ಬಡ್ಡಿದರದಲ್ಲಿ ಸಾಲ ದೊರೆಯುವಂತೆ ಮಾಡಲು ಉದ್ದೇಶಿಸಿದ್ದೇನೆ. ಇದು ಇಡೀ ರಾಷ್ಟ್ರದಲ್ಲಿಯೇ ರೈತರಿಗೆ ನೀಡುತ್ತಿರುವ ಕಡಿಮೆ ಬಡ್ಡಿದರ ಸೌಲಭ್ಯವಾಗಿದೆ.

82. ಬಡ್ಡಿ ಮನ್ನಾ ಯೋಜನೆಯು 4516 ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಪುನಶ್ಚೇತನಕ್ಕೆ ಕಾರಣವಾಗಿದೆ. ನಿಷ್ಕ್ರಿಯವಾಗಿದ್ದ 175

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ 170 ಬ್ಯಾಂಕುಗಳು ಪುನಶ್ಚೇತನಗೊಂಡಿವೆ. ರೈತರ ಸಾಲದ ಬೇಡಿಕೆಯನ್ನು ಪೂರೈಸಲು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಸಾಲ ಎತ್ತುವಳಿ ಮಟ್ಟವನ್ನು ಹೆಚ್ಚಿಸುವ ಅಗತ್ಯವಿದೆ. **ಈ ಹಿನ್ನೆಲೆಯಲ್ಲಿ ಬ್ಯಾಂಕುಗಳಿಗೆ ಸರ್ಕಾರವು ನೀಡುತ್ತಿದ್ದ ಖಾತರಿ ಬೆಂಬಲವನ್ನು ಅವಶ್ಯಕತೆಯ ಆಧಾರದ ಮೇಲೆ ಹೆಚ್ಚಿಸಲು ನಾನು ಉದ್ದೇಶಿಸಿದ್ದೇನೆ.** ಪ್ರತಿ ವರ್ಷ ಸಾಲ ಪಡೆಯುವ ರೈತರ ಪೈಕಿ ಹೊಸದಾಗಿ ಸಾಲ ಪಡೆಯುವವರಿಗೆ ಆದ್ಯತೆಯನ್ನು ನೀಡಲು ಮತ್ತು ಸಾಲ ಪಡೆಯುವ ರೈತರಲ್ಲಿ ಶೇ. 20 ರಷ್ಟು ರೈತರು ಹೊಸ ಸಾಲಗಾರರಾಗಿರುವಂತೆ ನೀತಿಯನ್ನು ರೂಪಿಸಲಾಗುವುದು.

83. ಯಶಸ್ವಿನಿ ಯೋಜನೆಯು ರಾಜ್ಯದ ಗ್ರಾಮೀಣ ರೈತ ಸಹಕಾರಿ ಸಂಘಗಳ ಸದಸ್ಯರಿಗೆ ಮಾತ್ರ ಅನ್ವಯವಾಗುತ್ತಿದೆ. **ಈ ಯೋಜನೆಯನ್ನು ನಾವು ಮತ್ತಷ್ಟು ಬಲಪಡಿಸಿ ಎಲ್ಲಾ ಗ್ರಾಮೀಣ ಸಹಕಾರಿ ಸಂಘಗಳ ಸದಸ್ಯರನ್ನು ಯಶಸ್ವಿನಿ ಯೋಜನೆಯ ವ್ಯಾಪ್ತಿಗೆ ಮುಂದಿನ ವರ್ಷದಿಂದ ತರಲು ಉದ್ದೇಶಿಸಿದ್ದೇವೆ.** ಇದರಿಂದಾಗಿ ಇನ್ನಷ್ಟು ಸಹಕಾರಿ ಸಂಘಗಳು ಯಶಸ್ವಿನಿ ಯೋಜನೆಯ ವ್ಯಾಪ್ತಿಗೆ ಒಳಪಡಲಿವೆ. **ಈ ಉದ್ದೇಶಕ್ಕಾಗಿ ನಾನು 20 ಕೋಟಿ ರೂ.ಗಳನ್ನು ಸರ್ಕಾರಿ ಪಾಲಿನ ಹಣವಾಗಿ ಯಶಸ್ವಿನಿ ಯೋಜನೆಯ ನಿಧಿಗೆ ಒದಗಿಸಲು ಉದ್ದೇಶಿಸಿದ್ದೇನೆ.**

84. ಪರಿಶಿಷ್ಟ ಜಾತಿ / ಪಂಗಡಗಳ ಮಹಿಳೆಯರು ಸಹಕಾರ ಸಂಘಗಳ ಸದಸ್ಯತ್ವ ಪಡೆಯಲು ಅನುವಾಗುವಂತೆ 2006-07ನೇ ಸಾಲಿನಲ್ಲಿ ಎರಡು ಕೋಟಿ ರೂ.ಗಳನ್ನು ನಾನು ಒದಗಿಸಲು ಉದ್ದೇಶಿಸಿದ್ದೇನೆ.

**ಸಮಾಜ ಕಲ್ಯಾಣ**

*ಕೀಳು ಮೇಲುಗಳ ಕಾಳಕೂಟ ವಿಷ ಕಳೆದಿಲ್ಲ*
*ಸ್ವಾರ್ಥ ಪಿಶಾಚಿಯನಿನ್ನೂ ನ್ಯಾಯದ ಕಿಚ್ಚಿಗೆ ಎಳೆದಿಲ್ಲ*
*ವರ್ಣದ್ವೇಷದ ಮೂಲನೆ ಅಳಿದಿಲ್ಲ*
*ಕಲ್ಮಿಷ ತೊಳೆದಿಲ್ಲ*

***- ಡಾ. ಸಿದ್ದಯ್ಯ ಪುರಾಣಿಕ***

85. ಸಮಾಜದ ದುರ್ಬಲವರ್ಗದವರಿಗೆ ನೀಡುವ ಸೌಲಭ್ಯಗಳು ಎಲ್ಲರಿಗೂ ಸಮರ್ಪಕವಾಗಿ ದೊರೆಯಬೇಕಾಗಿದೆ. ದುರ್ಬಲ ವರ್ಗದ ಸರ್ವರಿಗೂ ಸಮಾನ ಅವಕಾಶ ದೊರಕಬೇಕಾದಲ್ಲಿ ಒಳಮೀಸಲಾತಿಯ ಅಗತ್ಯವಿದೆ. ಈ ಸಂಬಂಧ ಪರಿಶೀಲನೆ ನಡೆಸಲು ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ರಚಿಸಲಾಗಿದ್ದು ವರದಿ ಬಂದ ನಂತರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

86. ಸಮಾಜದ ದುರ್ಬಲವರ್ಗಗಳ ದುಸ್ಥಿತಿಯನ್ನು ಉತ್ತಮಪಡಿಸಲು ಸಮರ್ಪಕ ಸಂಪನ್ಮೂಲಗಳು ಅತ್ಯಗತ್ಯವಾಗಿವೆ. ಈ ನಿಟ್ಟಿನಲ್ಲಿ **ಈ ವಲಯದ ಯೋಜನಾ ಅನುದಾನವನ್ನು ಕಳೆದ ಸಾಲಿಗಿಂತ ಶೇಕಡಾ 46 ರಷ್ಟು ಹೆಚ್ಚಿಸಿ 439 ಕೋಟಿ ರೂ.ಗಳಿಂದ 640.7 ಕೋಟಿ ರೂ.ಗಳಿಗೆ ನಿಗದಿಪಡಿಸಿದ್ದೇನೆ.**

**ಪರಿಶಿಷ್ಟ ಜಾತಿ ಮತ್ತು ಪಂಗಡ**

87. ಈ ಸಮುದಾಯಕ್ಕೆ ಸೇರಿದ ರೈತರ ನೀರಾವರಿ ಅಗತ್ಯಗಳನ್ನು **'ಗಂಗಾಕಲ್ಯಾಣ ಯೋಜನೆ'**ಯು ಪೂರೈಸುತ್ತಿದೆ. ಈ ಯೋಜನೆಯ ಘಟಕ ವೆಚ್ಚವನ್ನು 2002ರಲ್ಲಿ ಪರಿಷ್ಕರಿಸಲಾಗಿತ್ತು. ಇತ್ತೀಚಿನ ದಿನಗಳ ವೆಚ್ಚ ಏರಿಕೆಯ ಹಿನ್ನೆಲೆಯಲ್ಲಿ ಮತ್ತು ಜಲಾನಯನ ಸಂರಕ್ಷಣೆ ಪದ್ಧತಿಯ ಅಂಶಗಳನ್ನು ಅಳವಡಿಸಿಕೊಳ್ಳಬೇಕಾಗಿರುವುದರಿಂದ ಪ್ರತಿ ಘಟಕದ

ವೆಚ್ಚವನ್ನು ಹೆಚ್ಚಿಸಲು ಬೇಡಿಕೆ ಬರುತ್ತಿದೆ. ಇದನ್ನು ಈಡೇರಿಸಲು ನಾನು **ಪ್ರತಿ ಘಟಕದ ವೆಚ್ಚವನ್ನು 75,000 ರೂಗಳಿಂದ ಗರಿಷ್ಟ ಒಂದು ಲಕ್ಷ ರೂ.ಗಳಿಗೆ ಹಿಂದಿನ ಧನಸಹಾಯ ಮಾದರಿಯಲ್ಲಿಯೇ ನೂತನ ಫಲಾನುಭವಿಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.** ಈ ಯೋಜನೆಯಡಿ ಹೆಚ್ಚಿನ ಫಲಾನುಭವಿಗಳಿಗೆ ನೆರವು ಕಲ್ಪಿಸಲು ಮತ್ತು ಘಟಕ ವೆಚ್ಚವನ್ನು ಪರಿಷ್ಕರಿಸಿದ ಹಿನ್ನೆಲೆಯಲ್ಲಿ ಹೆಚ್ಚಿನ ಅಗತ್ಯಗಳನ್ನು ಭರಿಸಲು **ಯೋಜನೆಯ ಅನುದಾನವನ್ನು 42 ಕೋಟಿ ರೂ.ಗಳಿಂದ 95 ಕೋಟಿ ರೂ.ಗಳಿಗೆ ಏರಿಸಲು ಉದ್ದೇಶಿಸಿದ್ದೇನೆ. ಇದು ಶೇ. 126 ರಷ್ಟು ಏರಿಕೆಯಾಗಿದೆ.**

88. ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ 'ಜಮೀನು ಖರೀದಿ ಯೋಜನೆ'ಯು ಇಲಾಖೆಯ ಅತ್ಯುತ್ತಮ ಗುರಿನಿರ್ದೇಶಿತ ಕಾರ್ಯಕ್ರಮವಾಗಿದೆ. ಈ ಯೋಜನೆಯು ದುರ್ಬಲ ವರ್ಗದವರಿಗೆ ಆಹಾರ ಸುರಕ್ಷತೆ ಒದಗಿಸುವ ಮತ್ತು ಅವರ ಆದಾಯಮಟ್ಟ ಹಾಗೂ ಸಾಮಾಜಿಕ ಸ್ಥಾನವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಜಮೀನಿನ ಬೆಲೆ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ನಾನು ಘಟಕ ವೆಚ್ಚದ ಏರಿಕೆಯನ್ನು ನೋಂದಣಿ ಇಲಾಖೆಯ ಮಾರ್ಗದರ್ಶಿ ಮೌಲ್ಯದ ಜೊತೆ ಸಂಯೋಜಿಸಲು ಉದ್ದೇಶಿಸಿದ್ದೇನೆ.

89. 'ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು' ಈ ವರ್ಗದ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸುವಲ್ಲಿ ಒಳ್ಳೆಯ ಸೇವೆಯನ್ನು ಒದಗಿಸುತ್ತಿವೆ. 2006-07ನೇ ಸಾಲಿನಲ್ಲಿ 20 ಪರಿಶಿಷ್ಟ ಜಾತಿ ಮತ್ತು 5 ಪರಿಶಿಷ್ಟ ಪಂಗಡಗಳ ವಸತಿ ಶಾಲೆಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಇದಕ್ಕೆ 4.8 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು. ಇದಲ್ಲದೆ ವಸತಿ ಶಾಲೆಗಳ ನಿರ್ಮಾಣಕ್ಕೆ ಪ್ರಸ್ತುತ ಹಂಚಿಕೆಯನ್ನು 2005-06 ನೇ ಸಾಲಿನ 10 ಕೋಟಿ ರೂ.ಗಳಿಂದ

2006-07ನೇ ಸಾಲಿಗೆ 31.5 ಕೋಟಿ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.

90. ನೂತನ ವಿದ್ಯಾರ್ಥಿ ವಸತಿ ನಿಲಯಗಳನ್ನು ಸ್ಥಾಪಿಸಲು ಮತ್ತು ಹಾಲಿ ಇರುವ ವಸತಿ ನಿಲಯಗಳ ಮೂಲ ಸೌಕರ್ಯವನ್ನು ಉತ್ತಮಪಡಿಸಲು ಹೆಚ್ಚಿನ ಹಣಕ್ಕೆ ಬೇಡಿಕೆ ಬರುತ್ತಿದೆ. ಈ ದಿಕ್ಕಿನಲ್ಲಿ ನಾನು 2006-07 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 50 ಹೊಸ ವಸತಿ ನಿಲಯಗಳನ್ನು ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿ 10 ನೂತನ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಡಾ॥ ನಂಜುಂಡಪ್ಪ ವರದಿಯಲ್ಲಿ ಸೂಚಿತವಾಗಿರುವ ಹಿಂದುಳಿದ ತಾಲ್ಲೂಕುಗಳಿಗೆ ಆದ್ಯತೆ ನೀಡಲಾಗುವುದು. ಇದಕ್ಕಾಗಿ 4.84 ಕೋಟಿ ರೂ.ಗಳನ್ನು ನಾನು ಒದಗಿಸಲಿದ್ದೇನೆ. ಇದಲ್ಲದೆ ವಸತಿ ನಿಲಯಗಳ ನಿರ್ಮಾಣಕ್ಕೆ ನಾನು 42.84 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಿದ್ದೇನೆ.

91. ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಉದ್ಯಮ ಶೀಲರಿಗೆ ಶೇ.4 ರ ಬಡ್ಡಿ ದರದಲ್ಲಿ ಕೆಎಸ್ಎಫ್‌ಸಿ ಸಂಸ್ಥೆ ಸಾಲ ನೀಡಲಿದೆ. ಕೆಎಸ್ಎಫ್‌ಸಿಯ ಈ ಸಾಲದ ದರಕ್ಕೂ ಪ್ರಸ್ತುತ ಸಾಲದ ದರಕ್ಕೂ ಮಧ್ಯ ಇರುವ ವ್ಯತ್ಯಾಸದ ಬಡ್ಡಿ ಹಣವನ್ನು ವಿಶೇಷ ಘಟಕ ಯೋಜನೆಯ ಕ್ರೋಢೀಕೃತ ನಿಧಿಯಿಂದ ಭರಿಸಲಾಗುವುದು.

92. ಸಧ್ಯದಲ್ಲಿ ಪರಿಶಿಷ್ಟ ಜಾತಿ/ ಪಂಗಡದವರಿಗೆ ಸಾಲಸೌಲಭ್ಯ ನೀಡಲು ಈಗ ಒಂದೇ ನಿಗಮವಿರುತ್ತದೆ. ಪರಿಶಿಷ್ಟ ಪಂಗಡಕ್ಕೆ ವಿಶೇಷ ಆದ್ಯತೆ ನೀಡುವ ದೃಷ್ಟಿಯಿಂದ ಅವರ ಅಭ್ಯುದಯಕ್ಕಾಗಿ ಪ್ರತ್ಯೇಕವಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವನ್ನು 2006-07ರಲ್ಲಿ ಸ್ಥಾಪಿಸಲಾಗುವುದು.

93. ಪ್ರತೀ ವರ್ಷ ಏಪ್ರಿಲ್ 14 ರಂದು ಡಾ॥ ಬಿ.ಆರ್. ಅಂಬೇಡ್ಕರ್ ರವರ ಏಪ್ರಿಲ್ 6 ರಂದು ಡಾ॥ ಬಾಬು ಜಗಜೀವನರಾಮ್ ರವರ ಜಯಂತಿಯನ್ನು ಆಚರಿಸುವ ಹಿನ್ನೆಲೆಯಲ್ಲಿ ಗ್ರಾಮಾಂತರ ಪ್ರದೇಶದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ವರ್ಗಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಎರಡು ಕುಗ್ರಾಮಗಳನ್ನು ಆಯ್ಕೆ ಮಾಡಿ ಈ ಗ್ರಾಮಗಳ ಪೈಕಿ ಒಂದು ಗ್ರಾಮಕ್ಕೆ ಡಾ॥ ಬಿ.ಆರ್. ಅಂಬೇಡ್ಕರ್ ಗ್ರಾಮ ಮತ್ತು ಇನ್ನೊಂದು ಗ್ರಾಮಕ್ಕೆ ಡಾ॥ ಬಾಬು ಜಗಜೀವನರಾಮ್ ಎಂದು ಹೆಸರಿಸಿ ಸರ್ವತೋಮುಖವಾಗಿ ಅಭಿವೃದ್ಧಿ ಪಡಿಸಲಾಗುವುದು.

94. ಬೆಳಗಾವಿಯಲ್ಲಿ ನಿರ್ಮಾಣವಾಗುತ್ತಿರುವ ಡಾ॥ ಬಿ.ಆರ್. ಅಂಬೇಡ್ಕರ್ ಭವನಕ್ಕೆ ಕ್ರೋಢೀಕೃತ ನಿಧಿಯಿಂದ 1 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

ಹಿಂದುಳಿದ ವರ್ಗಗಳು

95. ಹಿಂದುಳಿದ ವರ್ಗಗಳಿಗೆ ಮೀಸಲಾದ ಗಂಗಾಕಲ್ಯಾಣ ಯೋಜನೆಯ ಘಟಕ ವೆಚ್ಚವನ್ನು ಪರಿಷ್ಕರಿಸಿ 75,000 ರೂ.ಗಳಿಂದ 1 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು. ಈ ಯೋಜನೆಗೆ ಪ್ರಸಕ್ತ ಸಾಲಿನಲ್ಲಿನ ಅನುದಾನ 10 ಕೋಟಿ ರೂ.ಗಳಿದ್ದು 2006-07 ರಲ್ಲಿ 23.50 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಇದು ಶೇ. 135 ರಷ್ಟು ಬೆಳವಣಿಗೆಯಾಗಿರುತ್ತದೆ.

96. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮುಂಬರುವ ವರ್ಷದಲ್ಲಿ 20 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಅನುದಾನ ಒದಗಿಸಲಿದ್ದೇನೆ.

97. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಸತಿ ನಿಲಯದ ಬೇಡಿಕೆಗಳನ್ನು ಪೂರೈಸಲು ನಾನು 2006-07ನೇ ಸಾಲಿನಲ್ಲಿ 50 ನೂತನ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಇದಕ್ಕೆ 4 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು. ಡಾ॥ ನಂಜುಂಡಪ್ಪ ವರದಿಯಲ್ಲಿ ಸೂಚಿಸಿರುವ ಅತೀ ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕುಗಳಲ್ಲಿ ಈ ವಿದ್ಯಾರ್ಥಿ ನಿಲಯಗಳನ್ನು ಆದ್ಯತೆಯ ಮೇರೆಗೆ ಸ್ಥಾಪಿಸಲಾಗುವುದು. ಈ ವಿದ್ಯಾರ್ಥಿನಿಲಯಗಳಲ್ಲಿ ಶೇ. 50 ರಷ್ಟು ಬಾಲಕಿಯರ ವಸತಿನಿಲಯಗಳಾಗಿರುತ್ತವೆ.

## ಅಲ್ಪಸಂಖ್ಯಾತರು

98. ನನ್ನ ಸರ್ಕಾರವು ಅಲ್ಪಸಂಖ್ಯಾತ ಸಮುದಾಯದ ಅಗತ್ಯಗಳನ್ನು ಚೆನ್ನಾಗಿ ಅರಿತುಕೊಂಡಿದೆ. ಈ ವರ್ಗದ ಜನರ ಕಲ್ಯಾಣಕ್ಕಾಗಿ ನಾನಾ ರೀತಿಯ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ನಾನು ಯೋಜನಾ ಅನುದಾನದ ಹಂಚಿಕೆಯನ್ನು 22.72 ಕೋಟಿ ರೂ.ಗಳಿಂದ 83 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದೇನೆ. ಈ ಹೆಚ್ಚಳಗಳು ಪ್ರಧಾನವಾಗಿ ಈ ವರ್ಗದ ಜನರ ಆದಾಯಮಟ್ಟ ಹೆಚ್ಚಿಸಲು ತರಬೇತಿ ಮತ್ತು ಶೈಕ್ಷಣಿಕ ಮಟ್ಟವನ್ನು ಸುಧಾರಿಸಲು ನೆರವಾಗಲಿವೆ.

99. ಈಗಾಗಲೆ ಹೇಳಿರುವಂತೆ ಪರಿಶಿಷ್ಟ ಜಾತಿ/ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಗಂಗಾಕಲ್ಯಾಣ ಯೋಜನೆಯ ಘಟಕ ವೆಚ್ಚವನ್ನು ಪರಿಷ್ಕರಿಸಿರುವಂತೆ ಅಲ್ಪಸಂಖ್ಯಾತ ಸಮುದಾಯಕ್ಕೆ ಸಹ ಪರಿಷ್ಕರಿಸಲಾಗುವುದು. ಇದಕ್ಕಾಗಿ ಅನುದಾನ ಹಂಚಿಕೆಯನ್ನು 8 ಕೋಟಿ ರೂಗಳಿಂದ 22 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು.

100. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಅಲ್ಪಸಂಖ್ಯಾತರಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಮತ್ತು ವಿಶೇಷ ತರಬೇತಿ ಚಟುವಟಿಕೆಗಳನ್ನು ನಡೆಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ಈ ಕಾರ್ಯಕ್ರಮಗಳಿಗೆ ನೆರವು ಹೆಚ್ಚಿಸುವಂತೆ ಬೇಡಿಕೆ ಬರುತ್ತಿದೆ. ಇದನ್ನು ಈಡೇರಿಸಲು ನಾನು ಈ ಯೋಜನೆಗಳಿಗೆ ಹಂಚಿಕೆಯನ್ನು 6 ಕೋಟಿ ರೂ.ಗಳಿಂದ 24 ಕೋಟಿ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.

101. ಜಮೀನು ಖರೀದಿ ಯೋಜನೆಯನ್ನು ಅಲ್ಪಸಂಖ್ಯಾತರಿಗೂ ವಿಸ್ತರಿಸಬೇಕೆನ್ನುವ ಬೇಡಿಕೆ ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಈ ಉದ್ದೇಶಕ್ಕಾಗಿ ನಾನು 2 ಕೋಟಿ ರೂ.ಗಳನ್ನು ನಿಗದಿಪಡಿಸಲು ಉದ್ದೇಶಿಸಿದ್ದೇನೆ.

102. ಶಾದಿಮಹಲ್‌ಗಳ ನಿರ್ಮಾಣಕ್ಕೆ ಸಹಾಯ ನೀಡುವುದು ಅಲ್ಪಸಂಖ್ಯಾತರ ಇಲಾಖೆಯ ಪ್ರಮುಖ ಯೋಜನೆಯಾಗಿದೆ. ಡಾ: ನಂಜುಂಡಪ್ಪ ವರದಿಯಲ್ಲಿ ಸೂಚಿಸಲಾಗಿರುವ ಹಿಂದುಳಿದ ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲು ನಾನು 5.5 ಕೋಟಿ ರೂ.ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ.

103. ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಅಲ್ಪಸಂಖ್ಯಾತರ ವಸತಿ ಶಾಲೆಗಳಿವೆ. ಈ ಶಾಲೆಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ನಾನು ಹಂಚಿಕೆಯನ್ನು ಕಳೆದ ವರ್ಷದ 2.5 ಕೋಟಿ ರೂ.ಗಳಿಂದ 10 ಕೋಟಿ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.

104. ಅಧ್ಯಯನಕ್ಕೆ ಮತ್ತು ವಾಸಕ್ಕೆ ಸೂಕ್ತ ವಾತಾವರಣ ಕಲ್ಪಿಸಲು ಸ್ವಂತ ವಸತಿ ನಿಲಯ ಕಟ್ಟಡಗಳು ಅಗತ್ಯ. ಆದ್ದರಿಂದ ಬಾಡಿಗೆ ಕಟ್ಟಡದಲ್ಲಿರುವ ಅಲ್ಪಸಂಖ್ಯಾತರ ವಸತಿ ನಿಲಯಗಳಿಗೆ ಸ್ವಂತ ಕಟ್ಟಡ ಒದಗಿಸಲು ನಾನು

ಹಂಚಿಕೆಯನ್ನು 1.5 ಕೋಟಿ ರೂ.ಗಳಿಂದ 6 ಕೋಟಿ ರೂ.ಗಳಿಗೆ ಏರಿಸಲು ಉದ್ದೇಶಿಸಿದ್ದೇನೆ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ**

105. ಸಾರ್ವಜನಿಕ ಆಸ್ಪತ್ರೆಯಲ್ಲಿ ಔಷಧಿಗಳು ಅಗತ್ಯ ಪ್ರಮಾಣದಲ್ಲಿ ಲಭ್ಯವಿಲ್ಲದಿರುವುದರಿಂದ ಸರ್ಕಾರಿ ಆಸ್ಪತ್ರೆಗಳ ಕಾರ್ಯನಿರ್ವಹಣೆಯ ದಕ್ಷತೆ ಕುಂಠಿತಗೊಂಡಿದೆ. ಆದ್ದರಿಂದ ಅಗತ್ಯ ಔಷಧಿಗಳ ಖರೀದಿಗಾಗಿ ನಾನು 2006-07 ನೇ ಸಾಲಿನಲ್ಲಿ ಹಿಂದಿನ ಸಾಲಿಗಿಂತ ಹೆಚ್ಚುವರಿಯಾಗಿ 16 ಕೋಟಿ ರೂ.ಗಳನ್ನು ರಾಜ್ಯವಲಯದ ಆಸ್ಪತ್ರೆಗಳಿಗೆ ಒದಗಿಸಲು ಉದ್ದೇಶಿಸಿದ್ದೇನೆ. ಇದೇ ರೀತಿ ಜಿಲ್ಲಾ ವಲಯದ ಆಸ್ಪತ್ರೆಗಳಿಗೆ 2005-06 ನೇ ಸಾಲಿನ ಹಂಚಿಕೆಗಿಂತ ಹೆಚ್ಚುವರಿಯಾಗಿ 10 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

106. ಕರ್ನಾಟಕದ ಪ್ರತೀ ತಾಲ್ಲೂಕು ಕೇಂದ್ರದಲ್ಲಿ ಕನಿಷ್ಟ ನೂರು ಹಾಸಿಗೆಗಳ ಸುವ್ಯವಸ್ಥಿತ ಆಸ್ಪತ್ರೆ ಸೌಲಭ್ಯವಿರಬೇಕೆಂಬುದು ನಮ್ಮ ಆಶಯ. ಈ ಹಿನ್ನೆಲೆಯಲ್ಲಿ ನೂರು ಹಾಸಿಗೆಗಳಿಗಿಂತ ಕಡಿಮೆ ಇರುವ ಎಲ್ಲಾ ತಾಲ್ಲೂಕು ಆಸ್ಪತ್ರೆಗಳನ್ನು ಹಂತ ಹಂತವಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದು.

107. 2005-06 ನೇ ಸಾಲಿನಲ್ಲಿ ಅತೀ ಹಿಂದುಳಿದ 39 ತಾಲ್ಲೂಕುಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ. 2006-07 ರಲ್ಲಿ ಇವುಗಳನ್ನು ಪೂರ್ಣವಾಗಿ ಕಾರ್ಯಾರಂಭ ಗೊಳಿಸಲಾಗುವುದು. ಮೇಲ್ದರ್ಜೆಗೇರಿಸಿದ ಈ ಆಸ್ಪತ್ರೆಗಳ ಅಗತ್ಯಗಳನ್ನು ಪೂರೈಸಲು ಮತ್ತು ಉಪಕರಣಗಳನ್ನು ಒದಗಿಸಲು ನಾನು 10 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

108. ರಾಜ್ಯದಲ್ಲಿರುವ ಬಡತನ ರೇಖೆಯ ಕೆಳಗಿನ ಎಲ್ಲ ಕೃಷಿ ಕಾರ್ಮಿಕರಿಗೆ ಆರೋಗ್ಯ ವಿಮಾ ಸೌಲಭ್ಯವನ್ನು 'ಸುವರ್ಣ ಸುರಕ್ಷ' ನೂತನ ಯೋಜನೆಯಡಿ ವಿಸ್ತರಿಸಲಾಗುವುದು. ಕೇಂದ್ರ ಸರ್ಕಾರವು ರಾಷ್ಟ್ರೀಯ ವಿಮೆ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಈ ಯೋಜನೆಯಲ್ಲಿ ಫಲಾನುಭವಿಯು ವರ್ಷಕ್ಕೆ 548 ರೂ.ಗಳನ್ನು ಪಾವತಿಸಬೇಕಾಗಿರುತ್ತದೆ. ಇದರಲ್ಲಿ ಭಾರತ ಸರ್ಕಾರವು ಪ್ರತಿ ವ್ಯಕ್ತಿಗೆ 300 ರೂ.ಗಳನ್ನು ನೀಡುತ್ತದೆ. ಫಲಾನುಭವಿಗಳ ಸಣ್ಣ ಪ್ರಮಾಣದ ವಂತಿಕೆ ಸೇರಿದಂತೆ ರಾಜ್ಯ ಸರ್ಕಾರವು ಉಳಿದ ರೂ.248 ಒದಗಿಸುತ್ತದೆ. ಈ ನೂತನ 'ಸುವರ್ಣ ಸುರಕ್ಷ' ಯೋಜನೆಗೆ 35 ಕೋಟಿ ರೂ.ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇವೆ.

***"ಮಾಡುವಲ್ಲಿ ಎನ್ನ ನಾನರಿದು ಮಾಡಿದೆನಾದಡೆ,***
***ನೀಡುವಲ್ಲಿ ಎನ್ನ ನಾನರಿದು ನೀಡಿದೆನಾದಡೆ,***
***ನೀಡುವಲ್ಲಿ ರುಚಿಗೆ ಮನವೆಳಿಸಿ, ಹಾರೈಸಿದೆನಾದಡೆ,***
***ನಿಮಗಂದೆ ದ್ರೋಹವಯ್ಯಾ,***
***ಮಾಡುವಲ್ಲಿ ನೀಡುವಲ್ಲಿ ಕೂಡೆ ಶುದ್ಧನಲ್ಲದಿರ್ದಡೆ,***
***ನೀನಂದೆ ಮೂಗ ಕೊಯಿ ಕೂಡಲಸಂಗಮದೇವಾ"***

*ಸಮಾಜದಿಂದ ಪಡೆದದ್ದನ್ನು ಸಮಾಜಕ್ಕೆ ನೀಡುವಾಗ ಸ್ವಾರ್ಥರಹಿತ,*
*ಕೀರ್ತಿ ಕಾಮನೆಯಿಂದ ಮುಕ್ತವಾದ ಮನಸ್ಥಿತಿ ಹೊಂದಿರಬೇಕು ಎಂಬುದು*
*ಬಸವಣ್ಣನವರ ನಿಲುವು.*

109. ಆರು ನೂತನ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು 2005-06ನೇ ಸಾಲಿನಲ್ಲಿ ನಿರ್ಧರಿಸಲಾಗಿತ್ತು. ಈ ಕಾರ್ಯ ಪ್ರಗತಿಯಲ್ಲಿದೆ. ಈ ಕಾರ್ಯಗಳನ್ನು ಪೂರ್ಣಗೊಳಿಸಲು ಮತ್ತು ಅಗತ್ಯ ಉಪಕರಣಗಳನ್ನು ಒದಗಿಸಲು ನಾನು 39.33 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

110. ಜಯದೇವ ಹೃದ್ರೋಗ ಆಸ್ಪತ್ರೆ, ಕಿದ್ವಾಯಿ ಆಸ್ಪತ್ರೆ, ಹುಬ್ಬಳ್ಳಿ ಕಿಮ್ಸ್, ಬಳ್ಳಾರಿ ವಿಮ್ಸ್ ಇತ್ಯಾದಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳು ಅಗತ್ಯ ಔಷಧಿ ಮತ್ತು ಆಸ್ಪತ್ರೆಯ ನಿತ್ಯಬಳಕೆ ವಸ್ತುಗಳಿಗಾಗಿ ಅವಶ್ಯಕತೆಯನ್ನು ಮನಗಂಡು ನಾನು 22 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

111. ಬೆಂಗಳೂರಿನ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳು ಬಡಜನರ ಆಸ್ಪತ್ರೆಗಳಾಗಿವೆ. ಈ ಆಸ್ಪತ್ರೆಗಳನ್ನು ಸುಧಾರಿಸಿ ವಿಸ್ತರಣೆ ಮಾಡಲು ಉದ್ದೇಶಿಸಲಾಗಿದೆ. ಇದಕ್ಕಾಗಿ ನಾನು 30 ಕೋಟಿ ರೂ.ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ.

112. ಪ್ರಸ್ತುತ ರಾಜ್ಯದಲ್ಲಿ ನರ್ಸಿಂಗ್ ಕಾಲೇಜುಗಳ ವ್ಯಾಪಕ ಜಾಲವಿದ್ದು ರಾಷ್ಟ್ರದ ಶೇ 50ಕ್ಕೂ ಹೆಚ್ಚಿನ ನರ್ಸಿಂಗ್ ಕಾಲೇಜುಗಳು ಕರ್ನಾಟಕದಲ್ಲಿವೆ. ನಮ್ಮ ಗೌರವಾನ್ವಿತ ರಾಷ್ಟ್ರಪತಿಗಳು ಅರೆ ವೈದ್ಯಕೀಯ ಪರಿಣಿತರು ಮತ್ತು ತಂತ್ರಜ್ಞರಿಗೆ ಗುಣಮಟ್ಟದ ತರಬೇತಿ ನೀಡುವುದನ್ನು ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳಬೇಕೆಂದು ಸಲಹೆ ನೀಡಿದ್ದಾರೆ. ಈ ಬಗ್ಗೆ ಪರಿಸ್ಥಿತಿಯ ಅಧ್ಯಯನ ಮಾಡಿ ಸಲಹೆ ನೀಡಲು ಸಮಿತಿಯೊಂದನ್ನು ಈಗಾಗಲೇ ರಚಿಸಿದೆ. ನರ್ಸ್‌ಗಳ ಸೇವಾ ಕೌಶಲ್ಯವನ್ನು ಉನ್ನತೀಕರಿಸುವ ಕಾರ್ಯಕ್ರಮಗಳಿಗಾಗಿ ನಾನು 2 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

**ಪ್ರಾಥಮಿಕ ಶಿಕ್ಷಣ**

113. ನಮ್ಮ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯು ಸಾಕಷ್ಟು ಸುಧಾರಿಸಿದೆ. ಸರ್ವಶಿಕ್ಷಣ ಅಭಿಯಾನ, ವಿದ್ಯಾ ವಿಕಾಸ, ಅಕ್ಷರ ದಾಸೋಹ ಕಾರ್ಯಕ್ರಮಗಳು ಪ್ರಾಥಮಿಕ ಶಾಲೆಗಳ ಉತ್ತಮ ಸಂಪರ್ಕ ಜಾಲವನ್ನು ಸ್ಥಾಪಿಸಿವೆ. ಪ್ರಾಥಮಿಕ ಶಿಕ್ಷಣಕ್ಕೆ 2006-07ನೇ ಸಾಲಿನಲ್ಲಿ

4466 ಕೋಟಿ ರೂ.ಗಳನ್ನು ಒದಗಿಸುತ್ತಿದ್ದು ಇದು 2005-06ನೇ ಸಾಲಿಗಿಂತ ಶೇ. 12 ರಷ್ಟು ಹೆಚ್ಚಾಗಿದೆ.

### ಹೆಮ್ಮೆಯಿಂದ ಹೆಣ್ಣು ಮಗು ಶಾಲೆಗೆ ಬರಲಿ

114. ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ದೂರದ ಹಳ್ಳಿಗಳಿಂದ ಶಾಲೆಗೆ ಬರುವಾಗ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಇವರ ತೊಂದರೆಯನ್ನು ನಿವಾರಿಸಿ ಅವರ ಶಾಲೆಯ ಪ್ರಯಾಣ ಸುಗಮವಾಗುವಂತೆ ಮಾಡಲು ಸರ್ಕಾರವು ನಿರ್ಧರಿಸಿದೆ. ಬಡತನದ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ 7ನೇ ತರಗತಿ ಪಾಸು ಮಾಡಿ, ಕಲಿಕೆ ಮುಂದುವರಿಸುವ ಹೆಣ್ಣು ಮಕ್ಕಳಿಗೆ ಸರ್ಕಾರಿ ವೆಚ್ಚದಲ್ಲಿ ಬೈಸಿಕಲ್ ನೀಡಲು ನಿರ್ಧರಿಸಲಾಗಿದೆ. ಈ ಕ್ರಮದಿಂದ ಹೆಣ್ಣುಮಕ್ಕಳು ಮನೆಯಿಂದ ಶಾಲೆಗೆ ಹೋಗಿ ಬರಲು ಆಗುವ ಅನುಕೂಲದ ಜೊತೆಗೆ ಅವರಲ್ಲಿ ಧೈರ್ಯ ಮತ್ತು ಆತ್ಮ ವಿಶ್ವಾಸ ಮೂಡಿಸಲು ಪ್ರೇರಣೆ ನೀಡುತ್ತದೆ. ಈ ಕಾರ್ಯಕ್ಕಾಗಿ 25 ಕೋಟಿ ರೂ.ಗಳನ್ನು ಮೀಸಲಿಡಲಾಗುವುದು.

### ಉನ್ನತ ಶಿಕ್ಷಣ

115. ರಾಜ್ಯದ ಬೆಳಗಾವಿ, ರಾಯಚೂರು, ಧಾರವಾಡ, ಗದಗ, ಹಾವೇರಿ, ಶಿವಮೊಗ್ಗ, ಬಾಗಲಕೋಟೆ ಏಳು ಜಿಲ್ಲಾ ಕೇಂದ್ರಗಳಲ್ಲಿ ಪ್ರಥಮ ದರ್ಜೆ ಸರ್ಕಾರಿ ಕಾಲೇಜುಗಳೇ ಇರುವುದಿಲ್ಲ. ಉನ್ನತ ಶಿಕ್ಷಣಕ್ಕೆ ಹೆಚ್ಚುತ್ತಿರುವ ಬೇಡಿಕೆಯ ಹಿನ್ನೆಲೆಯಲ್ಲಿ ಏಳು ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಕನಕಪುರ ಮತ್ತು ಕುರಗೋಡಿನಲ್ಲಿ ಸರ್ಕಾರಿ ಪ್ರಥಮದರ್ಜೆ ಕಾಲೇಜು ಸ್ಥಾಪಿಸಲಾಗುವುದು.

116. ರಾಜ್ಯದ 17 ಸರ್ಕಾರಿ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗಗಳು ಇರುವುದಿಲ್ಲ. ಆದ್ದರಿಂದ ವಿಜ್ಞಾನ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು ಈ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗಗಳನ್ನು ತೆರೆಯಲಾಗುವುದು. ಈ ವರ್ಷ ಪಾಲಿಟೆಕ್ನಿಕ್ ಕಾಲೇಜುಗಳ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಲಾಗುವುದು. ಈ ಎಲ್ಲ ಕಾರ್ಯಗಳಿಗಾಗಿ 5.39 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

**ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ**

117. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನನ್ನ ಸರ್ಕಾರ ಸಂಪೂರ್ಣವಾಗಿ ಬದ್ಧವಾಗಿದೆ. ಒಂದು ವಿಶೇಷ ಪ್ರೋತ್ಸಾಹದ ರೂಪದಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರತಿಭಾವಂತ ಹೆಣ್ಣುಮಕ್ಕಳಿಗೆ "ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ" ನೀಡಲು ಸರ್ಕಾರ ನಿರ್ಧರಿಸಿದೆ. ಪ್ರತಿ ಜಿಲ್ಲೆಯಲ್ಲಿ ಪಿ.ಯು.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆಯುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ 10 ಜನ ಹೆಣ್ಣುಮಕ್ಕಳಿಗೆ ಅಂದರೆ ಒಟ್ಟು 280 ಹೆಣ್ಣು ಮಕ್ಕಳಿಗೆ ವೃತ್ತಿ ಶಿಕ್ಷಣ ಪಡೆಯಲು ಹಣಕಾಸು ನೆರವು ನೀಡುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರವೇ ವಹಿಸಿಕೊಳ್ಳಲಿದೆ.

**ಪ್ರತಿಭಾವಂತರಿಗೆ ಶುಲ್ಕ ಉಚಿತ**

118. ಬಡ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಪದವಿಪೂರ್ವ ಕೋರ್ಸ್‌ನಲ್ಲಿ ಶೇ.80 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್, ವೈದ್ಯಕೀಯ, ದಂತ ವಿಜ್ಞಾನ, ಕೃಷಿ ಮತ್ತು ಪಶುವೈದ್ಯ ವಿಜ್ಞಾನದಂತಹ ವೃತ್ತಿಪರ ಕೋರ್ಸ್‌ಗಳ ಶಿಕ್ಷಣ ಶುಲ್ಕಗಳನ್ನು ಸರ್ಕಾರವೇ ಪಾವತಿಸಲಿದೆ.

119. ವಿಶ್ವವಿದ್ಯಾನಿಲಯಗಳಲ್ಲಿ ಮೂಲ ವಿಜ್ಞಾನ ಕ್ಷೇತ್ರಗಳಲ್ಲಿ ಸಂಶೋಧನೆಯನ್ನು ಉತ್ತೇಜಿಸಲು 50 ಸಂಶೋಧನಾ ವ್ಯಾಸಂಗವೇತನ ನೀಡಲಾಗುವುದು.

**ಗ್ರಾಮೀಣ ಅಭಿವೃದ್ಧಿ**

120. ಗ್ರಾಮೀಣ ಪ್ರದೇಶದ ಅಭಿವೃದ್ಧಿ ನಮ್ಮ ಪ್ರಥಮ ಆದ್ಯತೆ. ಅಂತೆಯೆ ರಾಜ್ಯವು ರಾಜ್ಯವಲಯದಲ್ಲಿದ್ದ 170 ಯೋಜನೆಗಳನ್ನು ಜಿಲ್ಲಾ ವಲಯಕ್ಕೆ ವರ್ಗಾಯಿಸಿದೆ. ಜಿಲ್ಲಾ ವಲಯದ ಗಾತ್ರವು 2006-07 ರಲ್ಲಿ 2354 ಕೋಟಿ ರೂ.ಗಳಿಗೆ ಹೆಚ್ಚಳವಾಗಿದೆ. ಇದು 2005-06 ರಲ್ಲಿ 2002 ಕೋಟಿ ರೂ.ಗಳಾಗಿತ್ತು.

121. ಭಾರತ ಸರ್ಕಾರವು 2005-06 ರಲ್ಲಿ 236 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು ಕರ್ನಾಟಕ ಸರ್ಕಾರವು ತನ್ನ ಪಾಲಿನ ಹಣವನ್ನು ಬಿಡುಗಡೆ ಮಾಡಿದೆ. 2006-07 ನೇ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರು ಪೂರೈಕೆ ಹಂಚಿಕೆಯನ್ನು 750 ಕೋಟಿ ರೂ.ಗಳಿಗೆ ಏರಿಸಲಾಗಿದೆ. ಕೇಂದ್ರ ನೆರವಿನ ಯೋಜನೆಗಳಿಗೆ ಕರ್ನಾಟಕದ ಪಾಲಿನ ಹಣವನ್ನು ಅಗತ್ಯಕ್ಕೆ ಅನುಸಾರವಾಗಿ ಒದಗಿಸಲಾಗುವುದು.

122. ಸಂಪೂರ್ಣ ನೈರ್ಮಲ್ಯ ಪ್ರಚಾರದ ಅಡಿಯಲ್ಲಿ 2006-07 ನೇ ಸಾಲಿನಲ್ಲಿ 23,000 ಶಾಲೆಗಳಿಗೆ ಮತ್ತು 23,800 ಅಂಗನವಾಡಿಗಳಿಗೆ ಶೌಚಾಲಯ ಸೌಲಭ್ಯವನ್ನು ಒದಗಿಸಲಾಗುವುದು.

123. ನಿರ್ಮಲಗ್ರಾಮ ಯೋಜನೆಯಡಿ ಒಳಚರಂಡಿ ಸೌಕರ್ಯವನ್ನು ಒದಗಿಸಲು 15 ಕೋಟಿ ರೂ.ಗಳನ್ನು ಒದಗಿಸಲಾಗುವುದು.

124. ಪಂಚಸೂತ್ರ ಆಧಾರದ 'ಸ್ವಚ್ಛ ಗ್ರಾಮ ಯೋಜನೆ' ಗೆ ತುಂಬಾ ಬೇಡಿಕೆ ಬರುತ್ತಿದ್ದು 2006-07 ನೇ ಸಾಲಿನಲ್ಲಿ 3ನೇ ಹಂತದ ಗ್ರಾಮಗಳನ್ನು

ಆಯ್ಕೆ ಮಾಡಲಾಗುವುದು ಈ ಯೋಜನೆಗೆ ಸರ್ಕಾರವು ಶೇ 95 ರಷ್ಟು ಅನುದಾನವನ್ನು ಒದಗಿಸುತ್ತಿದ್ದು, ಗ್ರಾಮಗಳ ಕೊಡುಗೆ ಶೇ 5 ರಷ್ಟಿರುತ್ತದೆ.

125. ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಾದ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ರವರು ಗ್ರಾಮೀಣ ಪ್ರದೇಶಗಳಲ್ಲಿ ನಗರ ಸೌಕರ್ಯಗಳನ್ನು ಕಲ್ಪಿಸುವ ಮೂಲಕ ಸೌಕರ್ಯಗಳ ಸಮಾನತೆ ಮತ್ತು ಸಮಗ್ರ ಅಭಿವೃದ್ಧಿ ಸಾಧಿಸುವ 'ಪುರ' ಯೋಜನೆಯನ್ನು ಪ್ರಸ್ತಾವಿಸಿದ್ದಾರೆ. ಈ ನೂತನ ಯೋಜನೆಯನ್ನು ಅನುಷ್ಠಾನಗೊಳಿಸಲು ನಾನು 2006-07 ನೇ ಸಾಲಿಗೆ 25 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

126. ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಸೇವೆ ಒದಗಿಸುವ ಗ್ರಾಮ ಪಂಚಾಯತ್‌ಗಳಿಗೆ ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಪ್ರಶಸ್ತಿ ನೀಡಲು ಸರ್ಕಾರವು ಪರಿಗಣಿಸುತ್ತಿದೆ. ಇದಕ್ಕೆ **'ಅಗ್ರ'** ಪ್ರಶಸ್ತಿ ಎಂದು ಹೆಸರಿಸಲಾಗಿದ್ದು, 2006-07 ನೇ ಸಾಲಿನಲ್ಲಿ ಈ ಪ್ರಶಸ್ತಿ ನೀಡಿಕೆ ಉದ್ದೇಶಕ್ಕಾಗಿ ಒಂದು ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

**ಮಹಿಳಾ ಮತ್ತು ಮಕ್ಕಳ ಕಲ್ಯಾಣ**

*ಪೆಣ್ಣಲ್ಲವೇ ತಮ್ಮನ್ನೆಲ್ಲಾ ಹಡೆದ ತಾಯಿ*
*ಪೆಣ್ಣಲ್ಲವೇ ಪೊರೆದವಳು*
*ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು*
*ಕಣ್ಣು ಕಾಣದ ಗಾವಿಲರು*

*ಹದಿಬದೆಯ ಧರ್ಮದ ಸಂಚಿ ಹೊನ್ನಮ್ಮ ಹದಿನೇಳನೇ ಶತಮಾನದಲ್ಲೇ ಹೆಣ್ಣನ್ನು ಕುರಿತ ಸಮಾಜದ ದೃಷ್ಟಿಕೋನದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯ ಇಂದಿಗೂ ಕೂಡಾ ಪ್ರಸ್ತುತ.*

**'ಭಾಗ್ಯದ ಲಕ್ಷ್ಮಿ ಬಾರಮ್ಮ'**

127. ಆಧುನಿಕ ಸಮಾಜದಲ್ಲಿ ಹೆಣ್ಣು ಮಗುವಿನ ಜನನದ ಬಗ್ಗೆ ಅಷ್ಟೇನು ಸಹಾನುಭೂತಿ ಕಂಡು ಬರುತ್ತಿಲ್ಲ. ಅದರಲ್ಲೂ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣು ಮಗುವಿನ ಜನನ ಸಂದರ್ಭದಲ್ಲಿ ಸಂತೋಷಪಡುವವರು ವಿರಳ. ಭ್ರೂಣ ಹತ್ಯೆ ಹೆಚ್ಚಾಗಿರುವ ಕಾರಣ, ಲಿಂಗ ಅನುಪಾತದಲ್ಲಿ ಅಪಾರ ಅಂತರ ಇದೆ. 1000 ಗಂಡು ಮಕ್ಕಳಿಗೆ ಎದುರಾಗಿ 966 ಹೆಣ್ಣು ಮಕ್ಕಳಿರುವುದನ್ನು ಗಮನಿಸಿದಾಗ ಲಿಂಗ ತಾರತಮ್ಯ ಎಷ್ಟಿದೆ ಎಂಬುದು ಅರಿವಾಗುತ್ತದೆ. ಇದನ್ನು ನಿವಾರಿಸಲು ಸರ್ಕಾರ ಕಟಿಬದ್ಧವಾಗಿದ್ದು, ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣು ಮಗು ಜನಿಸಿದಾಗ ಅಂತಹ ಕುಟುಂಬಗಳಿಗೆ ನೈತಿಕ ಸ್ಥೈರ್ಯ ತುಂಬಲು **"ಭಾಗ್ಯಲಕ್ಷ್ಮಿ"** ಕಾರ್ಯಕ್ರಮ ರೂಪಿಸಿದೆ.

128. ಈ ಕಾರ್ಯಕ್ರಮದಡಿ 31.3.2006 ರ ನಂತರ ಜನಿಸುವ ಹೆಣ್ಣು ಮಗುವಿನ ಹೆಸರಿನಲ್ಲಿ 10,000 ರೂ.ಗಳ ನಿಶ್ಚಿತ ಠೇವಣಿ ಇಡಲಾಗುವುದು. ಈ ಠೇವಣಿಯನ್ನು ಬಡ್ಡಿ ಸಮೇತ ಹೆಣ್ಣುಮಗುವಿಗೆ 18 ವರ್ಷ ತುಂಬಿದ ನಂತರ ಪಡೆದುಕೊಳ್ಳಬಹುದು. 18 ವರ್ಷ ತುಂಬಿದಾಗ ಈ ಮೊತ್ತವನ್ನು ಆ ಹೆಣ್ಣು ಮಗುವೇ ಪಡೆಯುವಂತೆ ನಿಯಮ ರೂಪಿಸಲಾಗುವುದು. ಇದು ಹೆಣ್ಣು ಮಗುವಿನ ಮುಂದಿನ ಭವಿಷ್ಯಕ್ಕೆ ಒಂದು ಆಸರೆಯಾಗುತ್ತದೆ. ಈ ಯೋಜನೆಗೆ 234 ಕೋಟಿ ರೂ.ಗಳು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಈ ಸೌಲಭ್ಯವು ಮೊದಲ 2 ಹೆಣ್ಣುಮಕ್ಕಳಿಗೆ ಲಭ್ಯವಾಗಲಿದೆ.

129. ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್) ಈಗಲೂ ಸಹ ಯಶಸ್ವಿ ಕಾರ್ಯಕ್ರಮವಾಗಿದೆ. ಈಗಾಗಲೇ ಕರ್ನಾಟಕದಲ್ಲಿ 40,301 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ನಮಗೆ ಇನ್ನೂ 12,000

ಕೇಂದ್ರಗಳ ಅವಶ್ಯಕತೆಯಿದೆ. ಆದ್ದರಿಂದ 2006-07ನೇ ಸಾಲಿನಲ್ಲಿ 11,313 ಹೊಸ ಅಂಗನವಾಡಿ ಕೇಂದ್ರಗಳನ್ನು ಆರಂಭಿಸಲು ನಾನು ಉದ್ದೇಶಿಸಿದ್ದೇನೆ. ಈ ಉದ್ದೇಶಕ್ಕಾಗಿ ನಾನು ಹಂಚಿಕೆಯನ್ನು 2005-06ನೇ ಸಾಲಿನ 140 ಕೋಟಿ ರೂ.ಗಳಿಂದ 2006-07ನೇ ಸಾಲಿಗೆ 242 ಕೋಟಿ ರೂ.ಗಳಿಗೆ ಹೆಚ್ಚಿಸುತ್ತಿದ್ದೇನೆ. ಇದರಿಂದ ಶೇ.70 ರಷ್ಟು ಹೆಚ್ಚಳವಾಗಿದೆ.

130. ಅಂಗನವಾಡಿ ಕಾರ್ಯಕರ್ತೆಯರ ಮಾಸಿಕ ಗೌರವ ಧನದ ಮೊತ್ತವನ್ನು 100 ರೂ.ಗಳಂತೆ ಹಾಗೂ ಸಹಾಯಕರ ಗೌರವ ಧನವನ್ನು 50 ರೂ.ಗಳಂತೆ ಹೆಚ್ಚಿಸಲಾಗುವುದು.

131. ಗ್ರಾಮೀಣ ಸಮಾಜದ ಪರಿವರ್ತನೆಯಲ್ಲಿ ಸ್ತ್ರೀಶಕ್ತಿ ತಂಡಗಳು ಮಹತ್ವದ ಪಾತ್ರವನ್ನು ವಹಿಸುತ್ತಿವೆ. 2006-07ನೇ ಸಾಲಿನಲ್ಲಿ ಹೊಸದಾಗಿ 25,000 ಸ್ತ್ರೀಶಕ್ತಿ ತಂಡಗಳನ್ನು ರಚಿಸಲಾಗುವುದು. ಸ್ತ್ರೀಶಕ್ತಿ ತಂಡಗಳಿಗೆ ಸರ್ಕಾರದ ಕೊಡುಗೆಯಾಗಿ ನಾನು 20 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ. ಅಲ್ಲದೆ ಸ್ತ್ರೀಶಕ್ತಿ ತಂಡಗಳ ತರಬೇತಿಗಾಗಿ ಕೂಡ ಹಣವನ್ನು ಮೀಸಲಿಡಲಿದ್ದೇನೆ. ಸ್ತ್ರೀಶಕ್ತಿ ತಂಡಗಳು ತಯಾರಿಸುವ ಉತ್ಪನ್ನಗಳನ್ನು ಮಾರುಕಟ್ಟೆ ಮಾಡಲು ಮಾರುಕಟ್ಟೆ ಕೇಂದ್ರಗಳನ್ನು ಪ್ರತಿ ಜಿಲ್ಲೆಗೆ ಒಂದರಂತೆ ಸ್ಥಾಪಿಸಲು ಅಗತ್ಯ ಅನುದಾನವನ್ನು ಒದಗಿಸಲಿದ್ದೇನೆ.

132. ಹದಿನೈದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿನ ಧೈರ್ಯ, ಶೌರ್ಯಗಳನ್ನು ಗುರುತಿಸಲು ನಾನು ಬಾಲಕರಿಗಾಗಿ 'ಹೊಯ್ಸಳ' ಶೌರ್ಯ ಪ್ರಶಸ್ತಿಯನ್ನು ಬಾಲಕಿಯರಿಗಾಗಿ 'ಕೆಳದಿ ಚನ್ನಮ್ಮ' ಪ್ರಶಸ್ತಿಯನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಇದು 10,000 ರೂ.ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ಪ್ರತಿ ಜಿಲ್ಲೆಗೆ ಇಬ್ಬರು ಬಾಲಕರಿಗೆ, ಇಬ್ಬರು ಬಾಲಕಿಯರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ.

**ವಸತಿ**

*“ದಾರಿದ್ರ್ಯಕ್ಕೊದಗದ ದ್ರವ್ಯಪದಾರ್ಥದ*
*ಏರಿ ಇದ್ದರೇನು ಪರ್ವತವಿದ್ದರೇನು”*

*ಕನಕದಾಸರ ಕೀರ್ತನೆಯ ಈ ಸಾಲುಗಳು ಬಡಜನರ ನೆರವಿಗೆ*
*ಬಾರದ ಸಂಪನ್ಮೂಲಗಳ ಬಗ್ಗೆ ಹೇಳಿವೆ.*

133. ರಾಜ್ಯದ ಬಡಜನತೆಗೆ ವಸತಿ ಸೌಲಭ್ಯ ಒದಗಿಸುವ ಉದ್ದೇಶದ ಆಶ್ರಯ ವಸತಿ ಯೋಜನೆಯನ್ನು ಮುಂದುವರೆಸಲು ನಾನು ಉದ್ದೇಶಿಸಿದ್ದು 2006-07 ನೇ ಸಾಲಿನಲ್ಲಿ ಮೂರು ಲಕ್ಷ ಮನೆಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗುವುದು. ಇದರ ಜೊತೆಗೆ ಪ್ರತಿಮನೆ ನಿರ್ಮಾಣದ ವೆಚ್ಚವನ್ನು 2005-06 ರಿಂದ 20,000 ರೂ.ಗಳಿಂದ 25,000 ರೂ.ಗಳಿಗೆ ಹೆಚ್ಚಿಸಲು ನಾನು ಉದ್ದೇಶಿಸಿದ್ದೇನೆ.

134. ಕೊಳಚೆ ಪ್ರದೇಶದ ನಿವಾಸಿಗಳ ಅಭಿವೃದ್ಧಿಗೆ ಕೊಳಚೆ ನಿರ್ಮೂಲನ ಮಂಡಳಿಯು ಅನುಷ್ಠಾನಗೊಳಿಸುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಮಪಾಲಿನ ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯ ಮನೆಗಳನ್ನು 110 ಕೋಟಿ ರೂ.ಗಳ ವೆಚ್ಚದಲ್ಲಿ ಪೂರ್ಣಗೊಳಿಸಲಾಗುವುದು. ಇದಲ್ಲದೆ ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದಡಿ 791 ಸಮುದಾಯ ಶೌಚಾಲಯಗಳನ್ನು ಪ್ರತೀ ಶೌಚಾಲಯಕ್ಕೆ 40,000 ರೂ.ಗಳ ವೆಚ್ಚದಲ್ಲಿ ಪೂರ್ಣಗೊಳಿಸಲಾಗುವುದು.

**ಸಾರಿಗೆ**

135. ಜನಸಾಮಾನ್ಯರಿಗೆ ಕಡಿಮೆ ವೆಚ್ಚದ ಹಾಗೂ ಅನುಕೂಲಕರವಾದ ಸಾರ್ವಜನಿಕ ಸಾರಿಗೆ ಸೇವೆ ಒದಗಿಸುವುದು ಸರ್ಕಾರದ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ.

136. ವಿದ್ಯಾರ್ಥಿಗಳಿಗೆ ಒದಗಿಸುತ್ತಿರುವ ರಿಯಾಯಿತಿ ದರದ ಬಸ್ ಪಾಸ್ ಸೌಲಭ್ಯವನ್ನು 2006-07ನೇ ಸಾಲಿನಲ್ಲಿ 11 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿಸ್ತರಿಸಲು ಯೋಜಿಸಲಾಗಿದೆ. ಇದಕ್ಕೆ 273.36 ಕೋಟಿ ರೂ.ಗಳ ವೆಚ್ಚವಾಗಲಿದೆ. ಇದರಲ್ಲಿ ರಾಜ್ಯ ಸರ್ಕಾರವು 136.08 ಕೋಟಿ ರೂ.ಗಳನ್ನು ಮರು ಪಾವತಿ ಮಾಡಲಿದ್ದು ಉಳಿಕೆ ಮೊತ್ತದಲ್ಲಿ ಶೇ.25 ರಷ್ಟನ್ನು ವಿದ್ಯಾರ್ಥಿಗಳಿಂದ ಮತ್ತು ಉಳಿಕೆ ಶೇ.25 ರಷ್ಟನ್ನು ರಸ್ತೆ ಸಾರಿಗೆ ನಿಗಮಗಳು ತಮ್ಮ ಆದಾಯದಿಂದ ಭರಿಸಿಕೊಳ್ಳಲಿವೆ.

137. ನಮ್ಮ ಸ್ವಾತಂತ್ರ್ಯ ಯೋಧರು ಸಮಾಜದ ಗೌರವಯುತ ಆಸ್ತಿಯಾಗಿದ್ದಾರೆ. ಇವರನ್ನು ಗೌರವದಿಂದ ನಡೆಸಿಕೊಳ್ಳುವುದು ನಮ್ಮ ಕರ್ತವ್ಯ ಹಾಗೂ ಅವರಿಗೆ ನಾವು ಸಲ್ಲಿಸುವ ಕೃತಜ್ಞತೆಯಾಗಿದೆ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಯೋಧರಿಗೆ ರಸ್ತೆ ಸಾರಿಗೆ ಸಂಸ್ಥೆ ನೀಡಿರುವ ಪ್ರಯಾಣದ ಪಾಸ್‌ಗಳನ್ನು ಲಕ್ಸುರಿ ಬಸ್‌ಗಳಲ್ಲಿ ಕೂಡ ಬಳಸಿಕೊಳ್ಳುವ ಅನುಕೂಲ ಕಲ್ಪಿಸಲಾಗುವುದು.

138. ಹಲವಾರು ಆರ್‌ಟಿಓ ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಸ್ಥಳಾವಕಾಶದ ಕೊರತೆಯ ಜೊತೆಗೆ ಮೂಲಸೌಕರ್ಯಗಳ ಕೊರತೆಯಿಂದ ಕೂಡಾ ಬಳಲುತ್ತಿವೆ. ಎಲ್ಲಾ ಜಿಲ್ಲೆಗಳಲ್ಲೂ ಚಾಲನಾ ಪರೀಕ್ಷಾ ಪಥಗಳನ್ನು ಹಂತ ಹಂತವಾಗಿ

ನಿರ್ಮಿಸಲಾಗುವುದು. ಈ ಉದ್ದೇಶಕ್ಕಾಗಿ ನಾನು 10 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

139. ಆಧುನಿಕ ವಾಹನ ಪರೀಕ್ಷಾ ಕಿಟ್‌ಗಳನ್ನು ಖರೀದಿಸಲು ನಾನು 5 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

140. ನಮ್ಮ ರಸ್ತೆಗಳಲ್ಲಿ ಟ್ರಕ್‌ಗಳ ಸಂಚಾರದಟ್ಟಣೆ ಹೆಚ್ಚಾಗಿದ್ದು ಟ್ರಕ್ ನಿಲ್ದಾಣಗಳು ಅತ್ಯಗತ್ಯವಾಗಿವೆ. ರಾಜ್ಯಾದ್ಯಂತ ಟ್ರಕ್ ನಿಲ್ದಾಣಗಳ ನಿರ್ಮಾಣವನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುವುದು. ಇದಕ್ಕಾಗಿ 5 ಕೋಟಿ ರೂ.ಗಳನ್ನು ನಾನು ಮೀಸಲಿಡಲಿದ್ದೇನೆ.

**ಕಾರ್ಮಿಕ**

***"ಅನ್ನವ ನೀಡುವವರಿಗೆ ಧಾನ್ಯವೆಸೆವ ಲೋಕ,***
***ಅರ್ಥವ ಕೊಡುವವರಿಂಗೆ ಪಾಷಾಣವೆಸೆವ ಲೋಕ"***

*ಶರಣೆ ಅಕ್ಕಮಹಾದೇವಿಯ ವಚನದ ಈ ಸಾಲುಗಳು ಸಮಾಜದ ಒಳಿತಿಗೆ ದುಡಿಯುವವರ ಬಗ್ಗೆ ಸಮಾಜ ತಳೆಯಬೇಕಾದ ಮನೋಭಾವವನ್ನು ಬಿಂಬಿಸುತ್ತದೆ.*

141. ರಾಜ್ಯ ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ನಿಯಂತ್ರಣ ಮತ್ತು ಸೇವಾ ಸ್ಥಿತಿ) ಕಾಯಿದೆ 1996 ಮತ್ತು ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಶುಲ್ಕ ಕಾಯಿದೆ 1996 ನ್ನು ಅನುಷ್ಠಾನಗೊಳಿಸಿದೆ. ಇವುಗಳ ನಿಯಮಗಳನ್ನು ರೂಪಿಸಲಾಗಿದ್ದು ಶೀಘ್ರದಲ್ಲೇ ಅಧಿಸೂಚನೆ ಹೊರಡಿಸಲಾಗುವುದು. ಈ ಕಾಯಿದೆಗಳು 10 ಲಕ್ಷ ರೂ.ಗಳಿಗೆ ಮೇಲ್ಪಟ್ಟ ಎಲ್ಲ ಕಟ್ಟಡಗಳು ಹಾಗೂ ಇತರೆ ನಿರ್ಮಾಣಗಳ ಮೇಲೆ ಶೇ. 1 ರ ಲೆವಿಯನ್ನು ವಿಧಿಸಲು ಅವಕಾಶ ಕಲ್ಪಿಸಿದ್ದು, ಇದು ಕಾರ್ಮಿಕರ ಕಲ್ಯಾಣ ನಿಧಿಗೆ ಹೋಗುತ್ತದೆ. ನಿರ್ಮಾಣ

ಕಾರ್ಮಿಕರಿಗೆ ಅನುಕೂಲವಾಗುವಂತೆ ಈ ನಿಧಿಯನ್ನು ನಿರ್ವಹಿಸಲು ರಾಜ್ಯ ಕಲ್ಯಾಣ ಮಂಡಳಿಯನ್ನು ಸ್ಥಾಪಿಸಲಾಗುವುದು. ನಿರ್ಮಾಣ ವಲಯದ ಸುಮಾರು 15 ಲಕ್ಷ ಕಾರ್ಮಿಕರಿಗೆ ಇದರಿಂದ ಪಿಂಚಣಿ, ಅಂಗವಿಕಲ ವೇತನ, ಹೆರಿಗೆ ಭತ್ಯೆ ಅನುಕೂಲ, ವೈದ್ಯಕೀಯ ನೆರವು ಮತ್ತು ವಸತಿ ಸಾಲ ಹಾಗೂ ಉಪಕರಣಗಳ ಖರೀದಿ ಸಾಲ, ಕೌಶಲ್ಯ ಹೆಚ್ಚಳ ಇತ್ಯಾದಿಗಳ ಅನುಕೂಲ ಲಭ್ಯವಾಗಲಿದೆ. ಇದರ ಜೊತೆಗೆ ಈ ಕಾಯಿದೆಯಡಿ ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆಗಳು, ಹಾಗೂ ಸೇವಾಸ್ಥಿತಿಗಳನ್ನು ನಿಯಂತ್ರಿಸಬಹುದಾಗಿದೆ.

142. ಕೈಗಾರಿಕಾ ತರಬೇತಿ ಸಂಸ್ಥೆಗಳು (ಐಟಿಐ) ಪರಿಣಿತ ಮಾನವ ಶಕ್ತಿಯ ಅಭಿವೃದ್ಧಿಗೆ ಹೆಸರಾಗಿವೆ. ಉತ್ಪಾದನಾವಲಯ ಮತ್ತು ಸೇವಾ ವಲಯಗಳ ತ್ವರಿತ ಬೆಳವಣಿಗೆಗೆ ಅಗಾಧ ಪ್ರಮಾಣದ ಉದ್ಯೋಗಾವಕಾಶಗಳನ್ನು ಸೃಷ್ಟಿಸಿವೆ. ಇವುಗಳನ್ನು ಸದುಪಯೋಗ ಪಡಿಸಿಕೊಳ್ಳಲು ಇದು ಸಕಾಲ. ಐಟಿಐ ಶಿಕ್ಷಣ ಅಪೇಕ್ಷಿಸುವ ಬಹುತೇಕ ವಿದ್ಯಾರ್ಥಿಗಳು ಸಮಾಜದ ದುರ್ಬಲ ವರ್ಗಕ್ಕೆ ಸೇರಿರುತ್ತಾರೆ. ಐಟಿಐನ ಪ್ರಯೋಗಾಲಯಗಳಿಗೆ ಉಪಕರಣಗಳು ಮತ್ತು ನಿತ್ಯ ಬಳಕೆಯ ವಸ್ತುಗಳನ್ನು ಖರೀದಿಸಲು ನಾನು 5 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ. 2006-07 ನೇ ಸಾಲಿನಲ್ಲಿ ಐಟಿಐ ನಲ್ಲಿ 32 ಹೊಸ ಶಾಖೆಗಳನ್ನು ಆರಂಭಿಸಲು ನಾನು ಉದ್ದೇಶಿಸಿದ್ದೇನೆ. ಎಲ್ಲ 104 ಸರ್ಕಾರಿ ಐಟಿಐಗಳನ್ನು ಆಧುನೀಕರಿಸಿ ಇಂಟರ್‌ನೆಟ್ ಸಂಪರ್ಕ ಕಲ್ಪಿಸಲಾಗುವುದು. ಹಾಲಿ ಇರುವ ಐಟಿಐಗಳನ್ನು ಮೇಲ್ದರ್ಜೆಗೇರಿಸಲು ನಾನು 5.6 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ. ಇವುಗಳೆಲ್ಲದರ ಜೊತೆಗೆ ನಾನು ಐದು ಹೊಸ ಐಟಿಐಗಳನ್ನು ಆರಂಭಿಸಲು ಉದ್ದೇಶಿಸಿದ್ದು ಅಗತ್ಯ ಅನುದಾನ ಹಂಚಿಕೆಯನ್ನು ಮಾಡಲಾಗಿದೆ. ಐಟಿಐ ಸಿಬ್ಬಂದಿಗಳಿಗಾಗಿಯೇ

ಒಂದು ತರಬೇತಿ ಕೇಂದ್ರವನ್ನು ಸ್ಥಾಪಿಸಲು ಅಗತ್ಯವಾದ ಅನುದಾನವನ್ನು ಒದಗಿಸಲು ನಾನು ಉದ್ದೇಶಿಸಿದ್ದೇನೆ.

**ನೀರಾವರಿ**

143. ಹೆಚ್ಚು ನೀರಾವರಿ ಸಾಮರ್ಥ್ಯ ಸೃಜಿಸುವುದು ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಪ್ರಮುಖ ಅಂಶವಾಗಿದೆ. ಆದ್ದರಿಂದ ನಮ್ಮ ಸರ್ಕಾರವು ಯಾವುದೇ ನೀರಾವರಿ ಯೋಜನೆಗಳು ಹಣದ ಕೊರತೆಯಿಂದ ಕುಂಠಿತಗೊಳ್ಳದಂತೆ ನೋಡಿಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ **ನಾವು 2006-07ನೇ ಸಾಲಿನಲ್ಲಿ 39 ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಉದ್ದೇಶಿಸಿದ್ದೇವೆ.** ಕೃಷ್ಣಾ, ಕರ್ನಾಟಕ ಮತ್ತು ಕಾವೇರಿ ನೀರಾವರಿ ನಿಗಮಗಳು ಕೈಗೆತ್ತಿಕೊಂಡಿರುವ ಕಾಮಗಾರಿಗಳ ಜೊತೆಗೆ ಭದ್ರಾ ಮತ್ತು ತುಂಗಭದ್ರಾ ಯೋಜನೆಗಳ ಆಧುನೀಕರಣ ಕಾಮಗಾರಿಗಳನ್ನು ಸಹ ನಾವು ಕೈಗೆತ್ತಿಕೊಳ್ಳಲಿದ್ದೇವೆ. ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕಳಸಾ ಬಂಡೂರಿ ಯೋಜನೆಯನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಲು ನಮ್ಮ ಸರ್ಕಾರವು ಕಟಿಬದ್ಧವಾಗಿದೆ. ನೀರಾವರಿ ಕಾಮಗಾರಿಗಳಿಗೆ 2006-07 ನೇ ಸಾಲಿನಲ್ಲಿ ಒಟ್ಟು 2972 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ. 2005-06ನೇ ಸಾಲಿನಲ್ಲಿ ಈ ಮೊತ್ತ 2068 ಕೋಟಿ ರೂ.ಗಳಾಗಿತ್ತು. ಒಟ್ಟಿನಲ್ಲಿ ನೀರಾವರಿ ಕಾಮಗಾರಿಗಳಿಗೆ ನೀಡುವ ಹಣದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. 44ರಷ್ಟು ಹೆಚ್ಚಳವಾಗಿರುತ್ತದೆ.

**ಸಣ್ಣ ನೀರಾವರಿ**

**144.** ಸಣ್ಣ ನೀರಾವರಿ ಮೂಲಗಳು ಕರ್ನಾಟಕದಲ್ಲಿ ತುಂಬಾ ಪ್ರಾಮುಖ್ಯವಾಗಿವೆ. ಇವುಗಳನ್ನು ಪುನಶ್ಚೇತನಗೊಳಿಸುವುದು ತುರ್ತು ಅಗತ್ಯವಾಗಿದೆ. ಈ ಕಾರ್ಯಕ್ಕೆ ಅಪಾರ ಆರ್ಥಿಕ ಸಂಪನ್ಮೂಲಗಳ

ಅಗತ್ಯವಿರುವುದರಿಂದ ಪುನಶ್ಚೇತನ ಕಾರ್ಯಕ್ಕೆ ವಿದೇಶಿ ನೆರವನ್ನು ಪಡೆದು ಯೋಜನೆಗಳನ್ನು ರೂಪಿಸಲಾಗುವುದು. ಅಗತ್ಯವಿರುವ ಕಡೆ ನೂತನ ಕೆರೆಗಳನ್ನು ನಿರ್ಮಿಸುವ ಜೊತೆಗೆ ಹಳೆಯ ನೀರಾವರಿ ಕೆರೆಗಳನ್ನು ಸಂರಕ್ಷಿಸಿ ಅಭಿವೃದ್ಧಿ ಪಡಿಸುವುದು ಅಗತ್ಯವಿದೆ. ಸಣ್ಣ ನೀರಾವರಿ ಕಾಮಗಾರಿಗಳಿಗಾಗಿ 2006-07ನೇ ಸಾಲಿನಲ್ಲಿ ನಾನು 672 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ. ಈ ಕ್ರಮದಿಂದ ಸಣ್ಣ ನೀರಾವರಿಗೆ ಕಳೆದ ಸಾಲಿಗೆ ಹೋಲಿಸಿದರೆ ಶೇ.53 ರಷ್ಟು ಹೆಚ್ಚಳವಾಗಿದೆ.

**145.** ಸಣ್ಣ ಕೆರೆಗಳ ಒತ್ತುವರಿ ಸಮಸ್ಯೆಗಳು ತೀವ್ರ ಆತಂಕದ ವಿಷಯವಾಗಿದೆ. ಕರ್ನಾಟಕವು ಕೆರೆಗಳ ಸಂರಕ್ಷಣೆ ಮತ್ತು ಪುನಶ್ಚೇತನಕ್ಕಾಗಿ ಈಗಾಗಲೆ ಕೆರೆ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಿದೆ. ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲು ಮತ್ತು ನಂತರ ಅವುಗಳನ್ನು ಸಂರಕ್ಷಿಸಲು ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನು ಮತ್ತಷ್ಟು ಬಲಪಡಿಸಲಾಗುವುದು.

**146.** ಸಣ್ಣ ನೀರಾವರಿ ಯೋಜನೆಗಳ ಕಾರ್ಯಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸುವುದು ಅತ್ಯಗತ್ಯ. ಆದ್ದರಿಂದ ನಾನು ಪ್ರಗತಿ ಪರಿಶೀಲನೆಗಾಗಿ ಉನ್ನತಮಟ್ಟದ ತಜ್ಞರ ಸಮಿತಿಯನ್ನು ರಚಿಸಲು ಉದ್ದೇಶಿಸಿದ್ದೇನೆ.

## ಲೋಕೋಪಯೋಗಿ

147. ಲೋಕೋಪಯೋಗಿ ಇಲಾಖೆಗೆ 2006-07 ನೇ ಸಾಲಿನಲ್ಲಿ 2382 ಕೋಟಿ ರೂ.ಗಳ ಅನುದಾನ ಹಂಚಿಕೆ ಮಾಡಲು ಉದ್ದೇಶಿಸಿದ್ದು ಇದು 2005-06 ನೇ ಸಾಲಿಗೆ ಹೋಲಿಸಿದರೆ ಶೇ. 50 ರ ಏರಿಕೆಯಾಗಿರುತ್ತದೆ.

148. ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿ ಮತ್ತು ನಿರ್ವಹಣೆಗೆ ನಾವು ವಿಶೇಷ ಒತ್ತು ನೀಡುತ್ತಿದ್ದೇವೆ. ಈ ನಿಟ್ಟಿನಲ್ಲಿ ನಾನು 2006-07ನೇ ಸಾಲಿನಲ್ಲಿ 607 ಕೋಟಿ ರೂ.ಗಳ ಅನುದಾನ ಹಂಚಿಕೆ ಮಾಡುತ್ತಿದ್ದು ಇದು 2005-06ನೇ ಸಾಲಿಗೆ ಹೋಲಿಸಿದರೆ ಶೇ. 95 ರಷ್ಟು ಏರಿಕೆಯಾಗಿದೆ.

149. ಲೋಕೋಪಯೋಗಿ ಇಲಾಖೆಯ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಗೆ ಪ್ರತೀ ವಿಧಾನಸಭಾ ಕ್ಷೇತ್ರಕ್ಕೆ 50 ಲಕ್ಷ ರೂ.ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ಮುಂದಿನ ಮೂರು ವರ್ಷಗಳಲ್ಲಿ ಬೆಂಗಳೂರು ನಗರದ ಸುತ್ತಮುತ್ತಲಿನ ಲೋಕೋಪಯೋಗಿ ಇಲಾಖೆಯ ರಸ್ತೆಯನ್ನು 600 ಕೋಟಿ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವುದು. 2006-07ನೇ ಸಾಲಿಗೆ 200 ಕೋಟಿ ರೂ.ಗಳನ್ನು ನೀಡಲಾಗುವುದು.

## ಪ್ರವಾಸೋದ್ಯಮ

150. ಇದು ಸುವರ್ಣ ಕರ್ನಾಟಕ ವರ್ಷ. ಕರ್ನಾಟಕದಲ್ಲಿ ಹಲವಾರು ಪ್ರವಾಸಿ ಆಕರ್ಷಣೀಯ ಸ್ಥಳಗಳಿವೆ. ಭಾರತದ ಗೌರವಾನ್ವಿತ ರಾಷ್ಟ್ರಪತಿಗಳು ದುಬೈನಲ್ಲಿನ ರಾಜರ ಜೊತೆ ತಮ್ಮ ಅನುಭವ ಹಂಚಿಕೊಳ್ಳುವಾಗ ಪ್ರವಾಸೋದ್ಯಮದ ಅಭಿವೃದ್ಧಿಯೆಂದರೆ ಕೇವಲ ಪ್ರವಾಸಿ ಸ್ಥಳಗಳ ಅಭಿವೃದ್ಧಿಯಲ್ಲ. ಪ್ರವಾಸಿಗರ ವಿವಿಧ ಅಗತ್ಯಗಳನ್ನು ಅರಿತು ಅವುಗಳೆಲ್ಲವನ್ನೂ ಸಮಗ್ರವಾಗಿ ಅಭಿವೃದ್ಧಿಪಡಿಸುವುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಪ್ರವಾಸೋದ್ಯಮವನ್ನು ಜೀವನೋಪಾಯಕ್ಕಾಗಿ ಮಾಡುತ್ತಿರುವ ಹೊಸ ಮೂಲವೆಂದು ಪರಿಗಣಿಸಿ ಅಭಿವೃದ್ಧಿಪಡಿಸಬೇಕು.

151. ಮೊದಲನೆಯದಾಗಿ ನಮಗೆ ವೃತ್ತಿನಿರತ ಮತ್ತು ಸ್ನೇಹಯುತರಾದ ಪ್ರವಾಸಿ ಕಾರ್ಯಾಚರಣೆದಾರರ ಅವಶ್ಯಕತೆಯಿದೆ. ಅವರು ವಿವಿಧ ಭಾಷೆಯಲ್ಲಿ ಪರಿಣಿತಿ ಹೊಂದಿರಬೇಕು ಮತ್ತು ಕಲೆ, ಸಂಸ್ಕೃತಿ, ಇತಿಹಾಸಗಳ ಬಗ್ಗೆ ಅರಿವುಳ್ಳವರಾಗಿರಬೇಕು. ಈ ಹೊಸ ಪಡೆಯನ್ನು ಅಭಿವೃದ್ಧಿಪಡಿಸಲು ನಾನು 5 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ. ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಪ್ರವಾಸೋದ್ಯಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೊಸ ಕೋರ್ಸ್‌ಗಳನ್ನು ಆರಂಭಿಸಲು ಪ್ರವಾಸೋದ್ಯಮ ಇಲಾಖೆಯು ಅಗತ್ಯ ಉತ್ತೇಜನ ಕ್ರಮಗಳನ್ನು ಕೈಗೊಳ್ಳಲಿದೆ.

152. ಜಾಗತಿಕ ಮಟ್ಟದ ಮೂಲಸೌಕರ್ಯಗಳನ್ನು ಪ್ರವಾಸಿ ಸ್ಥಳಗಳಲ್ಲಿ ಕಡಿಮೆ ದರದಲ್ಲಿ ಒದಗಿಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಕೆಮ್ಮಣ್ಣುಗುಂಡಿ, ನಂದಿಬೆಟ್ಟ, ಕೊಡಚಾದ್ರಿ, ಜೋಗ್‌ಜಲಪಾತ, ಬಳ್ಳಾರಿ ಕೋಟೆ, ಪಟ್ಟದಕಲ್ಲು, ಚಿತ್ರದುರ್ಗ, ಹಂಪಿ ಮತ್ತು ಇತರೆ ಪ್ರಮುಖ ಸ್ಥಳಗಳಲ್ಲಿ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕು. ಪ್ರವಾಸಿಗರಿಗೆ ಮನರಂಜನೆಯ ಜೊತೆಗೆ ಮಾಹಿತಿಯನ್ನು ನೀಡುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಇದರಿಂದ ಪ್ರವಾಸಿಗರ ಸಂಖ್ಯೆಯಲ್ಲಿ ಹೆಚ್ಚಳವಾಗಿ ಇದು ಸ್ಥಳೀಯ ಯುವಕರಿಗೆ ಉದ್ಯೋಗಾವಕಾಶ ಒದಗಿಸುತ್ತದೆ. ಈ ಉದ್ದೇಶಕ್ಕಾಗಿ ನಾನು 40 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ. ಪ್ರವಾಸೋದ್ಯಮ ಪ್ರಚಾರಕ್ಕಾಗಿ ಸಾಕಷ್ಟು ಹಣವನ್ನು ಒದಗಿಸಲು ನಾನು 5 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.

153. ಶಾಲಾ ಮಕ್ಕಳು ಪ್ರವಾಸ ಕೈಗೊಳ್ಳುವುದರಿಂದ ಮನೋವಿಕಾಸದ ಜೊತೆಗೆ ಜ್ಞಾನಾರ್ಜನೆಯಾಗುತ್ತದೆ. ಆದ್ದರಿಂದ ಶಾಲಾ ಮಕ್ಕಳ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮಕ್ಕೆ ಒತ್ತು ನೀಡಲಾಗುವುದು.

## 'ಕನ್ನಡ ಸಂಸ್ಕೃತಿ'

*ರಾಷ್ಟ್ರಕವಿ ಕುವೆಂಪುರವರು ಹೇಳಿದಂತೆ ಕರ್ನಾಟಕ ಕೇವಲ ಒಂದು ಹೆಸರಲ್ಲ.*

***ಕರ್ನಾಟಕ ಎಂಬುದೇನು***
***ಹೆಸರೆ ಬರಿಯ ಮಣ್ಣಿಗೆ?***
***ಮಂತ್ರಕಣಾ! ಶಕ್ತಿಕಣಾ!***
***ತಾಯಿಕಣಾ! ದೇವಿಕಣಾ!***
***ಬೆಂಕಿಕಣಾ! ಸಿಡಿಲುಕಣಾ!***

154. ನವಂಬರ್ 1, 1956. ಕನ್ನಡಿಗರ ಪಾಲಿಗೆ ಸ್ಮರಣೀಯ ದಿನ. ಅಂದು ಅಖಂಡ ಕನ್ನಡಿಗರ ಕನಸಿನಂತೆ ಕರ್ನಾಟಕದ ಏಕೀಕರಣವಾಯಿತು. ಈ ಏಕೀಕರಣಕ್ಕೆ ಐವತ್ತು ವರ್ಷಗಳಾಗಿರುವ ಸಂದರ್ಭವನ್ನು ಸ್ಮರಣೀಯ ರೀತಿಯಲ್ಲಿ ಆಚರಿಸಲು ಸರ್ಕಾರ ಸರ್ವಸನ್ನದ್ಧವಾಗಿದೆ. ಸುವರ್ಣ ಕರ್ನಾಟಕ ವರ್ಷಾಚರಣೆಯ ಸಂದರ್ಭದಲ್ಲಿ ಸರ್ಕಾರವು ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

- 2006ರ ನವಂಬರ್‌ನಲ್ಲಿ ಶಿವಮೊಗ್ಗದಲ್ಲಿ ವಿಶ್ವ ಕನ್ನಡ ಸಮ್ಮೇಳನ ಆಚರಣೆ.

- ವಿಶ್ವ ಪ್ರಾತಿನಿಧಿಕ ಸಾಹಿತ್ಯದ 100 ಪುಸ್ತಕಗಳ ಕನ್ನಡ ಅನುವಾದ.

- ಉಡುಪಿ ಮತ್ತು ಮಡಿಕೇರಿಗಳಲ್ಲಿ ಸುವರ್ಣ ಸಾಂಸ್ಕೃತಿಕ ಸಮುಚ್ಛಯಗಳ ನಿರ್ಮಾಣ.

- ಕನ್ನಡ ವಿಶ್ವಕೋಶ, ಕನ್ನಡ-ಇಂಗ್ಲಿಷ್ ನಿಘಂಟುಗಳ ಪ್ರಕಟಣೆ.

- ವಿಧಾನಸೌಧದ ಮುಂಭಾಗ ಮತ್ತು ಲಾಲ್‌ಬಾಗ್‌ನಲ್ಲಿ ಜಾನಪದ ಜಾತ್ರೆ ಕಾರ್ಯಕ್ರಮಕ್ಕೆ 5 ಕೋಟಿ ರೂ.ಗಳ ಧನಸಹಾಯ.

- ಜಿಲ್ಲಾ ಉತ್ಸವ ಮತ್ತು ಗಡಿ ಉತ್ಸವಗಳಿಗೆ 70 ಲಕ್ಷ ರೂ.ಗಳ ನೆರವು.

- ಕನ್ನಡ ಸಾಹಿತ್ಯ ಪರಿಷತ್ತಿನ ಆಧುನೀಕರಣಕ್ಕೆ 1 ಕೋಟಿ ರೂ.

- ತಾಳೆಗರಿ ಹಸ್ತಪ್ರತಿಯಲ್ಲಿರುವ ಪ್ರಾಚೀನ ಸಾಹಿತ್ಯದ ಪರಿಷ್ಕರಣೆ ಮತ್ತು ಪ್ರಕಟಣೆ. ಮೂಲ ತಾಳೆಗರಿಗಳ ಸಂರಕ್ಷಣೆ.

- ಶಿಲ್ಪಕಲೆಗೆ ಹೆಸರಾದ ಶಿವಾರಪಟ್ಟಣ ಅಭಿವೃದ್ಧಿಗೆ 1 ಕೋಟಿ ರೂ.

- ಮಾಸ್ತಿ ವೆಂಕಟೇಶ ಅಯ್ಯಂಗಾರ್ ಹೆಸರಿನಲ್ಲಿ ವಸತಿಶಾಲೆ ಸ್ಥಾಪನೆ.

- ಜನರಲ್ ತಿಮ್ಮಯ್ಯನವರು ಕರ್ನಾಟಕದ ಹೆಮ್ಮೆಯ ಪುತ್ರ. ಭಾರತೀಯ ಸೇನೆಯ ಪ್ರಥಮ ದಂಡನಾಯಕರಾಗಿದ್ದುದು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯ. ಈ ವರ್ಷ ಅವರ ಜನ್ಮಶತಾಬ್ಧಿ. ಈ ಹಿನ್ನೆಲೆಯಲ್ಲಿ ಅವರ ಮಡಿಕೇರಿಯ ನಿವಾಸವನ್ನು ಸಂರಕ್ಷಿಸಿ ಸ್ಮಾರಕವನ್ನಾಗಿ ಅಭಿವೃದ್ಧಿ ಪಡಿಸಲಾಗುವುದು.

- ರಾಷ್ಟ್ರಕವಿ ಪ್ರಶಸ್ತಿಯನ್ನು ಕುವೆಂಪುರವರ ನಂತರ ಯಾರಿಗೂ ನೀಡಿರುವುದಿಲ್ಲ. ಸುವರ್ಣ ಕರ್ನಾಟಕದ ಸಂದರ್ಭದಲ್ಲಿ ಈ

ಪ್ರಶಸ್ತಿಯನ್ನು ಪುನರುಜ್ಜೀವನಗೊಳಿಸಲಾಗುವುದು. ಪ್ರಶಸ್ತಿ ಆಯ್ಕೆಗೆ ತಜ್ಞರ ಸಮಿತಿ ರಚಿಸಲಾಗುವುದು. ಪ್ರಶಸ್ತಿಗಾಗಿ 10 ಲಕ್ಷ ರೂ.ಗಳನ್ನು ಮೀಸಲಿಡಲಾಗುವುದು.

- ಸಮಾಜಕ್ಕೆ ಅತ್ಯುಪಯುಕ್ತ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಗುರುತಿಸಿ ಅವರಿಗೆ 'ಬಸವ ಪುರಸ್ಕಾರ' ಪ್ರಶಸ್ತಿಯನ್ನು ನೀಡಲಾಗುವುದು. ಪ್ರಶಸ್ತಿಯು 10 ಲಕ್ಷ ರೂ.ಗಳ ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

**'ಚಲನಚಿತ್ರ'**

**155.** ರಾಜ್ಯದಲ್ಲಿ ಚಲನಚಿತ್ರ ಉದ್ಯಮವನ್ನು ಬೆಳೆಸಲು ಸರ್ಕಾರ ಬದ್ಧವಾಗಿದೆ. ಪರಭಾಷಾ ಚಲನಚಿತ್ರಗಳ ಹಾವಳಿಯನ್ನು ತಡೆದು ಸದಭಿರುಚಿಯ ಕನ್ನಡ ಚಿತ್ರಗಳನ್ನು ಪ್ರೋತ್ಸಾಹಿಸಲು ಸರ್ಕಾರ ಸಂಕಲ್ಪಿಸಿದೆ. ಗುಣಾತ್ಮಕ, ಚಲನಚಿತ್ರಗಳಿಗೆ ಸಹಾಯ ಧನ ನೀಡುವ ಯೋಜನೆಯನ್ನು ಮುಂದುವರಿಸಿ 2006-07ನೇ ಸಾಲಿನಿಂದ ವಾರ್ಷಿಕ 20 ಚಿತ್ರಗಳಿಗೆ ಬದಲಾಗಿ 30 ಉತ್ತಮ ಚಿತ್ರಗಳಿಗೆ ತಲಾ 10 ಲಕ್ಷ ರೂ.ಗಳ ಸಹಾಯ ಧನ ನೀಡಲಾಗುವುದು. ಕಲಾವಿದರಿಗೆ ನೀಡುವಷ್ಟೇ ನಗದು ಬಹುಮಾನವನ್ನು ಪ್ರಶಸ್ತಿ ಪುರಸ್ಕೃತ ತಂತ್ರಜ್ಞರಿಗೆ ನೀಡಲು ಕ್ರಮಕೈಗೊಳ್ಳಲಾಗುವುದು.

**ಯುವಜನ ಸೇವೆ**

**156.** ಗ್ರಾಮೀಣ ಕ್ರೀಡೆಗಳ ಅಭಿವೃದ್ಧಿ ಮತ್ತು ಪ್ರತಿಭಾವಂತ ಗ್ರಾಮೀಣ ಕ್ರೀಡಾ ಪಟುಗಳನ್ನು ಪ್ರೋತ್ಸಾಹಿಸಲು ಗ್ರಾಮೀಣ ಕ್ರೀಡಾ ನಿಧಿ ಸ್ಥಾಪಿಸಲಾಗುವುದು. ಇದಕ್ಕೆ 5 ಕೋಟಿ ರೂ.ಗಳನ್ನು ಒದಗಿಸಲಿದ್ದೇನೆ.

## ಯುವಕರಿಗೆ ಸ್ವ ಉದ್ಯೋಗ

157. ಯುವಶಕ್ತಿಯನ್ನು ರಚನಾತ್ಮಕ ಮತ್ತು ಆದಾಯಜನಕ ಚಟುವಟಿಕೆಗಳಲ್ಲಿ ತೊಡಗಿಸಲು ಅವರಿಗೆ ಉದ್ಯೋಗ ಒದಗಿಸಲು ಸ್ವಸಹಾಯ ಗುಂಪುಗಳನ್ನು ರಚಿಸಲಾಗುವುದು. ಜಿಲ್ಲಾ ಕೈಗಾರಿಕಾ ಕೇಂದ್ರ ಇದರ 'ನೋಡಲ್' ಸಂಸ್ಥೆಯಾಗಿರುತ್ತದೆ. ಸ್ವಸಹಾಯ ಗುಂಪುಗಳನ್ನು ರಚಿಸಿ ಒಂದು ಲಕ್ಷ ಯುವಕರನ್ನು ಸದಸ್ಯರನ್ನಾಗಿಸಿ ಅವರು ಸ್ವಉದ್ಯೋಗ ಕೈಗೊಳ್ಳುವುದಲ್ಲದೆ ಇತರ ಆದಾಯಜನಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪೂರಕವಾಗಿ 5 ಕೋಟಿ ರೂ.ಗಳನ್ನು ಒದಗಿಸಲಿದ್ದೇನೆ.

## ಕೈಗಾರಿಕೆ ಮತ್ತು ವಾಣಿಜ್ಯ

158. ಹೊಸ ಕೈಗಾರಿಕಾ ನೀತಿಯನ್ನು ಸರ್ಕಾರವು ಶೀಘ್ರದಲ್ಲಿಯೇ ಘೋಷಿಸಲಿದೆ. ಇದು 2006-11ರ ಅವಧಿಯಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಮಾರ್ಗನಕ್ಷೆಯನ್ನು ನೀಡಲಿದೆ.

159. ಸಣ್ಣ ಉದ್ದಿಮೆದಾರರು ಸಹಾಯಧನದ ಬಾಕಿಪಾವತಿ ಸಮಸ್ಯೆಯಿಂದ ಆರ್ಥಿಕ ತೊಂದರೆಗೆ ಒಳಗಾಗಿದ್ದಾರೆ. ಈ ಸಹಾಯಧನದ ಬಾಕಿ ಪಾವತಿಯನ್ನು ಬಿಡುಗಡೆ ಮಾಡಲು ಹೆಚ್ಚುವರಿ ಹಣವನ್ನು ಹಂಚಿಕೆ ಮಾಡಲಾಗುವುದು.

160. ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳನ್ನು ಮುಂದೆ ನಡೆಸಲು ಇರುವ ಸಾಧ್ಯತೆಗಳನ್ನು ಪರಿಶೀಲಿಸಿ ಪುನರುಜ್ಜೀವನಗೊಳಿಸಲಾಗುವುದು. ಲಾಭದಲ್ಲಿರುವ ಕಂಪನಿಗಳನ್ನು ಖಾಸಗೀಕರಿಸದೆ ಸರ್ಕಾರಿ ಸ್ವಾಮ್ಯದಲ್ಲಿಯೆ ಉಳಿಸಿಕೊಂಡು ಮುಂದುವರಿಸಲಾಗುವುದು.

161. ಅತೀ ಸಣ್ಣ ಕೈಗಾರಿಕೆಗಳ ವಲಯವು ಉದ್ಯಮಶೀಲರಿಗೆ ಪೋಷಣೆ ನೀಡುವುದಲ್ಲದೆ ಇತರರಿಗೂ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದಿದೆ. ಈ ನಿಟ್ಟಿನಲ್ಲಿ ನಾನು ರಾಜ್ಯಾದ್ಯಂತ ಅದರಲ್ಲೂ ವಿಶೇಷವಾಗಿ ಡಾ॥ ನಂಜುಂಡಪ್ಪ ವರದಿಯಲ್ಲಿ ಸೂಚಿಸಿರುವ ಹಿಂದುಳಿದ ಪ್ರದೇಶಗಳಲ್ಲಿ 25 ಕೈಗಾರಿಕಾ ಸಮುಚ್ಚಯಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಈ ಸಂಬಂಧ ನಬಾರ್ಡ್‌ನ ಆರ್ಥಿಕ ಸಹಾಯವನ್ನು ಕೋರುತ್ತಿದ್ದು ನಾನು ಈ ಉದ್ದೇಶಕ್ಕಾಗಿ 8 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಿದ್ದೇನೆ.

162. ಖಾದಿ ಮತ್ತು ಗುಡಿ ಕೈಗಾರಿಕೆಗಳು ದೂರದ ಕುಗ್ರಾಮಗಳಲ್ಲಿ ಕೂಡ ಸ್ವಯಂಉದ್ಯೋಗ ಕಲ್ಪಿಸುವ ಸಾಮರ್ಥ್ಯ ಹೊಂದಿವೆ. ಈಗಾಗಲೇ ಸುಮಾರು 30,000 ಕರಕುಶಲಗಾರರು ಖಾದಿ ವಲಯವನ್ನು ಅವಲಂಬಿಸಿದ್ದಾರೆ. ಈ ಸಮುದಾಯಕ್ಕೆ ಮತ್ತಷ್ಟು ಬೆಂಬಲ ಒದಗಿಸಲು ಸುಧಾರಿತ ಚರಕಗಳನ್ನು ನೀಡಲು ಉದ್ದೇಶಿಸಲಾಗಿದೆ. ಇದು ಅವರ ಉತ್ಪಾದಕತೆ ಮತ್ತು ಸಂಪಾದನೆ ವೃದ್ಧಿಗೆ ನೆರವಾಗಲಿದೆ. ಇಂತಹ 5000 ಸುಧಾರಿತ ನೂಲಿನ ಚರಕಗಳನ್ನು ಖಾದಿ ಸಹಕಾರ ಸಂಘಗಳ ಮೂಲಕ ಸಹಾಯಧನದ ನೆರವಿನೊಂದಿಗೆ ನೀಡಲು ಉದ್ದೇಶಿಸಲಾಗಿದ್ದು ಆಧುನೀಕರಣ, ತಂತ್ರಜ್ಞಾನ ಮತ್ತು ತರಬೇತಿ ಯೋಜನೆಯಡಿ 3 ಕೋಟಿ ರೂ.ಗಳನ್ನು ಮೀಸಲಿಡಲಾಗುವುದು.

163. ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಮೆಕ್ಕೆಜೋಳ ಪ್ರಧಾನ ಬೆಳೆಯಾಗಿದೆ. ದಾವಣಗೆರೆಯನ್ನು ಕೃಷಿವಸ್ತು ರಫ್ತುವಲಯವನ್ನಾಗಿ ಗುರುತಿಸಿ ಮೆಕ್ಕೆಜೋಳದ ರಫ್ತಿಗೆ ಉತ್ತೇಜನ ನೀಡಲಾಗುವುದು. ಈ ಕ್ರಮದಿಂದ ಹಾವೇರಿ, ಶಿವಮೊಗ್ಗ, ಬಳ್ಳಾರಿ, ಕೊಪ್ಪಳ ಮತ್ತು ಇತರೆ ಜಿಲ್ಲೆಯ ಮೆಕ್ಕೆ ಜೋಳ ಬೆಳೆಯುವ ರೈತರಿಗೆ ಅನುಕೂಲವಾಗಲಿದೆ.

**ರೇಷ್ಮೆ ಮತ್ತು ಜವಳಿ**

164. ರೇಷ್ಮೆಯು ಕೃಷಿ ಆಧಾರಿತ, ಕಾರ್ಮಿಕ ಅವಲಂಬಿತ ಹಾಗೂ ರಫ್ತು ಅವಕಾಶಗಳನ್ನುಳ್ಳ ಗುಡಿ ಕೈಗಾರಿಕೆಯಾಗಿದೆ. ಉತ್ತಮ ಗುಣಮಟ್ಟದ ರೇಷ್ಮೆ ಉತ್ಪಾದನೆ ಮತ್ತು ಹೆಚ್ಚಿನ ಇಳುವರಿಗೆ ನೆರವು ನೀಡುವ ಕಾರ್ಯಕ್ರಮಕ್ಕೆ ನಾನು 20.75 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ. ಈ ಕಾರ್ಯಕ್ರಮದಲ್ಲಿ ಮತ್ತು ಇತರೆ ಯಾವುದೇ ನಿಯಮಿತ ಕಾರ್ಯಕ್ರಮಗಳ ವ್ಯಾಪ್ತಿಯಲ್ಲಿ ಸೇರದಿರುವ ಅಂಶಗಳಿಗೆ ಒತ್ತು ನೀಡಲು ನಾನು 'ರೇಷ್ಮೆ ವರದಾನ ಯೋಜನೆ' ಎನ್ನುವ ಸಮಗ್ರ ಯೋಜನೆಯನ್ನು ಆರಂಭಿಸಲು ಉದ್ದೇಶಿಸಿದ್ದೇನೆ. ಈ ಯೋಜನೆಯು ರೇಷ್ಮೆ ವಲಯಕ್ಕೆ ಅಗತ್ಯವಾದ ಹೆಚ್ಚಿನ ಒತ್ತು ನೀಡಲಿದ್ದು ಈ ಯೋಜನೆಗಾಗಿ ನಾನು 5 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

**ನೇಕಾರರ ಪ್ಯಾಕೇಜ್**

165. ನೇಕಾರರಿಗೆ ಸಂಬಂಧಿಸಿದಂತೆ 2006-07 ನೇ ಸಾಲಿನಲ್ಲಿ ಈಗಿರುವ 10 ಹೆಚ್‌ಪಿಯಿಂದ 20 ಹೆಚ್‌ಪಿವರೆಗಿನ ವಿದ್ಯುತ್ ಮಗ್ಗಗಳಿಗೂ ಕೂಡ ವಿದ್ಯುತ್ ಸಹಾಯಧನವನ್ನು ವಿಸ್ತರಿಸಲು ಉದ್ದೇಶಿಸಿದ್ದೇನೆ. ಎರಡನೆಯದಾಗಿ, ಪ್ರಸ್ತುತ ನೇಕಾರರು ಗ್ರಾಮೀಣ ಸಹಕಾರ ಸಂಘಗಳಲ್ಲಿ ಪಡೆದಿರುವ ಸಾಲದ ಬಡ್ಡಿ ಮತ್ತು ದಂಡ ಬಡ್ಡಿಗೆ ನೀಡುತ್ತಿರುವ ರಿಯಾಯಿತಿ ಸೌಲಭ್ಯವನ್ನು ಪಟ್ಟಣ ಸಹಕಾರಿ ಬ್ಯಾಂಕುಗಳಿಂದ ಪಡೆದಿರುವ ಸಾಲಗಳಿಗೂ ಸಹ ವಿಸ್ತರಿಸಲು ನಾನು ಉದ್ದೇಶಿಸಿದ್ದೇನೆ. ಏಕೆಂದರೆ ಈ ಸಹಕಾರ ಸಂಘಗಳ ಸಾಲದ ಬಡ್ಡಿದರವು ಹೆಚ್ಚಾಗಿರುತ್ತದೆ. ಆದ್ದರಿಂದ ನೇಕಾರರು ಸಹಕಾರಿ ಸಂಸ್ಥೆಗಳಿಂದ ಪಡೆದಿರುವ ಸಾಲದ ಬಡ್ಡಿದರವನ್ನು ಶೇ. 4 ಕ್ಕೆ ಮಿತಿಗೊಳಿಸಿ ನೇಕಾರರ ವಿಶೇಷ ಪ್ಯಾಕೇಜ್‌ನಲ್ಲಿ ಅಳವಡಿಸಲು ನಾನು ಉದ್ದೇಶಿಸಿದ್ದೇನೆ.

**ನೇಕಾರ ಆಶ್ರಯ**

166. ಕೈಮಗ್ಗವನ್ನು ಅವಲಂಬಿಸಿರುವ ನೇಕಾರರು ಆಶ್ರಯ ಯೋಜನೆಯಡಿ ಮನೆ ಕಟ್ಟಿಕೊಳ್ಳುವಾಗ ಷೆಡ್ ಸಹಿತ ಮನೆ ಕಟ್ಟಿಕೊಳ್ಳಲು 25 ಸಾವಿರ ರೂ. ನಿರ್ಮಾಣ ವೆಚ್ಚದ ಜೊತೆಗೆ ಷೆಡ್ ನಿರ್ಮಾಣಕ್ಕೆ 5 ಸಾವಿರ ರೂ.ಗಳನ್ನು ಹೆಚ್ಚುವರಿಯಾಗಿ ಸೇರಿಸಿ ಒಟ್ಟು 30 ಸಾವಿರ ರೂ.ಗಳನ್ನು ನೀಡಲಾಗುವುದು.

167. ಬಿಜಾಪುರ, ಬಾಗಲಕೋಟೆ, ಗದಗ ಮತ್ತು ಧಾರವಾಡ ಜಿಲ್ಲೆಗಳ ಹತ್ತು ಸಾವಿರ ನೇಕಾರರಿಗೆ ಈ ವರ್ಷ ಪ್ರಾಯೋಗಿಕವಾಗಿ ಈ ನೆರವನ್ನು ನೀಡಲಾಗುವುದು. ಇದಕ್ಕಾಗಿ ಆಶ್ರಯ ಯೋಜನೆಗೆ ಹೆಚ್ಚುವರಿಯಾಗಿ 5 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗುವುದು.

168. ಜವಳಿ ಉದ್ಯಮದಲ್ಲಿ ಹಿಂದೆ ಇದ್ದ ಕೋಟಾ ಪದ್ಧತಿಯನ್ನು ತೆಗೆದ ನಂತರ ಜಾಗತಿಕ ಮಟ್ಟದಲ್ಲಿ ವಿಪುಲ ಅವಕಾಶಗಳು ಒದಗಿಬಂದಿವೆ. ಈ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಇದೀಗ ಸುಸಮಯ. ಸರ್ಕಾರವು ಜವಳಿ ಉದ್ದಿಮೆಯ ಹಲವಾರು ಹಂತಗಳಲ್ಲಿ ಬಹಳಷ್ಟು ಸುಧಾರಣೆ ತಂದಲ್ಲಿ ಹೆಚ್ಚಿನ ಬಂಡವಾಳ ತೊಡಗಿಸಿ ರಫ್ತು ಮಾರುಕಟ್ಟೆಯ ಪ್ರಯೋಜನ ಪಡೆಯಲು ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ಜವಳಿ ಉದ್ಯಮದ ಪೂರ್ಣ ಅಧ್ಯಯನ ಮಾಡಿ ಸಲಹೆ ನೀಡಲು ತಜ್ಞರ ಸಮಿತಿ ರಚಿಸಲಾಗುವುದು.

169. ಇಳಕಲ್ ಸೀರೆಗಳು ನಮ್ಮ ಸಂಸ್ಕೃತಿಯ ಪ್ರತೀಕವಷ್ಟೇ ಅಲ್ಲದೆ ಜಗತ್‌ಪ್ರಸಿದ್ಧವಾಗಿವೆ. ಈ ನೇಯ್ಗೆ ಕಲೆಯು ನಶಿಸಿಹೋಗುವ ಅಪಾಯ ಎದುರಿಸುತ್ತಿದೆ. ಇದನ್ನು ಉಳಿಸಿ ಬೆಳೆಸಲು ಅಗತ್ಯವಾದ ಮಾರ್ಗೋಪಾಯಗಳನ್ನು ರೂಪಿಸಲಾಗುವುದು.

170. ನೇಕಾರ ಯೋಜನೆಗಳನ್ನು ಅನುಷ್ಠಾನಗೊಳಿಸಲು 2006-07ನೇ ಸಾಲಿನಲ್ಲಿ 50 ಕೋಟಿ ರೂ.ಗಳನ್ನು ಮೀಸಲಿಡಲು ನಾನು ಉದ್ದೇಶಿಸಿದ್ದೇನೆ. ಈ ಯೋಜನೆಗಳು ವಿಶೇಷವಾಗಿ ನೇಕಾರ ಸಮುದಾಯಕ್ಕೆ ನೆರವು ನೀಡಲಿವೆ.

171. ಜವಳಿ ಉದ್ಯಮದ ಅಭಿವೃದ್ಧಿಯಲ್ಲಿ ಜವಳಿಪಾರ್ಕ್‌ಗಳು ಪ್ರಮುಖ ಪಾತ್ರ ವಹಿಸಲಿವೆ. ಜವಳಿ ಪಾರ್ಕ್‌ಗಳ ಸ್ಥಾಪನೆಗಾಗಿ ನಾನು 12.2 ಕೋಟಿ ರೂ.ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ. ಇದರ ಜೊತೆಗೆ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳಿಗೆ ನೆರವು ನೀಡಲು ರಾಜ್ಯವಲಯದಲ್ಲಿ ಹಲವಾರು ಯೋಜನೆಗಳಿವೆ. ಈ ಉದ್ದೇಶಕ್ಕಾಗಿ ನಾನು 2006-07 ನೇ ಸಾಲಿನಲ್ಲಿ 14.86 ಕೋಟಿ ರೂ.ಗಳನ್ನು ನಿಗದಿಪಡಿಸಿದ್ದೇನೆ.

## ನಗರಾಭಿವೃದ್ಧಿ

172. ಕೇಂದ್ರ ಸರ್ಕಾರಿ ನೆರವಿನ ಜವಹರಲಾಲ್ ನೆಹರು ರಾಷ್ಟ್ರೀಯ ನಗರ ಪುನರುಜ್ಜೀವನ ಮಿಷನ್ ಯೋಜನೆಯಡಿ ನೆರವು ಪಡೆಯಲು ಬೆಂಗಳೂರು ಮತ್ತು ಮೈಸೂರು ನಗರಗಳು ಅರ್ಹತೆ ಪಡೆದಿವೆ. ರಾಜ್ಯವು ಇದಕ್ಕೆ ಅಗತ್ಯವಾದ ಅಭಿವೃದ್ಧಿ ಮಾಹಿತಿಕಾರ್ಯಗಳನ್ನು ಸಿದ್ಧಪಡಿಸಿದ್ದು ಯೋಜನೆಯ ನೆರವನ್ನು ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳಲು ಉತ್ಸುಕವಾಗಿದೆ. ಈ ಯೋಜನೆಯನ್ನು ಪಡೆದುಕೊಳ್ಳಲು ಅನುವಾಗುವಂತೆ ನಾನು ನಗರ ಮೂಲಸೌಕರ್ಯ ಸೇವೆಗಳಿಗೆ 682 ಕೋಟಿ ರೂ.ಗಳನ್ನು ಮತ್ತು ನಗರದ ಬಡಜನರ ಮೂಲ ಅಗತ್ಯ ಸೇವೆಗಳಿಗಾಗಿ 48 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

173. ಕೇಂದ್ರ ನೆರವಿನ ಇನ್ನೊಂದು ಕಾರ್ಯಕ್ರಮವಾದ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ನಗರ ಮೂಲ ಸೌಕರ್ಯಗಳ ಅಭಿವೃದ್ಧಿ ಯೋಜನೆಯು

ಜವಹರ್‌ಲಾಲ್ ನೆಹರು ಯೋಜನೆಯ ವ್ಯಾಪ್ತಿಯಲ್ಲಿ ಸೇರದಿರುವ ಇತರೆ ಎಲ್ಲಾ ನಗರಗಳು ಮತ್ತು ಪಟ್ಟಣಗಳ ಮೂಲ ಸೌಕರ್ಯಗಳ ಯೋಜಿತ ಅಭಿವೃದ್ಧಿಯ ಗುರಿ ಹೊಂದಿದೆ. ಈ ಯೋಜನೆಯು ನೀರು ಪೂರೈಕೆ ಮತ್ತು ಒಳಚರಂಡಿ ಕಾರ್ಯಕ್ರಮಗಳನ್ನು ಸೇರಿಸಿಕೊಂಡು ಎಲ್ಲ ನಗರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಒಳಗೊಂಡಿದೆ. ಈ ಉದ್ದೇಶಕ್ಕಾಗಿ ನಾನು 45 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

174. ಬೆಂಗಳೂರು ನಗರದ ಮೇಲಿರುವ ಅತೀವ ಒತ್ತಡ ಕಡಿಮೆ ಮಾಡಲು ಸಮೀಪದ ಉಪನಗರವಾದ ರಾಮನಗರ ಪಟ್ಟಣದ ಸಮಗ್ರ ಅಭಿವೃದ್ಧಿ ಕಾರ್ಯಕ್ರಮವನ್ನು ಮುಂದಿನ ನಾಲ್ಕು ವರ್ಷಗಳಲ್ಲಿ ಹಮ್ಮಿಕೊಳ್ಳಲಾಗುವುದು. ಈ ಕಾರ್ಯಕ್ರಮವು ಭೌತಿಕ, ಸಾಮಾಜಿಕ ಹಾಗೂ ಆರ್ಥಿಕ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರುತ್ತದೆ. ಅಂತೆಯೆ ಶಿಕಾರಿಪುರ ಮತ್ತು ಜೇವರ್ಗಿ ಪಟ್ಟಣಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗುವುದು.

175. ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ನೀರು ಪೂರೈಕೆಯನ್ನು ಕಲ್ಪಿಸುವ ಬಿಡಬ್ಲ್ಯೂಎಸ್‌ಎಸ್‌ಬಿ ಯ 3384 ಕೋಟಿ ರೂ.ಗಳ ಅಂದಾಜು ವೆಚ್ಚದ ಕಾವೇರಿ 4ನೇ ಹಂತದ (ಘಟ್ಟ 2) ಕಾಮಗಾರಿಗಳು ಪ್ರಗತಿಯಲ್ಲಿವೆ. ಇದರ ಜೊತೆಗೆ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಸೇರಿದ ಬೊಮ್ಮನಹಳ್ಳಿ, ಬ್ಯಾಟರಾಯನಪುರ, ದಾಸರಹಳ್ಳಿ, ಕೃಷ್ಣರಾಜಪುರಂ, ಮಹಾದೇವಪುರ, ರಾಜರಾಜೇಶ್ವರಿನಗರ ಮತ್ತು ಯಲಹಂಕನಗರ ಪುರಸಭೆಗಳು ಮತ್ತು ಕೆಂಗೇರಿ ಪಟ್ಟಣ ಪುರಸಭೆಗಳಿಗೆ ಸಂಬಂಧಿಸಿದ ನೀರು ಪೂರೈಕೆ ಕಾಮಗಾರಿಗಳು

ಆರಂಭವಾಗಿದ್ದು ಈ ಪ್ರದೇಶದ ಕುಡಿಯುವ ನೀರಿನ ಅಗತ್ಯವನ್ನು ಈಡೇರಿಸುವ ನಿರೀಕ್ಷೆಯಿದೆ.

176. ರಸ್ತೆ ಪಕ್ಕದಲ್ಲಿ ವಾಹನಗಳನ್ನು ನಿಲ್ಲಿಸುತ್ತಿರುವ ಕಾರಣದಿಂದಾಗಿ ಬೆಂಗಳೂರು ನಗರದ ರಸ್ತೆ ಸಾಗಣೆ ಸಾಮರ್ಥ್ಯ ಕುಸಿಯುತ್ತಿದ್ದು ಸಂಚಾರ ದಟ್ಟಣೆ ಜಾಸ್ತಿಯಾಗುತ್ತಿದೆ. ಆದ್ದರಿಂದ ಬೆಂಗಳೂರಿನಲ್ಲಿ ವಾಹನ ನಿಲ್ದಾಣಗಳ ಅವಶ್ಯಕತೆ ಈಗ ಅತೀ ಅಗತ್ಯವಾಗಿದೆ. ಬೆಂಗಳೂರಿನಲ್ಲಿ ವಾಹನ ನಿಲ್ದಾಣಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಬೆಂಗಳೂರು ಮಹಾನಗರ ವಾಹನ ನಿಲ್ದಾಣ ಪ್ರಾಧಿಕಾರವನ್ನು ರಚಿಸಲು ಉದ್ದೇಶಿಸಲಾಗಿದೆ. ಯೋಜಿತ ವಾಹನ ನಿಲ್ದಾಣ ನಿರ್ವಹಣೆಯ ಮೂಲಕ ಪ್ರಾಧಿಕಾರಕ್ಕೆ ಅಗತ್ಯವಾದ ನಿಧಿಯನ್ನು ಒಗ್ಗೂಡಿಸಿಕೊಳ್ಳಲಾಗುವುದು.

**ಮೂಲಸೌಕರ್ಯಗಳ ಅಭಿವೃದ್ಧಿ**

177. ವಿದೇಶಿ ನೆರವಿನ ಯೋಜನೆಗಳ ಮೂಲಕ ಮುಂದಿನ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಉತ್ತಮ ಮೂಲಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ಕೆಯುಡಿಸಿಇಎಮ್‌ಪಿ ಯೋಜನೆಯಡಿ ರಾಜ್ಯದ ಕರಾವಳಿ ಪ್ರದೇಶದ 10 ಪಟ್ಟಣಗಳಲ್ಲಿ ಅಂದಾಜು 937 ಕೋಟಿ ರೂ.ಗಳ ವೆಚ್ಚದಲ್ಲಿ ಹಾಗೂ ಎಡಿಬಿ ಯೋಜನೆಯ ಮೂಲಕ ಉತ್ತರ ಕರ್ನಾಟಕದ 25 ನಗರಗಳಲ್ಲಿ 1800 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಮೂಲ ಸೌಕರ್ಯವನ್ನು ಕಲ್ಪಿಸಲು ರಾಜ್ಯ ಸರ್ಕಾರದ ಯೋಜನೆ ಪ್ರಗತಿಯಲ್ಲಿದೆ. ವಿಶ್ವಬ್ಯಾಂಕ್ ನೆರವಿನ ಯೋಜನೆಯ ಅಡಿಯಲ್ಲಿ 1149 ಕೋಟಿ ರೂ.ಗಳ ವೆಚ್ಚದಲ್ಲಿ ಕರ್ನಾಟಕ ಪುರಸಭೆ ಸುಧಾರಣಾ ಯೋಜನೆಯನ್ನು ಮತ್ತು ಬೆಂಗಳೂರು ನಗರದಲ್ಲಿ ರಸ್ತೆ ಸುಧಾರಣೆ ಹಾಗೂ ಒಳಚರಂಡಿ ಅಭಿವೃದ್ಧಿಯನ್ನು, ಆಯ್ದ 20 ಪಟ್ಟಣಗಳಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸಲು ಕಾಮಗಾರಿಗಳನ್ನು

ಕೈಗೆತ್ತಿಕೊಳ್ಳಲಾಗಿದೆ. ರಾಜ್ಯದ ಹುಬ್ಬಳ್ಳಿ-ಧಾರವಾಡ, ಗುಲ್ಬರ್ಗಾ ಮತ್ತು ಬೆಳಗಾವಿ ನಗರಸಭೆಗಳಲ್ಲಿ ನೀರು ಪೂರೈಕೆ ಸುಧಾರಿಸಲು 277 ಕೋಟಿ ರೂ.ಗಳ ವೆಚ್ಚದ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

178. ಕರ್ನಾಟಕ ನಗರ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಯು 613.40 ಕೋಟಿ ರೂ.ಗಳ ವೆಚ್ಚದಲ್ಲಿ 39 ನೀರು ಪೂರೈಕೆ ಮತ್ತು 19 ಯುಜಿಡಿ ಯೋಜನೆಗಳನ್ನು ಕೈಗೆತ್ತಿಕೊಂಡು ಕಾರ್ಯನಿರ್ವಹಿಸುತ್ತಿದೆ. 2005-06 ನೇ ಸಾಲಿನಲ್ಲಿ 220.20 ಕೋಟಿ ರೂ.ಗಳ ವೆಚ್ಚದಲ್ಲಿ 8 ನೀರು ಪೂರೈಕೆ ಮತ್ತು 6 ಯುಜಿಡಿ ಯೋಜನೆಗಳನ್ನು ಕಾರ್ಯಾರಂಭ ಮಾಡುವ ಗುರಿ ಇಟ್ಟುಕೊಳ್ಳಲಾಗಿತ್ತು. ಇದರ ಜೊತೆಗೆ ತ್ವರಿತ ನಗರ ನೀರುಪೂರೈಕೆ ಯೋಜನೆಯಡಿ ಶಿರಾಳಕೊಪ್ಪ, ಜಗಳೂರು, ನರೇಗಲ್, ಚಿತ್ತಾಪುರ ನಗರಗಳಲ್ಲಿ 30.55 ಕೋಟಿ ರೂ.ಗಳ ವೆಚ್ಚದ ಕುಡಿಯುವ ನೀರಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. 2006-07 ನೇ ಸಾಲಿನಲ್ಲಿ 15 ನೀರು ಪೂರೈಕೆ ಯೋಜನೆಗಳು ಮತ್ತು 7 ಯುಜಿಡಿ ಯೋಜನೆಗಳನ್ನು ಕಾರ್ಯಾರಂಭಗೊಳಿಸಲು ಉದ್ದೇಶಿಸಲಾಗಿದೆ.

179. ನಗರ ಪ್ರದೇಶದಲ್ಲಿ ಭೂಮಿ ಅತ್ಯಮೂಲ್ಯ ಸಂಪನ್ಮೂಲವಾಗಿರುತ್ತದೆ. ಆದರೆ ಈವರೆಗೆ ನಗರಗಳಲ್ಲಿನ ಸರ್ಕಾರಿ ಭೂಮಿಗಳ ಭೂಮಾಪನವನ್ನು ಕೈಗೊಂಡಿಲ್ಲ. ಆದ್ದರಿಂದ ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿರುವ ಸರ್ಕಾರಿ ಭೂಮಿಗಳ ಅಳತೆ ಮಾಡುವುದಲ್ಲದೆ ಮಾರುಕಟ್ಟೆ ದರದಲ್ಲಿ ಮೌಲ್ಯಮಾಪನ ಮಾಡಿ ಭೂ ಬ್ಯಾಂಕ್ ಅಥವಾ ಆವರ್ತನಿಧಿ ಸ್ಥಾಪಿಸಲು ನಮ್ಮ ಸರ್ಕಾರ ಉದ್ದೇಶಿಸಿದೆ. ಈ ಸಮೀಕ್ಷೆಗೆ ಭೌಗೋಳಿಕಾ ಮಾಹಿತಿ ವ್ಯವಸ್ಥೆ (GIS) ಪದ್ಧತಿಯನ್ನು ಅಳವಡಿಸಿಕೊಳ್ಳಲಾಗುವುದು. ಇದಕ್ಕಾಗಿ ನಾನು 1 ಕೋಟಿ ರೂ. ಒದಗಿಸಿದ್ದೇನೆ. ಇದೇ ರೀತಿಯ ಸಮೀಕ್ಷೆಗಳನ್ನು ರಾಜ್ಯದ ಇತರೆ

ಮಹಾನಗರ ಪಾಲಿಕೆಗಳಲ್ಲಿ ಕೈಗೊಳ್ಳಲಾಗುವುದು. ಸರ್ಕಾರಿ ಭೂ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಮತ್ತು ದಕ್ಷತೆಯಿಂದ ಬಳಸಿಕೊಳ್ಳಲು ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಲಾಗುವುದು.

180. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅರ್ಕಾವತಿ ಬಡಾವಣೆಯಲ್ಲಿ ಇಪ್ಪತ್ತು ಸಾವಿರ ನಿವೇಶನಗಳನ್ನು ವಿತರಿಸಲು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ. ನಗರದ ಸುತ್ತ ಎರಡನೆ ವರ್ತುಲ ರಸ್ತೆ (ಹೊರವರ್ತುಲ ರಸ್ತೆ) ಯನ್ನು ಯೋಜಿಸಲಾಗುತ್ತಿದೆ.

181. ಮೈಸೂರು ನಗರದ ಸುತ್ತ ಎಡಿಬಿ ನೆರವಿನಿಂದ 50 ಕೋಟಿ ರೂ.ಗಳ ವೆಚ್ಚದಲ್ಲಿ ವರ್ತುಲ ರಸ್ತೆ ನಿರ್ಮಾಣವನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಕೈಗೆತ್ತಿಕೊಂಡಿದೆ. ಗುಲ್ಬರ್ಗಾ ನಗರದಲ್ಲಿ ಕೆಆರ್‌ಡಿಸಿಎಲ್ ಸಂಸ್ಥೆಯು ವರ್ತುಲ ರಸ್ತೆಯನ್ನು ನಿರ್ಮಿಸುತ್ತಿದೆ.

182. ಹಾಸನ ನಗರವು ವ್ಯಾಪಕವಾಗಿ ಬೆಳೆಯುತ್ತಿದ್ದು ವರ್ತುಲ ರಸ್ತೆಯ ನಿರ್ಮಾಣದ ಅಗತ್ಯವಿರುತ್ತದೆ. ಈ ಸಂಬಂಧ ಸರ್ವೇಕ್ಷಣೆ ನಡೆಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

## ಮೆಟ್ರೋ ರೈಲು ಯೋಜನೆ

183. ರಾಜ್ಯ ಸರ್ಕಾರವು ಬೆಂಗಳೂರು ನಗರದಲ್ಲಿ ಮೆಟ್ರೋರೈಲು ಯೋಜನೆಯನ್ನು ಅನುಷ್ಠಾನಗೊಳಿಸಲು ನಿರ್ಧಾರ ಕೈಗೊಂಡಿದೆ. ದಿನಾಂಕ 05.08.2005 ರಂದು ನಡೆದ ಪಿಐಬಿ ಸಭೆಯಲ್ಲಿ ಯೋಜನೆಗೆ ಹಸಿರು ನಿಶಾನೆ ಸಿಕ್ಕಿದೆ. ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿಯ ಅನುಮೋದನೆಗಾಗಿ ಕಾಯಲಾಗುತ್ತಿದೆ.

## ವಿಮಾನ ನಿಲ್ದಾಣ ಯೋಜನೆಗಳು

184. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿ ಆರಂಭವಾಗಿದೆ. ಇದಕ್ಕೆ ನೀಡಬೇಕಾಗಿರುವ ರಾಜ್ಯ ಸರ್ಕಾರದ ಬೆಂಬಲ ಹಣ 128.85 ಕೋಟಿ ರೂ.ಗಳನ್ನು ಸಂಪೂರ್ಣವಾಗಿ ಒದಗಿಸಲಾಗಿದೆ. ಮಂಗಳೂರು ವಿಮಾನ ನಿಲ್ದಾಣದ ವಿಸ್ತರಣೆ ಮತ್ತು ಹುಬ್ಬಳ್ಳಿ ವಿಮಾನ ನಿಲ್ದಾಣದ ಮೇಲ್ದರ್ಜೆ ಕಾರ್ಯ ಪ್ರಗತಿಯಲ್ಲಿದೆ. ಮಿನಿ ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ 25 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಶಿವಮೊಗ್ಗ ಮತ್ತು ಕಾರವಾರ ವಿಮಾನ ನಿಲ್ದಾಣಗಳಿಗಾಗಿ ಭೂ ಸ್ವಾಧೀನ ಕಾರ್ಯ ಪ್ರಸಕ್ತ ವರ್ಷದಲ್ಲಿಯೇ ಆರಂಭವಾಗಲಿದೆ. ವಿಮಾನ ನಿಲ್ದಾಣ ಮೂಲ ಸೌಕರ್ಯಗಳಿಗೆ 2006-07 ನೇ ಸಾಲಿನಲ್ಲಿ 212.37 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದ್ದು ಇದು 2005-06 ರಲ್ಲಿ ನೀಡಿದ್ದ 152.28 ಕೋಟಿ ರೂ.ಗಳಿಗೆ ಹೋಲಿಸಿದರೆ ಶೇ. 39.19 ರಷ್ಟು ಏರಿಕೆಯಾಗಿದೆ

## ರೈಲ್ವೆ ಯೋಜನೆಗಳು

185. ರಾಜ್ಯವು ಹಲವಾರು ರೈಲ್ವೆ ಯೋಜನೆಗಳಿಗೆ ವೆಚ್ಚ ಹಂಚಿಕೆ ಆಧಾರದಲ್ಲಿ ಬೆಂಬಲ ನೀಡುತ್ತಿದೆ. ಬೀದರ್ ಗುಲ್ಬರ್ಗಾ ಹೊಸ ರೈಲ್ವೆ ಮಾರ್ಗಕ್ಕೆ 2005-06 ನೇ ಸಾಲಿನಲ್ಲಿ 10 ಕೋಟಿ ರೂ.ಗಳನ್ನು ನೀಡಿದ್ದೆವು. ಬೆಂಗಳೂರು-ಮೈಸೂರಿನ ಎರಡು ಮಾರ್ಗಗಳ ನಿರ್ಮಾಣದಲ್ಲಿ ಬೆಂಗಳೂರು-ರಾಮನಗರ ಮಾರ್ಗಕ್ಕೆ ಅಗತ್ಯವಾದ ರಾಜ್ಯದ ಪಾಲಿನ ಹಣವನ್ನು ಒದಗಿಸಲಾಗಿದೆ. ರಾಮನಗರದಿಂದ ಮೈಸೂರು ವರೆಗಿನ ಎರಡು ಮಾರ್ಗಗಳ ನಿರ್ಮಾಣಕ್ಕೆ ನಾನು 25 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ. ಬೆಂಗಳೂರಿನಲ್ಲಿ ಪ್ರಯಾಣಿಕರ ರೈಲಿನ ಸೇವೆಗೆ 10 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಹಾಸನ-ಮಂಗಳೂರು ಗೇಜ್ ಪರಿವರ್ತನೆಗೆ 15 ಕೋಟಿ ರೂ.ಗಳನ್ನು

ನೀಡಲಾಗಿದೆ. ರೈಲ್ವೆ ಮೇಲು ಸೇತುವೆ ಮತ್ತು ಕೆಳ ಸೇತುವೆ ನಿರ್ಮಾಣಗಳಿಗೆ 30 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಹೀಗಾಗಿ 2006-07 ನೇ ಸಾಲಿನಲ್ಲಿ ರೈಲ್ವೇ ಯೋಜನೆಗಳಿಗೆ ಒದಗಿಸಿದ ಹಣವು 95 ಕೋಟಿ ರೂ.ಗಳನ್ನು 2005-06 ನೇ ಸಾಲಿನ 45 ಕೋಟಿ ರೂ.ಗಳಿಗೆ ಹೋಲಿಸಿದರೆ ಶೇ.111 ರಷ್ಟು ಏರಿಕೆಯಾಗಿದೆ.

**ಮಾಹಿತಿ ತಂತ್ರಜ್ಞಾನ**

186. ಭಾರತದ ಗೌರವಾನ್ವಿತ ರಾಷ್ಟ್ರಪತಿಗಳು, 10 ಜಿಬಿಪಿಎಸ್ ವೇಗ ಸಾಮರ್ಥ್ಯದ ಇ-ಆಡಳಿತ ಜಾಲ ವ್ಯವಸ್ಥೆಯನ್ನು ರಾಜ್ಯಮಟ್ಟದಲ್ಲಿ ಸ್ಥಾಪಿಸಲು ಸಲಹೆ ನೀಡಿದ್ದಾರೆ. ಇದು ಸರ್ಕಾರ, ಶೈಕ್ಷಣಿಕ ಸಂಸ್ಥೆಗಳು ಕೈಗಾರಿಕಾ ಸಂಸ್ಥೆಗಳನ್ನು ರಾಜ್ಯಮಟ್ಟ, ಜಿಲ್ಲಾಮಟ್ಟ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಸಂಪರ್ಕ ಕಲ್ಪಿಸಬೇಕು. ದಿನ ಕ್ರಮೇಣ ಇದು ಗ್ರಾಮಗಳ ಹಂತಕ್ಕೂ ಸಂಪರ್ಕ ಕಲ್ಪಿಸುವಂತಾಗಬೇಕು ಎನ್ನುವುದು ಅವರ ಆಶಯವಾಗಿದೆ.

187. ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಸರ್ಕಾರದ ಪ್ರಮುಖ ಕಛೇರಿಗಳ ನಡುವೆ ಸಂಪರ್ಕ ಕಲ್ಪಿಸುವ ರಾಜ್ಯವ್ಯಾಪಿ ವೈಡ್ ಏರಿಯಾ ನೆಟ್‌ವರ್ಕ್‌ನ್ನು ಸ್ಥಾಪಿಸುವ ಕಾರ್ಯ ನಡೆದಿದೆ. ಈ ಜಾಲವು ಪ್ರಸ್ತುತ 2 ಎಂಪಿಬಿಎಸ್ ಸಾಮರ್ಥ್ಯದಲ್ಲಿದ್ದು ಇದನ್ನು 8 ಎಂಪಿಬಿಎಸ್‌ವರೆಗೆ ವಿಸ್ತರಿಸಿಕೊಳ್ಳಬಹುದಾಗಿದೆ. ಈ ಯೋಜನೆಗೆ ಹಣಕಾಸಿನ ನೆರವನ್ನು 12ನೇ ಹಣಕಾಸು ಆಯೋಗದ ಅನುದಾನದಲ್ಲಿ ರಾಷ್ಟ್ರೀಯ ಇ-ಆಡಳಿತ ಯೋಜನಾ ನಿಧಿಯಿಂದ ಕಲ್ಪಿಸಲಾಗುವುದು.

**ವಿದ್ಯುತ್ ಉತ್ಪಾದನೆ, ಪ್ರಸರಣೆ ಮತ್ತು ವಿತರಣೆ**

188. ಭಾರತ ಸರ್ಕಾರವು ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಕರಾವಳಿ ಕರ್ನಾಟಕದಲ್ಲಿ ಬೃಹತ್ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸುತ್ತಿರುವುದು ಸಂತಸದ ಸಂಗತಿ. ಇದಕ್ಕಾಗಿ ಉತ್ತರಕನ್ನಡ ಜಿಲ್ಲೆಯ ತದಡಿ ಬಳಿ ಜಮೀನು ಗುರುತಿಸಿದ್ದು, 1800 ಎಕರೆ ಜಮೀನು ಈಗಾಗಲೇ ಲಭ್ಯವಿರುತ್ತದೆ. ಈ ಪ್ರಾಂತ್ಯದಲ್ಲಿರುವ ತದಡಿ ಬಂದರನ್ನು ಅಭಿವೃದ್ಧಿ ಪಡಿಸಲಾಗುವುದು. ಇದು ಸ್ಥಳೀಯವಾಗಿ ಹೊಸ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಲಿದೆ. ಈ ಸಂಬಂಧದ ಪ್ರಾಥಮಿಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಭಾರತ ಸರ್ಕಾರ ರಚಿಸಲಿರುವ ವಿಶೇಷ ಉದ್ದೇಶ ವಾಹಿನಿಯಲ್ಲಿ ಕರ್ನಾಟಕ ವಿದ್ಯುತ್ ನಿಗಮವು ಪಾಲುದಾರನಾಗಲಿದೆ. ಇದರಿಂದಾಗಿ ಕೆಪಿಸಿಯು ಇಂತಹ ಬೃಹತ್ ಯೋಜನೆಯಲ್ಲಿ ಆರಂಭದಿಂದಲೇ ಪಾಲುದಾರನಾಗುವ ಸದಾವಕಾಶ ಪಡೆದಿದೆ.

189. ಈ ವರ್ಷದಲ್ಲಿ 3000 ಮುಖ್ಯ ಗ್ರಾಮೀಣ ಫೀಡರ್‌ಗಳನ್ನು ಪುನರ್ ನವೀಕರಿಸಲಾಗುವುದು. ಇದು ವಿದ್ಯುತ್ ವಿತರಣೆ ನಷ್ಟವನ್ನು ತಗ್ಗಿಸಿ ಗ್ರಾಮೀಣ ಪ್ರದೇಶದಲ್ಲಿ ಗುಣಮಟ್ಟದ ವಿದ್ಯುತ್ ಪೂರೈಕೆಗೆ ನೆರವಾಗಲಿದೆ.

190. ಭಾರತ ಸರ್ಕಾರವು ನೂತನ ಯೋಜನೆಯಾದ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿ 375 ಕೋಟಿ ರೂ.ಗಳ ವೆಚ್ಚದಲ್ಲಿ ರಾಜ್ಯದ 17 ಜಿಲ್ಲೆಗಳಲ್ಲಿ ವಿದ್ಯುತ್ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಈ ಯೋಜನೆಗಳು 8100 ಹಳ್ಳಿಗಳು ಮತ್ತು ತಾಂಡಾಗಳಿಗೆ ಸೇರಿದ 13.19 ಲಕ್ಷ ಗ್ರಾಮೀಣ ಕುಟುಂಬಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಲಿದೆ. ಇದರಲ್ಲಿ 6.32 ಲಕ್ಷ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳು ಒಳಗೊಂಡಿವೆ. ಹಲವಾರು ಜಿಲ್ಲೆಗಳಲ್ಲಿ ಈ ಕಾರ್ಯ

ಈಗಾಗಲೇ ಆರಂಭವಾಗಿದೆ. ಉಳಿದ 9 ಜಿಲ್ಲೆಗಳ ಪ್ರಸ್ತಾವನೆ ಭಾರತ ಸರ್ಕಾರದ ಬಳಿಯಿದೆ.

**ವಿದ್ಯುತ್ ಸಹಾಯಧನ**

191. ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಭಾಗ್ಯಜ್ಯೋತಿ ಹಾಗೂ ಕುಟೀರ ಜ್ಯೋತಿಯ ಮೂಲಕ ವಿದ್ಯುತ್ ಸರಬರಾಜು ಮಾಡಲಾಗಿದ್ದು, ಅವರು ಕಟ್ಟಬೇಕಾಗಿದ್ದ 82 ಕೋಟಿ ರೂ.ಗಳ ಬಾಕಿಯನ್ನು ಮನ್ನಾ ಮಾಡಲು ನಿರ್ಧರಿಸಲಾಗಿದೆ. ಈ ಸಂಪರ್ಕಗಳಿಗೆ ಇನ್ನು ಮುಂದೆ ಕಡ್ಡಾಯವಾಗಿ ಮೀಟರ್ ಅಳವಡಿಸಿ ತಿಂಗಳಿಗೆ 18 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡಲು ಉದ್ದೇಶಿಸಲಾಗಿದೆ. 18 ಯೂನಿಟ್‌ಗಿಂತ ಹೆಚ್ಚಿನ ವಿದ್ಯುತ್ ಬಳಕೆ ಮಾಡಿಕೊಂಡಲ್ಲಿ ಅಂತಹವರು ನಿಯಮಿತವಾಗಿ ವಿದ್ಯುತ್ ಶುಲ್ಕ ಪಾವತಿಸಬೇಕು.

192. ರಾಜ್ಯದಲ್ಲಿ 70 ಸಾವಿರಕ್ಕೂ ಹೆಚ್ಚು ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳು ಉಚಿತ ವಿದ್ಯುತ್ ಪಡೆಯುತ್ತಿವೆ. ಇವುಗಳನ್ನು ಬಿಲ್‌ಪಾವತಿ ಹೊಣೆಗಾರಿಕೆಗೆ ತರುವ ಉದ್ದೇಶದಿಂದ ನಾನು ಈ ಸಂಪರ್ಕಗಳೆಲ್ಲವನ್ನು ಅಧಿಕೃತಗೊಳಿಸಲು ಉದ್ದೇಶಿಸಿದ್ದೇನೆ. ಇವುಗಳನ್ನು ಅಧಿಕೃತಪಡಿಸಿಕೊಳ್ಳಲು ರೈತರು 10,000 ರೂ.ಗಳನ್ನು ಪಾವತಿಸಬೇಕಾಗುತ್ತದೆ. ಉಳಿಕೆ ಹಣವನ್ನು ಎಂದರೆ 16,450 ರೂ.ಗಳನ್ನು ಸರ್ಕಾರವು ಭರಿಸುತ್ತದೆ. ಎರಡನೆಯದಾಗಿ ಇಂತಹ ಎಲ್ಲ ಪಂಪ್‌ಸೆಟ್‌ಗಳು ಮೀಟರ್ ಅಳವಡಿಸಿಕೊಳ್ಳಬೇಕು. ಈ ಸಂಬಂಧ ಸರ್ಕಾರದ ಪಾಲಿನ ಹಣ ಭರಿಸಲು ನಾನು 127 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

193. ರೈತರ ಮೇಲಿರುವ ವಿದ್ಯುತ್ ವೆಚ್ಚದ ಹೊರೆಯನ್ನು ಕಡಿಮೆ ಮಾಡಲು ಮತ್ತು ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ ಉತ್ತೇಜಿಸಲು ನಾನು ಉದ್ದೇಶಿಸಿದ್ದೇನೆ. ಈ ಸಂಬಂಧ ಪಂಪ್‌ಸೆಟ್‌ಗೆ ಮೀಟರ್ ಅಳವಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ರೈತರು ವಿದ್ಯುತ್ ಸಂಪರ್ಕಕ್ಕಾಗಿ ಪಾವತಿಸಬೇಕಾದ ಕನಿಷ್ಟ ಸಂಪರ್ಕ ದರದ ಪಾವತಿಗೆ ವಿನಾಯಿತಿ ನೀಡಲು ಉದ್ದೇಶಿಸಿದ್ದೇನೆ. ಆದಾಗ್ಯೂ, ಮೀಟರ್ ಅಳವಡಿಕೆ ಸಂದರ್ಭದಲ್ಲಿ ರೈತರು ನಿಗದಿತ ದರ ಅಥವಾ ಮೀಟರ್‌ನ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸಬೇಕು. ಕನಿಷ್ಠ ಮಾರ್ಗ ಶುಲ್ಕದ ವಿನಾಯಿತಿಗೆ ಸಂಬಂಧಿಸಿದಂತೆ ವಿತರಣಾ ಕಂಪನಿಗಳಿಗೆ ಪರಿಹಾರ ಧನ ಪಾವತಿಸಲು ನಾನು 100 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

194. ಗ್ರಾಮ ಪಂಚಾಯತಿಗಳು ಕುಡಿಯುವ ನೀರು ಮತ್ತು ಬೀದಿ ದೀಪದ ತಮ್ಮ ವಿದ್ಯುತ್ ಬಳಕೆಯ ವೆಚ್ಚವನ್ನು ತಮ್ಮ ವಾರ್ಷಿಕ ಅನುದಾನ ಮತ್ತು ಸ್ವಂತ ಸಂಪನ್ಮೂಲಗಳಿಂದ ಭರಿಸುತ್ತಿವೆ. ಕೆಲವು ಗ್ರಾಮ ಪಂಚಾಯತ್‌ಗಳು ನಿಯತವಾಗಿ ವಿದ್ಯುತ್ ಬಿಲ್ ಪಾವತಿಸುತ್ತಿಲ್ಲ. ನಿಯತವಾಗಿ ವಿದ್ಯುತ್ ಬಿಲ್ ಪಾವತಿಸುವ ಗ್ರಾಮ ಪಂಚಾಯತ್‌ಗಳಿಗೆ ವಿದ್ಯುತ್ ವೆಚ್ಚವನ್ನು ಕಡಿಮೆ ಮಾಡಲು ಮತ್ತು ವಿದ್ಯುತ್ ಬಾಕಿಯನ್ನು ನಿಗದಿತ ದಿನಾಂಕದೊಳಗೆ ಪಾವತಿಸುವಂತೆ ಉತ್ತೇಜಿಸಲು ನಾನು ವಿದ್ಯುತ್ ಬಿಲ್‌ಗಳನ್ನು ನಿಗದಿತ ದಿನಾಂಕಕ್ಕೆ ಮುಂಚೆ ಪಾವತಿಸುವ ಗ್ರಾಮ ಪಂಚಾಯತ್‌ಗಳಿಗೆ ಶೇ 25 ರಷ್ಟು ವಿದ್ಯುತ್ ಸಹಾಯಧನವನ್ನು ಒದಗಿಸಲು ಉದ್ದೇಶಿಸಿದ್ದು, ಇದಕ್ಕಾಗಿ 100 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

195. ಇವುಗಳ ಜೊತೆಗೆ ನಾನು ಕೃಷಿ ಪಂಪ್‌ಸೆಟ್‌ಗಳು ಬಳಸುವ ವಿದ್ಯುತ್‌ಗೆ ಸಹಾಯಧನಕ್ಕಾಗಿ 1,800 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ. ಹೀಗಾಗಿ ವಿದ್ಯುತ್ ವಲಯಕ್ಕೆ ಒಟ್ಟು ಬೆಂಬಲವು 2005-06ನೇ ಸಾಲಿನಲ್ಲಿದ್ದ 1750 ಕೋಟಿ ರೂ.ಗಳಿಂದ 2006-07ನೇ ಸಾಲಿನಲ್ಲಿ 2373 ಕೋಟಿ ರೂ.ಗಳಿಗೆ ಏರಲಿದೆ.

## ಅರಣ್ಯ, ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ

196. ರಾಜ್ಯದಲ್ಲಿನ ಅರಣ್ಯ ಹೊದಿಕೆಯನ್ನು ಅಭಿವೃದ್ಧಿಗೊಳಿಸಲು ರಾಜ್ಯವು ಕಟಿಬದ್ಧವಾಗಿದೆ ಮತ್ತು ಈ ಸಂಬಂಧ ಇಲಾಖೆಯ ಈ ಸಾಲಿನ ಆಯವ್ಯಯದಲ್ಲಿ ರೂ.199.93 ಕೋಟಿಗಳನ್ನು ಮೀಸಲಿಡಲಾಗಿದೆ. ಕಳೆದ ಸಾಲಿನಲ್ಲಿ ಇದು ರೂ.58.70 ಕೋಟಿಯಷ್ಟಿತ್ತು. ಅರಣ್ಯ ಪ್ರದೇಶದ ಆಸುಪಾಸಿನಲ್ಲಿರುವ ಜನರಿಗೆ ವನ್ಯಜೀವಿಗಳಿಂದ ಉಂಟಾಗುವ ಆಸ್ತಿ-ಪಾಸ್ತಿ ಹಾನಿ ಸಂದರ್ಭದಲ್ಲಿ ನೀಡುವ ಪರಿಹಾರ ಮೊತ್ತವನ್ನು ಪರಿಷ್ಕರಿಸುವ ಬಗ್ಗೆ ಪರಿಶೀಲಿಸಲಾಗುವುದು.

## ಕಾನೂನು ಮತ್ತು ಸಂಸದೀಯ ವ್ಯವಹಾರಗಳು

197. ರಾಜ್ಯದಲ್ಲಿ 2005-06ನೇ ಸಾಲಿನಲ್ಲಿ 90 ಹೊಸ ನ್ಯಾಯಾಲಯಗಳನ್ನು ಮಂಜೂರು ಮಾಡಿದ್ದು ಇವುಗಳನ್ನು ಸ್ಥಾಪಿಸಲು 2006-07ನೇ ಸಾಲಿನಲ್ಲಿ 5 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಹಾಗೂ ನ್ಯಾಯಾಲಯದ ಕಟ್ಟಡಗಳನ್ನು ಕಟ್ಟಲು 3 ಕೋಟಿ ರೂ.ಗಳನ್ನು ಒದಗಿಸಲಾಗುವುದು.

198. ನಮ್ಮ ರಾಜ್ಯದಲ್ಲಿ ಕಾನೂನು ಪದವಿಯನ್ನು ಪಡೆದು ಹೊರಬರುವ ವಕೀಲರಿಗೆ ವೃತ್ತಿ ಜೀವನ ಪ್ರಾರಂಭ ಮಾಡುವ ಮೊದಲು ಸಾಮಾನ್ಯವಾಗಿ

ನುರಿತ ವಕೀಲರ ಜೊತೆಗೆ ಕೆಲಸಮಾಡುವ ಸಂದರ್ಭ ಇರುತ್ತದೆ. ಅವರು ವೃತ್ತಿ ಜೀವನದಲ್ಲಿ ತೊಡಗಿಸಿಕೊಳ್ಳುವ ಪ್ರಾರಂಭಿಕ ಹಂತದಲ್ಲಿ ಸಹಾಯ ನೀಡಲು ನಾನು ಯೋಜಿಸಿದ್ದು ಈ ಕಾರ್ಯಕ್ರಮದಲ್ಲಿ ಪ್ರತಿ ವಕೀಲರಿಗೆ ಪ್ರತಿ ತಿಂಗಳು 1,000 ರೂ.ಗಳನ್ನು ಪ್ರೋತ್ಸಾಹ ಧನವಾಗಿ 12 ತಿಂಗಳುಗಳಿಗೆ ಸೀಮಿತವಾಗುವಂತೆ ನೀಡಲು ಉದ್ದೇಶಿಸಿರುತ್ತೇನೆ.

### ಗೃಹ

**199.** ಕರ್ನಾಟಕದಲ್ಲಿ ನಕ್ಸಲ್ ಪಿಡುಗನ್ನು ತಡೆಗಟ್ಟಲು ಮತ್ತು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಅನುವಾಗುವಂತೆ ಪೊಲೀಸ್ ಇಲಾಖೆಗೆ ಐದು ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

**200.** ಬೆಂಗಳೂರು ನಗರವು ವ್ಯಾಪಕವಾಗಿ ಬೆಳೆಯುತ್ತಿದ್ದು, ಅಪರಾಧಗಳ ನಿಯಂತ್ರಣಕ್ಕೆ ಹೆಚ್ಚಿನ ಗಮನವನ್ನು ನೀಡಬೇಕಾಗಿರುತ್ತದೆ. ಈ ಉದ್ದೇಶಕ್ಕೆ ಹೆಚ್ಚುವರಿಯಾಗಿ 49 ಹೊಯ್ಸಳ ವಾಹನಗಳನ್ನು ನೀಡುತ್ತಿದ್ದೇನೆ. ಇದಕ್ಕಾಗಿ 3.2 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

201. ಪೊಲೀಸ್ ವಸತಿಗೃಹಗಳ ದುರಸ್ತಿಗಾಗಿ ಪೊಲೀಸ್ ವಸತಿ ನಿಗಮದ ಮೂಲಕ ಸಮಗ್ರವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಲು 40 ಕೋಟಿ ರೂ.ಗಳ ಅಂದಾಜನ್ನು ಮಾಡಿದ್ದು 20 ಕೋಟಿ ರೂ.ಗಳನ್ನು 2006-07 ಸಾಲಿಗೆ ಒದಗಿಸಲಾಗುವುದು.

### ವಿಧಾನ ಪರಿಸರ ಭದ್ರತಾ ವ್ಯವಸ್ಥೆ

**202.** ವಿಧಾನಸೌಧ, ವಿಕಾಸಸೌಧ, ಬಹುಮಹಡಿ ಕಟ್ಟಡ, ಹೈ ಕೋರ್ಟ್, ರಾಜಭವನ, ಶಾಸಕರ ಭವನ, ಉದ್ಯೋಗ ಸೌಧ, ಪ್ರಧಾನ ಅಂಚೆ ಕಛೇರಿಗಳನ್ನು ಒಳಗೊಂಡಂತೆ ವಿಶೇಷ ಭದ್ರತಾ ವಲಯ ರಚಿಸಿ ಈ

ಪ್ರದೇಶದಲ್ಲಿ ಕಟ್ಟು ನಿಟ್ಟಿನ ಭದ್ರತಾ ವ್ಯವಸ್ಥೆ ಮಾಡಲಾಗುವುದು. ಇದಕ್ಕೆ **'ವಿಧಾನ ಪರಿಸರ ಭದ್ರತಾ ವ್ಯವಸ್ಥೆ'** ಎಂದು ನಾಮಕರಣ ಮಾಡಲಾಗುವುದು.

203. ಬೆಂಗಳೂರು ನಗರದಲ್ಲಿನ ಸಂಚಾರ ಪರಿಸ್ಥಿತಿ ಸರ್ಕಾರಕ್ಕೆ ಪ್ರಮುಖ ಕಾಳಜಿಯಾಗಿದೆ. ಇದನ್ನು ಸುಧಾರಿಸಲು ಸರ್ಕಾರವು 'ಬಿ-ಟ್ರಾಕ್ 2010' ಎನ್ನುವ ಮಹತ್ವಾಕಾಂಕ್ಷಿ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತಿದ್ದು, ಇದು ಈ ವರ್ಷದಿಂದಲೇ ಆರಂಭಗೊಳ್ಳುತ್ತಿದ್ದು 2010-11ರವರೆಗೆ ಇರುತ್ತದೆ. ಈ ಯೋಜನೆಯಡಿ ಸಂಚಾರ ದಟ್ಟಣೆಯನ್ನು ಸುಗಮಗೊಳಿಸಲು ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಸೂಕ್ತ ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳಲಾಗುವುದು. ಸಂಚಾರಿ ಪೊಲೀಸ್ ಮತ್ತು ಜಾರಿ ಕ್ರಮಗಳ ಆಧುನೀಕರಣ, ವಿನೂತನ ಸಾರಿಗೆ ಪದ್ಧತಿಗಳು ಇದರಲ್ಲಿ ಸೇರಿವೆ. ಈ ಯೋಜನೆಯ ಒಟ್ಟು ವೆಚ್ಚ 350 ಕೋಟಿ ರೂ.ಗಳಾಗಿದ್ದು 2006-07ನೇ ಸಾಲಿಗೆ 44 ಕೋಟಿ ರೂ.ಗಳನ್ನು ಒದಗಿಸಲು ನಾನು ಉದ್ದೇಶಿಸಿದ್ದೇನೆ.

**ಸರ್ಕಾರಿ ನೌಕರರು**

204. ತಮಗೆಲ್ಲಾ ತಿಳಿದಿರುವಂತೆ ಈಗಾಗಲೇ ಸರ್ಕಾರಿ ನೌಕರರ ವೇತನ ಪರಿಷ್ಕರಣೆಯ ಬಗ್ಗೆ ಐದನೇ ವೇತನ ಆಯೋಗ ರಚಿಸಲಾಗಿದ್ದು ಆಯೋಗವು ಮಧ್ಯಂತರ ವರದಿ ನೀಡಿರುತ್ತದೆ. ಇದನ್ನು ಸರ್ಕಾರವು ಪರಿಶೀಲಿಸುತ್ತಿದ್ದು ಶೀಘ್ರದಲ್ಲೇ ನಿರ್ಣಯ ತೆಗೆದುಕೊಳ್ಳಲಿದೆ.

**ವಾರ್ಷಿಕ ಯೋಜನೆ 2006-07**

205. ನಾನು ವಾರ್ಷಿಕ ಯೋಜನೆಯ ಅಂದಾಜನ್ನು 2005-06ರ ಪರಿಷ್ಕೃತ ಅಂದಾಜು ರೂ. 12852.82 ಕೋಟಿ ರೂ.ಗಳಿಂದ 2006-07ರ ಮುಂಗಡ ಅಂದಾಜು ರೂ.16166.00 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದೇನೆ. ಇದು ಯೋಜನಾ ಅಂದಾಜು ವೆಚ್ಚದಲ್ಲಿ ಶೇಕಡ 25.78 ರಷ್ಟು ಹೆಚ್ಚಳವಾಗಿದೆ. ಪ್ರಮುಖ ವಲಯವಾರು ಹಂಚಿಕೆಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

**ನಾನು ಈಗ ತೆರಿಗೆ ಪ್ರಸ್ತಾವಗಳನ್ನು ಮಂಡಿಸುತ್ತೇನೆ**

***ಎಷ್ಟು ಹೇರಿದರೇನು ತೆರಿಗೆಗಳ ಭಾರ,***
***ಜನರ ಸಲುವಾಗಿಯೇ ಉಂಟು ಸರಕಾರ.***
***ಭಾರವಾದರೆ ತಲೆಯ ಮೇಲಿರುವ ವಜ್ಜೆ,***
***ಮೆಲ್ಲಮೆಲ್ಲನೆ ನಡೆದು ಹಾಕೋಣ ಹೆಜ್ಜೆ.***

***- ದಿನಕರ ದೇಸಾಯಿ***

206. ಸಭಾಧ್ಯಕ್ಷರೇ, ಕಳೆದ ವರ್ಷಗಳಂತೆ ಪ್ರಸಕ್ತ ಸಾಲಿನಲ್ಲಿಯೂ ಕೂಡಾ ರಾಜ್ಯ ಸಂಪನ್ಮೂಲ ಸಂಗ್ರಹಣೆ ಉತ್ತಮವಾಗಿದೆಯೆಂದು ಸಂತೋಷದಿಂದ ನಾನು ತಿಳಿಸ ಬಯಸುತ್ತೇನೆ. ವಿವಿಧ ತೆರಿಗೆಗಳ ಸಂಗ್ರಹಣೆಯಲ್ಲಿ ಹಿಂದಿನ ಆಯವ್ಯಯದಲ್ಲಿ ನಿಗದಿ ಮಾಡಲಾದ ಗುರಿಗಳನ್ನು ನಾವು ಮೀರಲಿದ್ದೇವೆ.

**ವಾಣಿಜ್ಯ ತೆರಿಗೆಗಳು:**

**ಮೌಲ್ಯವರ್ಧಿತ ತೆರಿಗೆ:**

207. ಸಭಾಧ್ಯಕ್ಷರೇ, 2005ನೇ ಏಪ್ರಿಲ್ 1ರಿಂದ ರಾಜ್ಯದಲ್ಲಿ ಮೌಲ್ಯವರ್ಧಿತ ತೆರಿಗೆ ಜಾರಿಗೊಳಿಸಲಾಗಿದ್ದು, ಆರಂಭದ ಎಡರುತೊಡರುಗಳನ್ನು ಹೊರತುಪಡಿಸಿದಂತೆ ಅದನ್ನು ಸಫಲವಾಗಿ ಜಾರಿಗೊಳಿಸಲಾಗಿರುತ್ತದೆ. ಈ ಹೊಸ ತೆರಿಗೆ ವ್ಯವಸ್ಥೆಯ ಲಾಭ ಸರಕುಗಳ ಬೆಲೆ ಇಳಿತದ ಮೂಲಕ ಗ್ರಾಹಕರಿಗೆ ಇನ್ನೂ ಸಂಪೂರ್ಣವಾಗಿ ತಲುಪದಿದ್ದರೂ ಕೂಡ, ರಾಜ್ಯದ ವಾಣಿಜ್ಯ ಮತ್ತು ಉದ್ಯಮಗಳು ಇದರಿಂದ ಗಣನೀಯವಾಗಿ ಲಾಭ ಪಡೆದಿರುತ್ತವೆ. ಮೌಲ್ಯವರ್ಧಿತ ತೆರಿಗೆ ಜಾರಿಯ ಮೊದಲ ವರ್ಷದಲ್ಲಿ ಹಿಂದಿನ ಮಾರಾಟ ತೆರಿಗೆ ವ್ಯವಸ್ಥೆಯಡಿಯ ಆದಾಯದ ಅಂದಾಜಿಗೆ ಹೋಲಿಸಿದಲ್ಲಿ ನಮ್ಮ ತೆರಿಗೆ ಆದಾಯದಲ್ಲಿ ಸುಮಾರು 2160 ಕೋಟಿ ರೂಪಾಯಿಗಳ ಇಳಿತವಾಗುವ ಅಂದಾಜಿತ್ತು. ಇತ್ತೀಚಿನ ಅಂದಾಜಿನಂತೆ ತೆರಿಗೆ ಆದಾಯದಲ್ಲಿನ ಇಳಿತ ಸುಮಾರು 1200 ಕೋಟಿ ರೂಪಾಯಿಗಳಾಗಬಹುದೆಂದು ನಿರೀಕ್ಷಿಸಲಾಗಿದೆ. ಇದು ಒಂದು ಒಳ್ಳೆಯ ಬೆಳವಣಿಗೆಯಾಗಿದ್ದು, ಈ ಹೊಸ ತೆರಿಗೆ ವ್ಯವಸ್ಥೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿ ಮಾಡಲು ನನಗೆ ಉತ್ತೇಜನ ನೀಡಿರುತ್ತದೆ. ತಾನು ಕೊಟ್ಟ ಮಾತಿನಂತೆ ಕೇಂದ್ರ ಸರ್ಕಾರ ಮೌಲ್ಯವರ್ಧಿತ ತೆರಿಗೆ ಜಾರಿಯ ಮೊದಲ ವರ್ಷದ ಆದಾಯ ಇಳಿತವನ್ನು ರಾಜ್ಯ ಸರ್ಕಾರಕ್ಕೆ ಸಂಪೂರ್ಣವಾಗಿ ತುಂಬಿ ಕೊಡುತ್ತಾ ಬಂದಿರುತ್ತದೆ. ಇದೇ ರೀತಿಯ ಸಹಕಾರವನ್ನು ಕೇಂದ್ರ ಮಾರಾಟ ತೆರಿಗೆಯಡಿಯ ಸುಧಾರಣೆ ಮತ್ತು ಸೇವೆಗಳ ಮೇಲಿನ ತೆರಿಗೆ ವಿಷಯಗಳಲ್ಲಿಯೂ ಕೂಡ ಕೇಂದ್ರ ಸರ್ಕಾರದಿಂದ ನಾವು ನಿರೀಕ್ಷಿಸಿರುತ್ತೇವೆ.

208. ಮೌಲ್ಯವರ್ಧಿತ ತೆರಿಗೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಉದ್ದೇಶದಿಂದ ವಾಣಿಜ್ಯ ತೆರಿಗೆ ಇಲಾಖೆಯ ಸಂಘಟನೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಲಾಗಿತ್ತು. ನಮ್ಮ ಒಂದು ವರ್ಷದ ಅನುಭವದ ಹಿನ್ನೆಲೆಯಲ್ಲಿ ಈ ಬಗ್ಗೆ ಮತ್ತಷ್ಟು ಬದಲಾವಣೆಗಳನ್ನು ಮಾಡಿ ಈ ಹೊಸ ತೆರಿಗೆ ವ್ಯವಸ್ಥೆಯ ಜಾರಿಯನ್ನು ಮತ್ತಷ್ಟು ಬಲಗೊಳಿಸಲು ನಾನು ಉದ್ದೇಶಿಸಿರುತ್ತೇನೆ.

**ಪರಿಹಾರಗಳು:**

209. ವಾಣಿಜ್ಯ ಉದ್ಯಮಗಳ ಸಂಘ ಸಂಸ್ಥೆಗಳು ಹಲವಾರು ತೆರಿಗೆ ವಿನಾಯಿತಿ, ರಿಯಾಯಿತಿ ಹಾಗೂ ಇತರ ಪರಿಹಾರಗಳನ್ನು ಕೋರಿರುತ್ತವೆ. ಈಗಾಗಲೇ ಈ ಸದನಕ್ಕೆ ತಿಳಿಸಿದಂತೆ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯ ವಿನ್ಯಾಸ ಎಲ್ಲಾ ರಾಜ್ಯಗಳ ಒಟ್ಟಾರೆ ಅಭಿಪ್ರಾಯದ ಆಧಾರದ ಮೇಲೆ ಮೂಡಿ ಬಂದಿದ್ದು, ಇದರಲ್ಲಿ ರಾಜ್ಯ ಮಾರ್ಪಾಡುಗಳನ್ನು ಮಾಡಲು ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯಕ್ಕೆ ಲಭ್ಯವಿರುವ ಮಿತಿಯೊಳಗೆ ಸಾಧ್ಯವಿರುವ ಕೆಲವು ಕೋರಿಕೆಗಳನ್ನು ನಾನು ಪರಿಗಣಿಸಿರುತ್ತೇನೆ.

210. ಅದರಂತೆ,

1. ಮುಂದಿನ ಆರು ತಿಂಗಳ ಅವಧಿಗೆ ಭತ್ತ, ಅಕ್ಕಿ, ಗೋಧಿ, ಬೇಳೆಕಾಳುಗಳು, ಅಕ್ಕಿ ಮತ್ತು ಗೋಧಿಯ ಹಿಟ್ಟು ಮತ್ತು ರವೆ ಹಾಗೂ ಮೈದಾ ಹಿಟ್ಟು,
2. ಎತ್ತಿನ ಲಾಳಗಳು,
3. ಎತ್ತಿನ ಗಾಡಿಯ ಕೆಲವು ಬಿಡಿಭಾಗಗಳು ಮತ್ತು

4. ಬೇಳೆ ಚುನ್ನಿಯ ಮೇಲೆ ತೆರಿಗೆ ವಿನಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ.

211. ಇದಲ್ಲದೆ,

1. ಜೋಳದ ಅವಲಕ್ಕಿ,

2. ಒಣಮೆಣಸಿನಕಾಯಿಯ ಚೂರು ಮತ್ತು ಬೀಜಗಳು,

3. ಕೈಯಿಂದ ತಯಾರಿಸಿದ ಸಾಬೂನು,

4. ಸರ್ಜಿಕಲ್ ಗ್ಲೋವ್ಸ್‌ಗಳು,

5. ಎಲ್ಲಾ ಕಾಂಪ್ಯಾಕ್ಟ್ ಡಿಸ್ಕ್‌ಗಳು,

6. ಕೋಲ್ಡ್ ಟಾರು,

7. ಕೆಲವೊಂದು ಪರೀಕ್ಷೆ ಮತ್ತು ಅಳತೆ ಉಪಕರಣಗಳು,

8. ಜೈವಿಕ ಕೀಟ ನಿಯಂತ್ರಕಗಳು,

9. ಕೆಲವೊಂದು ಲೈನಿಂಗ್ ಇರುವ ಪ್ಯಾಕಿಂಗ್ ವಸ್ತುಗಳ ಮತ್ತು

10. ರಕ್ಷಣಾ ಪಡೆಗಳಿಗೆ ಕ್ಯಾಂಟೀನ್ ಸ್ಟೋರ್ಸ್ ಇಲಾಖೆಯಿಂದ ಮಾರಾಟವಾಗುವ ಕೆಲವು ದಿನಬಳಕೆ ವಸ್ತುಗಳ ಮೇಲಿನ ತೆರಿಗೆಯನ್ನು ಶೇ.12.5ರಿಂದ ಶೇ.4ಕ್ಕೆ ಇಳಿಸಲು ನಾನು ಪ್ರಸ್ತಾವಿಸುತ್ತೇನೆ.

212. ಈಗಾಗಲೇ ಅಧಿಸೂಚಿಸಲಾಗಿರುವ ಶೇ.4ರ ಕೈಗಾರಿಕಾ ಕಚ್ಚಾ ವಸ್ತುಗಳು ಮತ್ತು ಬಂಡವಾಳು ಸರಕುಗಳ ಪಟ್ಟಿಗೆ ಮತ್ತಷ್ಟು ಸರಕುಗಳನ್ನು ಸೇರಿಸಲು ಹಾಗೂ ಮಾಹಿತಿ ತಂತ್ರಜ್ಞಾನ ಸರಕುಗಳ ಪಟ್ಟಿಯನ್ನು ಪರಿಷ್ಕರಿಸಲು ನಾನು ಪ್ರಸ್ತಾವಿಸುತ್ತೇನೆ.

(ಅ) ನಿಗದಿತ ಮಿತಿಗಿಂತ ಹೆಚ್ಚಿನ ಮೌಲ್ಯದ ಬಂಡವಾಳು ಸರಕುಗಳ ಮೇಲಿನ ಹೂಡುವಳಿ ತೆರಿಗೆ ರಿಬೇಟನ್ನು 12 ತಿಂಗಳ ಅವಧಿಯ ಬದಲಾಗಿ ಒಂದೇ ತಿಂಗಳಿನಲ್ಲಿ ಉಪಯೋಗಿಸಿಕೊಳ್ಳುವ ಅವಕಾಶ ಮಾಡಲು,

(ಆ) ಬೇಕರಿಗಳಿಗೆ ಮತ್ತು ಎಲ್ಲಾ ತರಹದ ಕಲ್ಲುಗಳನ್ನು ಪುಡಿ ಮಾಡುವ ಘಟಕಗಳಿಗೆ ರಾಜಿ ತೆರಿಗೆ ಸೌಲಭ್ಯ ವಿಸ್ತರಿಸಲು ಮತ್ತು

(ಇ) ಕೆಲವೊಂದು ಷರತ್ತುಗಳಿಗೊಳಪಟ್ಟು ರಾಜಿ ಸೌಲಭ್ಯ ಪಡೆದಿರುವ ಕಾಮಗಾರಿ ಗುತ್ತಿಗೆದಾರರಿಗೆ ಹೊರರಾಜ್ಯದಿಂದ ಸರಕುಗಳನ್ನು ಖರೀದಿಸುವ ಅವಕಾಶ ನೀಡಲು ಮತ್ತು ಅವರ ಉಪ ಕಾಮಗಾರಿ ಗುತ್ತಿಗೆದಾರರ ವಹಿವಾಟಿನ ಮೇಲೆ ವಿನಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ.

**ಸುಧಾರಣಾ ಕ್ರಮಗಳು:**

213. ವ್ಯಾಪಾರಿಗಳಿಗೆ ಮರುಪಾವತಿ ಮಾಡಬೇಕಾದ ಮೊತ್ತವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡುವ ವ್ಯವಸ್ಥೆಯನ್ನು ತರಲು ಹಾಗೂ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿಯಲ್ಲಿ ಇತರೆ ಕೆಲವು ಸುಧಾರಣಾ ಕ್ರಮಗಳನ್ನು ತರಲು ನಾನು ಪ್ರಸ್ತಾವಿಸುತ್ತೇನೆ. ಈ ಕ್ರಮಗಳ ವಿವರಗಳು ಅನುಬಂಧ 2 ಇರುತ್ತವೆ.

214. ಇದಲ್ಲದೆ, ರಾಜ್ಯದೊಳಗೆ ಸರಕು ಸಾಗಾಣಿಕೆ ಸುಲಲಿತವಾಗುವಂತೆ ತುಮಕೂರು ರಸ್ತೆಯ ಹೊರ ಮತ್ತು ಮೈಸೂರು ರಸ್ತೆಯ ಆಂತರಿಕ ತನಿಖಾ ಠಾಣೆಗಳನ್ನು ರದ್ದು ಮಾಡಲು ನಾನು ಪ್ರಸ್ತಾವಿಸುತ್ತೇನೆ.

**ಮಾರಾಟ ತೆರಿಗೆ:**

**ಪರಿಹಾರಗಳು:**

215. ರಾಜ್ಯದ ಮಂಗಳೂರಿನಲ್ಲಿರುವ ಓಎನ್‌ಜಿಸಿ ಸ್ವಾಮ್ಯದ ತೈಲ ಸಂಸ್ಕರಣಾ ಘಟಕದ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದ ಮೇಲಿರುವ ಮರುಮಾರಾಟ ತೆರಿಗೆಯನ್ನು ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

**ಸುಧಾರಣಾ ಕ್ರಮ:**

216. ಮೌಲ್ಯವರ್ಧಿತ ತೆರಿಗೆ ಜಾರಿಯ ನಂತರ ಕೆಲವು ಸರಕುಗಳ ಮೇಲಷ್ಟೇ ಹಿಂದಿನ ಮಾರಾಟ ತೆರಿಗೆ ಜಾರಿಯಿದ್ದರೂ, ಹಿಂದಿನ ಸಾಲುಗಳ ಕರನಿರ್ಧರಣೆ ಬಾಕಿ ಇರುವ ಪ್ರಕರಣಗಳು ಭಾರಿ ಸಂಖ್ಯೆಯಲ್ಲಿದ್ದು, ಆಡಳಿತಾತ್ಮಕ ಹಿತದೃಷ್ಟಿಯಿಂದ ಅವುಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಬೇಕಾಗಿರುತ್ತದೆ. ಅದರಂತೆ, ಕೆಲವು ಷರತ್ತುಗಳಿಗೊಳಪಟ್ಟು ವ್ಯಾಪಾರಿಗಳು ಸಲ್ಲಿಸಿರುವ ಮಾರಾಟ ತೆರಿಗೆ ಹಾಗೂ ಪ್ರವೇಶ ತೆರಿಗೆಗಳಿಗೆ ಸಂಬಂಧಿಸಿದ ವಾರ್ಷಿಕ ವಹಿವಾಟು ವರದಿಗಳನ್ನು ಒಪ್ಪಿಕೊಳ್ಳುವ ಯೋಜನೆಯನ್ನು ಜಾರಿಗೆ ತರಲು ನಾನು ಪ್ರಸ್ತಾವಿಸುತ್ತೇನೆ.

**ಪ್ರವೇಶ ತೆರಿಗೆ:**

**ಪರಿಹಾರ:**

217. ಬೀಡಿ ಎಲೆಗಳು, ರಬ್ಬರ್ ಟೈರುಗಳು ಮತ್ತು ಟ್ಯೂಬ್‌ಗಳ ಮೇಲೆ ವಿನಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ.

218. ಮಂಗಳೂರಿನ ತೈಲ ಸಂಸ್ಕರಣಾ ಘಟಕದಿಂದ ಹೊರದೇಶಗಳಿಗೆ ರಫ್ತುಗಳನ್ನು ಉತ್ತೇಜಿಸಲು, ರಫ್ತಾಗುವ ತೈಲ ಉತ್ಪನ್ನಗಳಲ್ಲಿ ಬಳಸಿದ ಕಚ್ಚಾ ತೈಲದ ಮೇಲಿನ ತೆರಿಗೆಯನ್ನು ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

**ವಿಶೇಷ ಪ್ರವೇಶ ತೆರಿಗೆ:**

**ಸುಧಾರಣಾ ಕ್ರಮ:**

219. ವ್ಯಾಪಾರ ಪಲ್ಲಟವನ್ನು ತಡೆಯಲು ಇನ್ನೂ ಕೆಲವು ಆಯ್ದ ಸರಕುಗಳ ಮೇಲೆ ತೆರಿಗೆ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ.

**ಕೃಷಿ ವರಮಾನ ತೆರಿಗೆ:**

**ಪರಿಹಾರ:**

220. ಕಾಫಿ ಬೆಳೆಗಾರರು ಸತತವಾಗಿ ಅನುಭವಿಸುತ್ತಿರುವ ನಷ್ಟವನ್ನು ಪರಿಗಣಿಸಿ, ಫರ್ಮ್‌ಗಳನ್ನು ಮತ್ತು ಕಂಪನಿಗಳನ್ನು ಹೊರತುಪಡಿಸಿದಂತೆ ಮಿಕ್ಕೆಲ್ಲ ಬೆಳೆಗಾರರ ಮೇಲಿನ ತೆರಿಗೆಯನ್ನು ವಿನಾಯಿತಿಗೊಳಿಸಲು ಹಾಗೂ ಫರ್ಮ್‌ಗಳ ಮೇಲಿನ ತೆರಿಗೆಯನ್ನು ಶೇ.40ರಿಂದ ಶೇ.30ಕ್ಕೆ ಇಳಿಸಲು ಮತ್ತು ಕಂಪನಿಗಳ ಮೇಲಿನ ತೆರಿಗೆಯನ್ನು ಶೇ.50ರಿಂದ ಶೇ.35ಕ್ಕೆ ಇಳಿಸಲು ನಾನು ಪ್ರಸ್ತಾವಿಸುತ್ತೇನೆ.

**ಸುಧಾರಣಾ ಕ್ರಮ:**

221. ವಿವಾದಿತ ಪ್ರಕರಣಗಳಲ್ಲಿ ತಡೆಯಾಜ್ಞೆ ಅವಧಿಯಲ್ಲೂ ತೆರಿಗೆ ಬಾಕಿ ಬಗ್ಗೆ ಬಡ್ಡಿ ವಸೂಲು ಮಾಡಲು ಅವಕಾಶ ಕಲ್ಪಿಸಲು ನಾನು ಪ್ರಸ್ತಾವಿಸುತ್ತೇನೆ.

**ಮನರಂಜನಾ ತೆರಿಗೆ:**

**ಪರಿಹಾರಗಳು:**

222. ಮ್ಯಾಜಿಕ್ ಶೋಗಳು ಮತ್ತು ಕ್ರೀಡೆಗಳ ಮೇಲಿನ ತೆರಿಗೆಯನ್ನು ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

223. ತೆರಿಗೆ ವಂಚನೆಯಲ್ಲದ ಕೆಲವು ತಪ್ಪುಗಳ ಬಗ್ಗೆ ವಿಧಿಸಲಾಗುವ ರಾಜಿ ದಂಡವನ್ನು ಕಡಿಮೆ ಮಾಡಲು ನಾನು ಪ್ರಸ್ತಾವಿಸುತ್ತೇನೆ.

**ಸುಧಾರಣಾ ಕ್ರಮಗಳು:**

224. ಕೇಬಲ್ ಟಿ.ವಿ. ಮೇಲಿನ ತೆರಿಗೆಯನ್ನು ಪರಿಣಾಮಕಾರಿಯಾಗಿ ವಸೂಲಿ ಮಾಡಲು ಮಲ್ಟಿ ಸಿಸ್ಟಂ ಆಪರೇಟರುಗಳ ಮೇಲೆ ಮಾತ್ರ ತೆರಿಗೆ ವಿಧಿಸಲು ಮತ್ತು ಅವರ ಕೇಬಲ್ ಆಪರೇಟರುಗಳ ಮೇಲಿನ ತೆರಿಗೆ ವಿನಾಯಿತಿಗೊಳಿಸಲು ಹಾಗೂ ವಿವಾದದಲ್ಲಿರುವ ಹಿಂದಿನ ವರ್ಷಗಳ ಮಲ್ಟಿ ಸಿಸ್ಟಂ ಆಪರೇಟರುಗಳ ಮೇಲಿನ ತೆರಿಗೆಯನ್ನು ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

225. ನಗರ ಪ್ರದೇಶ ಮತ್ತು ಇತರ ಪ್ರದೇಶಗಳಲ್ಲಿ ಚಲನ ಚಿತ್ರ ಮತ್ತು ಕೇಬಲ್ ಟಿ.ವಿ. ಹೊರತುಪಡಿಸಿದಂತೆ ಉಳಿದ ಮನರಂಜನೆ ಕಾರ್ಯಕ್ರಮಗಳ ಬಗ್ಗೆ ಪ್ರಸ್ತುತ ನಿಗದಿ ಮಾಡಿರುವ ಬೇರೆ ಬೇರೆ ತೆರಿಗೆ ವಿನಾಯಿತಿ ಪ್ರವೇಶ ಶುಲ್ಕ ಮಿತಿಗಳ ಬದಲಾಗಿ ಎಲ್ಲ ಪ್ರದೇಶಗಳಿಗೂ ಒಂದೇ ಸಮನಾದ ಪ್ರವೇಶ ಶುಲ್ಕ ಮಿತಿಯನ್ನು ನಿಗದಿಪಡಿಸಲು ನಾನು ಪ್ರಸ್ತಾವಿಸುತ್ತೇನೆ.

226. ತೆರಿಗೆ ವಂಚನೆಯನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಲು ಮನರಂಜನಾ ತೆರಿಗೆ ಅಧಿಕಾರಿಗಳಿಗೆ ಕೆಲ ಅಧಿಕಾರವನ್ನು ನೀಡಲು ನಾನು ಪ್ರಸ್ತಾವಿಸುತ್ತೇನೆ.

**ವೃತ್ತಿ ತೆರಿಗೆ:**

**ಸುಧಾರಣಾ ಕ್ರಮಗಳು:**

227. ವಿಮಾ ಕಂಪನಿಗಳು ಮತ್ತು ಬ್ಯಾಂಕುಗಳಿಂದ ಕಮಿಷನ್ ಪಡೆದು ವೃತ್ತಿ ತೆರಿಗೆ ಭಾಧ್ಯರಾಗಿರುವ ವಿಮಾ ಪ್ರತಿನಿಧಿಗಳು ಮತ್ತು ಪಿಗ್ಮಿ ಏಜೆಂಟರುಗಳ ವೃತ್ತಿ ತೆರಿಗೆಯನ್ನು ಅಂತಹ ವಿಮಾ ಕಂಪನಿಗಳು ಮತ್ತು ಬ್ಯಾಂಕುಗಳೇ ನೇರವಾಗಿ ಸರ್ಕಾರಕ್ಕೆ ಪಾವತಿಸುವಂತೆ ಅವಕಾಶ ಮಾಡಲು ನಾನು ಪ್ರಸ್ತಾಪಿಸುತ್ತೇನೆ.

228. ಸಾಗಾಣಿಕೆ ವಾಹನಗಳ ಪರ್ಮಿಟ್‌ದಾರರ ಬದಲಾಗಿ ವಾಹನಗಳ ಮಾಲೀಕರ ಮೇಲೆ ತೆರಿಗೆ ವಿಧಿಸಲು ಮತ್ತು ತೆರಿಗೆ ವಸೂಲು ಮಾಡುವ ಬಗ್ಗೆ ಸಮಯ ನಿಗದಿ ಮಾಡಲು ನಾನು ಪ್ರಸ್ತಾಪಿಸುತ್ತೇನೆ.

**ಜೂಜು ತೆರಿಗೆ**

**ಪರಿಹಾರ**

229. ಮೈಸೂರು ರೇಸ್ ಕ್ಲಬ್ ಪಾವತಿಸಬೇಕಾದ ರಾಜಿ ತೆರಿಗೆ ಮೊತ್ತವನ್ನು ಶೇ. 4 ರಿಂದ ಶೇ. 2 ಕ್ಕೆ ಇಳಿಸಲು ನಾನು ಪ್ರಸ್ತಾಪಿಸುತ್ತೇನೆ.

230. **ತತ್ಸಂಬಂಧ ತಿದ್ದುಪಡಿಗಳು:** ಮೇಲೆ ಪ್ರಸ್ತಾಪಿಸಿದ ಕ್ರಮಗಳನ್ನು ಜಾರಿಗೊಳಿಸಲು ಸಂಬಂಧಪಟ್ಟ ತೆರಿಗೆ ಅಧಿನಿಯಮಗಳಿಗೆ ತಿದ್ದುಪಡಿ

ಅವಶ್ಯಕತೆ ಇರುತ್ತದೆ. ಸದರಿ ತಿದ್ದುಪಡಿಗಳಲ್ಲದೇ ಸುಧಾರಣಾ ಕ್ರಮವಾಗಿ ಇತರೆ ತಿದ್ದುಪಡಿಗಳನ್ನು ಮಂಡಿಸಲಾಗುವುದು.

**ಅಬಕಾರಿ**

231. ಅಬಕಾರಿ ಉದ್ಯಮದ ಸ್ವಾಯತ್ತತೆಯನ್ನು ಹತ್ತಿಕ್ಕದೆ, ಅಬಕಾರಿ ವಲಯವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವುದಕ್ಕೆ ಆದ್ಯತೆ ನೀಡಲಾಗುವುದು. ಈ ದಿಶೆಯಲ್ಲಿ, ಸಾರಾಯಿ ಮಾರಾಟ ಪ್ರಕ್ರಿಯೆಯನ್ನು ನಿಕಟವಾಗಿ ಗಮನಿಸಲಾಗುವುದು.

232. ಕರ್ನಾಟಕ ರಾಜ್ಯದಲ್ಲಿ 2003-04 ನೇ ಅಬಕಾರಿ ವರ್ಷದಿಂದ ಮದ್ಯ ವಿತರಣೆಯನ್ನು ಕರ್ನಾಟಕ ಪಾನೀಯ ನಿಗಮದ ಮುಖಾಂತರ ಮಾಡಲಾಗುತ್ತಿದ್ದು ಸದರಿ ವ್ಯವಸ್ಥೆಯು ಸುಗಮವಾಗಿ ನಡೆಯುತ್ತಿದೆ. ಈ ಹಿನ್ನಲೆಯಲ್ಲಿ ಖಾಸಗಿಯವರಿಗೆ ನೀಡುತ್ತಿರುವ ಸಗಟು ಮದ್ಯ ಮಾರಾಟದ ಸನ್ನದು (ಸಿಎಲ್-1) ಗಳನ್ನು, 01.07.2006 ರಿಂದ ಜಾರಿಗೆ ಬರುವಂತೆ ರದ್ದುಗೊಳಿಸಲು ಪ್ರಸ್ತಾಪಿಸಲಾಗಿದೆ.

233. ಪ್ರಸ್ತುತ ಸಾಲಿನಲ್ಲಿ ಈ ಕೆಳಕಂಡ ಕ್ರಮಗಳ ಮೂಲಕ ರೂ.300 ಕೋಟಿಗಳ ಸಂಪನ್ಮೂಲಗಳನ್ನು ಹೆಚ್ಚುವರಿಯಾಗಿ ಕ್ರೋಢೀಕರಿಸಲು ಉದ್ದೇಶಿಸಿದ್ದೇನೆ:

ಅ. ಕರ್ನಾಟಕ ಪಾನೀಯ ನಿಗಮವು ಸನ್ನದುದಾರರಿಗೆ ನೇರವಾಗಿ ಮದ್ಯವನ್ನು ಮಾರಾಟ ಮಾಡುವುದರ ಮೂಲಕ ರೂ.125 ಕೋಟಿ.

ಆ. ಅಬಕಾರಿ ಶುಲ್ಕ ಹಾಗೂ ಹೆಚ್ಚುವರಿ ಅಬಕಾರಿ ಶುಲ್ಕವನ್ನು ಪರಿಷ್ಕರಿಸುವ ಮೂಲಕ ರೂ.175 ಕೋಟಿ.

234. ಪ್ರಸ್ತುತ, ಮದ್ಯದ ಬೆಲೆಗೆ ಅನುಸಾರವಾಗಿ ಅಬಕಾರಿ ಶುಲ್ಕವನ್ನು ಬಲ್ಕ್ ಲೀಟರಿಗೆ 40 ರೂಪಾಯಿ ಮತ್ತು 55 ರೂಪಾಯಿಯಂತೆ ವಿಧಿಸಲಾಗುತ್ತಿದೆ. ಈ ಪದ್ಧತಿಯನ್ನು ಸುಧಾರಿಸುವ ದೃಷ್ಟಿಯಿಂದ, ಮದ್ಯದ ಬೆಲೆ ಎಷ್ಟೇ ಇದ್ದಾಗ್ಯೂ, ಅಬಕಾರಿ ಶುಲ್ಕವನ್ನು ಬಲ್ಕ್ ಲೀಟರಿಗೆ 45 ರೂಪಾಯಿಯಂತೆ ವಿಧಿಸಲು ಪ್ರಸ್ತಾವಿಸುತ್ತೇನೆ.

235. ಬೀರ್ ಮೇಲಿನ ಅಬಕಾರಿ ಶುಲ್ಕವನ್ನು ಬಲ್ಕ್ ಲೀಟರಿಗೆ 4 ರೂಪಾಯಿಗಳಿಂದ 5 ರೂಪಾಯಿಗಳಿಗೆ ಹೆಚ್ಚಿಸಲು ಪ್ರಸ್ತಾವಿಸುತ್ತೇನೆ.

236. ಅಬಕಾರಿ ಶುಲ್ಕಗಳ ಸುಧಾರಣಾ ದೃಷ್ಟಿಯಿಂದ, ಘೋಷಿತ ಮದ್ಯದ ಬೆಲೆಯ ಹಂತಗಳನ್ನು ಹಾಗೂ ಹೆಚ್ಚುವರಿ ಅಬಕಾರಿ ಶುಲ್ಕದ ದರಗಳನ್ನು ಅನುಬಂಧ-III ರಲ್ಲಿ ನಮೂದಿಸಿರುವಂತೆ ಪರಿಷ್ಕರಿಸಲು ಪ್ರಸ್ತಾವಿಸುತ್ತೇನೆ.

237. ಪ್ರಸ್ತುತ, ಮದ್ಯ ತಯಾರಕರು ಘೋಷಿತ ಮದ್ಯದ ಬೆಲೆಯನ್ನು ವರ್ಷದಲ್ಲಿ ಮೂರು ಬಾರಿ ಪರಿಷ್ಕರಿಸುವ ಅವಕಾಶ ಹೊಂದಿರುತ್ತಾರೆ. ಪ್ರಸ್ತಾಪಿಸಿರುವ ಅಬಕಾರಿ ಶುಲ್ಕ ಮತ್ತು ಹೆಚ್ಚುವರಿ ಅಬಕಾರಿ ಶುಲ್ಕಗಳ ನಿಮಿತ್ತ, ಮದ್ಯ ತಯಾರಕರು, ಘೋಷಿತ ದರಗಳ ಪರಿಷ್ಕರಣೆಗೆ ಸಂಬಂಧಿಸಿದ ಉಪಬಂಧಗಳ ಜೊತೆಗೆ, ಘೋಷಿತ ದರಗಳನ್ನು ಏಪ್ರಿಲ್ 1, 2006 ರಿಂದ ಪರಿಷ್ಕರಿಸಲು ಅವಕಾಶ ಹೊಂದಿರುತ್ತಾರೆ.

238. ಡಿಸ್ಟಿಲರಿ, ಬ್ರಿವರಿ, ವೈನರಿ, ಸಾರಾಯಿ ತಯಾರಿಕೆ ಇತ್ಯಾದಿ ಘಟಕಗಳ ಮೇಲ್ವಿಚಾರಣೆಗಾಗಿ ನೇಮಿಸುವ ಅಬಕಾರಿ ಸಿಬ್ಬಂದಿಗಳ ವೇತನವನ್ನು ಸದರಿ ತಯಾರಿಕಾ ಘಟಕಗಳೇ ಭರಿಸುವ ಪದ್ಧತಿಯು ಜಾರಿಯಲ್ಲಿರುತ್ತದೆ. ಇದಕ್ಕೆ ತಗಲುವ ವಾರ್ಷಿಕ ವೆಚ್ಚ ಪ್ರಸ್ತುತ ಸುಮಾರು

3.80 ಕೋಟಿ ರೂ.ಗಳಾಗಿರುತ್ತದೆ. ಈ ಪದ್ಧತಿಯನ್ನು ಕೈಬಿಟ್ಟು ಈ ವೆಚ್ಚವನ್ನು ಸರ್ಕಾರವೇ ಭರಿಸಲು ಪ್ರಸ್ತಾವಿಸಲಾಗಿದೆ.

239. ಮೇಲಿನ ಪ್ರಸ್ತಾವನೆಗಳು ಏಪ್ರಿಲ್ 1, 2006ರಿಂದ ಜಾರಿಗೊಳ್ಳಲಿವೆ.

240. ಪೆಟ್ರೋಲಿನಲ್ಲಿ ಎಥನಾಲ್ (ಮದ್ಯಸಾರ) ಅನ್ನು ಮಿಶ್ರಣ ಮಾಡಿ ವಾಹನಗಳಿಗೆ ಬಳಸುವ ನೀತಿಯ ಹಿನ್ನಲೆಯಲ್ಲಿ ಕಾಕಂಬಿಯಿಂದ ಉತ್ಪಾದನೆಯಾಗುವ ಮದ್ಯಸಾರವನ್ನು ಎಥನಾಲ್ ಆಗಿ ಪರಿವರ್ತಿಸುವ ಪ್ರಕ್ರಿಯೆಗೆ ವಿಶೇಷ ಮಹತ್ವ ಬಂದಿರುತ್ತದೆ. ಇದರಿಂದಾಗಿ ಮದ್ಯ ಹಾಗೂ ಔಷಧಿಗಳ ತಯಾರಿಕೆಗೆ ಬೇಕಾಗುವ ಮದ್ಯಸಾರದ ಲಭ್ಯತೆ ಕಡಿಮೆಯಾಗುವ ಸಾಧ್ಯತೆಗಳಿರುವುದರಿಂದ ಕಾಕಂಬಿಯಲ್ಲದೇ ಕಬ್ಬಿನ ರಸ, ವಿವಿಧ ರೀತಿಯ ಧಾನ್ಯಗಳು, ಮರ ಗೆಣಸು ಇತ್ಯಾದಿ ಪದಾರ್ಥಗಳಿಂದ ಕೂಡ ಮದ್ಯಸಾರವನ್ನು ಉತ್ಪಾದಿಸಲು ಅನುವು ಮಾಡಿಕೊಡಲು ಪ್ರಸ್ತಾವಿಸಲಾಗಿದೆ.

241. ಪ್ರಸ್ತುತ, ಭಾರತದ ಹೊರಗಿನಿಂದ ಆಮದುಮಾಡಿಕೊಂಡ ವಿದೇಶಿ ಮದ್ಯದ ಮೇಲೆ ವಿಶೇಷ ಶುಲ್ಕವನ್ನು ವಿಧಿಸಲಾಗುತ್ತಿದೆ. ಭಾರತದಲ್ಲಿ ತಯಾರಾದ ಮದ್ಯ ಹಾಗೂ ಹೊರದೇಶದಿಂದ ಆಮದು ಮಾಡಿಕೊಂಡ ಮದ್ಯಗಳ ನಡುವೆ ಸಮಸ್ಥಿತಿಯನ್ನು ಕಲ್ಪಿಸಲು, ಮಾರಾಟ ತೆರಿಗೆಗೆ ಬದಲಾಗಿ, ಹೊರದೇಶದಿಂದ ಆಮದು ಮಾಡಿಕೊಂಡ ಮದ್ಯಗಳ ಮೇಲೆ ಭಾರತದಲ್ಲಿ ತಯಾರಾದ ಮದ್ಯಗಳ ಮೇಲೆ ವಿಧಿಸುವ ಹೆಚ್ಚುವರಿ ಅಬಕಾರಿ ಶುಲ್ಕದ ದರದಲ್ಲಿಯೇ ವಿಶೇಷ ಶುಲ್ಕವನ್ನು ವಿಧಿಸಲು ಪ್ರಸ್ತಾವಿಸುತ್ತೇನೆ. ಈ ಪ್ರಸ್ತಾವನೆಯು 1ನೇ ಏಪ್ರಿಲ್, 2006 ರಿಂದ ಜಾರಿಗೆ ಬರುತ್ತದೆ.

242. ಭಾರತೀಯ ಮದ್ಯ ಮಾರಾಟ ಸನ್ನದುದಾರರು ಸರ್ಕಾರಕ್ಕೆ ಸನ್ನದು ಶುಲ್ಕದ ಜೊತೆಯಲ್ಲಿ ಹೊರದೇಶದಿಂದ ಆಮದು ಮಾಡಿಕೊಂಡ ವಿದೇಶಿ ಮದ್ಯ ಮಾರಾಟಕ್ಕಾಗಿ ಹೆಚ್ಚುವರಿ ಶುಲ್ಕವನ್ನು ಪಾವತಿ ಮಾಡುತ್ತಿದ್ದಾರೆ. ಸದರಿ ಹೆಚ್ಚುವರಿ ಶುಲ್ಕವನ್ನು ಕೈಬಿಡಲು ಪ್ರಸ್ತಾಪಿಸಲಾಗಿದೆ. ಈ ಪ್ರಸ್ತಾವನೆಯು 1ನೇ ಜುಲೈ, 2006ರಿಂದ ಜಾರಿಗೆ ಬರುತ್ತದೆ.

243. ಅಬಕಾರಿ ಹಳೆ ಬಾಕಿಗಳನ್ನು ತೀರಿಸಲು ಅನುಕೂಲವಾಗುವಂತೆ ಕರಸಮಾಧಾನ ಯೋಜನೆಯನ್ನು ವಿಸ್ತರಿಸಲು 2005-06ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪ್ರಸ್ತಾವಿಸಲಾಗಿತ್ತು. ಈಗ ಕರಸಮಾಧಾನ ಯೋಜನೆಯ ಅನುಕೂಲವನ್ನು ಪಡೆಯಲು ಅನುವಾಗುವಂತೆ ಮತ್ತೊಮ್ಮೆ ಈ ಸಂಬಂಧದಲ್ಲಿ ಅಧಿಸೂಚನೆಯನ್ನು ಹೊರಡಿಸುವ ದಿನಾಂಕದಿಂದ ಮೂರು ತಿಂಗಳ ಅವಧಿಗೆ ವಿಸ್ತರಿಸಲು ಪ್ರಸ್ತಾವಿಸುತ್ತೇನೆ.

**ಮೋಟಾರು ವಾಹನ ತೆರಿಗೆ**

244. ಪ್ರಸಕ್ತ ಸಾಲಿನಲ್ಲಿ ಮೋಟಾರು ವಾಹನಗಳ ಮೇಲೆ ಯಾವುದೇ ತೆರಿಗೆಯನ್ನು ಹೆಚ್ಚಿಸುವ ಪ್ರಸ್ತಾಪವಿಲ್ಲ. ಆದಾಗ್ಯೂ, ಮಲ್ಟಿ ಆಕ್ಸಲ್ ಮತ್ತು ಆರ್ಟಿಕ್ಯುಲೇಟೆಡ್ ಸರಕು ವಾಹನಗಳಿಗೆ ಹಾಲಿ ಇರುವ ತೆರಿಗೆಯು ನೆರೆ ರಾಜ್ಯಗಳಿಗೆ ಹೋಲಿಸಿದಾಗ ನಮ್ಮ ರಾಜ್ಯದಲ್ಲಿ ಹೆಚ್ಚಾಗಿದ್ದು, ಹೊರ ರಾಜ್ಯಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವ ಸಲುವಾಗಿ ತೆರಿಗೆ ದರವನ್ನು ಕಡಿಮೆ ಮಾಡಲು ಪ್ರಸ್ತಾಪಿಸುತ್ತೇನೆ.

245. ಮುಂದುವರೆದಂತೆ, ಭಾರತ ಸರ್ಕಾರದ ಒಡೆತನಕ್ಕೊಳಪಟ್ಟ ಸಾರ್ವಜನಿಕ ಸ್ವಾಮ್ಯದ ಉದ್ದಿಮೆ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ವರ್ಗಾವಣೆಯಾಗುವ ನೌಕರರು ಹೊಂದಿರುವ ಸಾರಿಗೇತರ ವಾಹನಗಳಿಗೆ ವಾರ್ಷಿಕ ತೆರಿಗೆ ಪಾವತಿ ಸೌಲಭ್ಯವನ್ನು ವಿಸ್ತರಿಸಲು ಪ್ರಸ್ತಾಪಿಸುತ್ತೇನೆ. ಹಾಲಿ ಇರುವ ಅಧಿಸೂಚನೆಗೆ ಸೂಕ್ತ ತಿದ್ದುಪಡಿ ತರಲಾಗುವುದು.

246. ಪ್ರಸ್ತಾಪಿತ ಬದಲಾವಣೆಯನ್ನು ಅನುಬಂಧ-IV ರಲ್ಲಿ ತೋರಿಸಲಾಗಿದೆ. ಈ ಕ್ರಮಗಳಿಂದ ರೂ.10 ಕೋಟಿಗಳ ರಾಜಸ್ವ ನಷ್ಟ ಉಂಟಾಗಲಿದೆ.

**ನೋಂದಣಿ ಮತ್ತು ಮುದ್ರಾಂಕ**

247. ರಾಜ್ಯವು ನೋಂದಣಿ ಮತ್ತು ಮುದ್ರಾಂಕ ಕ್ಷೇತ್ರದಲ್ಲಿ ಅಮೂಲಾಗ್ರ ಸುಧಾರಣೆಗಳನ್ನು ಜಾರಿಗೊಳಿಸಲು ಶ್ರಮಿಸಿದೆ ಮತ್ತು ಈ ಸಂಬಂಧ ಈಗಾಗಲೇ ನೋಂದಣಿ ದಸ್ತಾವೇಜುಗಳ ರದ್ಧತಿ, ನೋಂದಣಿ ಶುಲ್ಕದಲ್ಲಿ ಕಡಿತ ಮತ್ತು ಉಪ ನೋಂದಣಾಧಿಕಾರಿಗಳ ಕಛೇರಿಗಳ ಸಮಗ್ರ ಗಣಕೀಕರಣಗೊಳಿಸುವಿಕೆ ಇಂತಹ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ಈಗಾಗಲೇ ನೋಂದಣಿ ಶುಲ್ಕವನ್ನು ಶೇ. 8 ಕ್ಕೆ ಇಳಿಸಲಾಗಿದ್ದು, ಸುಧಾರಣಾ ಪರಿಕ್ರಮಗಳ ಮುಂದುವರಿಕೆಯಾಗಿ ಮತ್ತು ಅನುಪಾಲನೆಗಾಗಿ, ನೋಂದಣಿ ಶುಲ್ಕವನ್ನು ಇನ್ನೂ ಶೇ. 0.5 ಕ್ಕೆ ಇಳಿಸಲಾಗುವುದು. ಈ ಪ್ರಸ್ತಾವನೆಯು ಜವಾಹರ್ ಲಾಲ್ ನೆಹರು ರಾಷ್ಟ್ರೀಯ ನಗರ ಪುನರುಜ್ಜೀವನ ಮಿಷನ್ (Jawahar Lal Nehru National Urban Renewal Mission) ಈ ಯೋಜನೆಯನುಸಾರ ಕೈಗೆತ್ತಿಕೊಳ್ಳಲಾಗುತ್ತಿರುವ ಬೃಹತ್ ನಗರ ವಲಯ ಸುಧಾರಣಾ ಪ್ಯಾಕೇಜ್‌ನಡಿ ರಾಜ್ಯವು ನೀಡಿರುವ ಬದ್ಧತೆಯನುಸಾರ ಇರುತ್ತದೆ.

248. ಬೆಂಗಳೂರು ನಗರ ಜಿಲ್ಲೆಯ ಉಪ ನೊಂದಣಿ ಕಛೇರಿಗಳಲ್ಲಿ ಅತಿ ಹೆಚ್ಚಿನ ಕೆಲಸದ ಒತ್ತಡವಿರುವ ಉಪ ನೋಂದಣಿ ಕಛೇರಿಗಳನ್ನು ವಿಭಜಿಸಿ ಹೆಚ್ಚುವರಿ ಉಪ ನೋಂದಣಿ ಕಛೇರಿಗಳನ್ನು ತೆರೆಯಲು ಉದ್ದೇಶಿಸಲಾಗಿದೆ. ಇದರಿಂದ ನೋಂದಣಿ ಸಾರ್ವಜನಿಕರಿಗೆ ಉತ್ತಮ ಮಟ್ಟದ ಸೇವೆಯು ಲಭ್ಯವಾಗುವದಲ್ಲದೆ, ನೋಂದಣಿಗೆ ಸಂಬಂಧಿಸಿದ ಕಾಯ್ದೆ ಕಾನೂನುಗಳನ್ನು ಸರಿಯಾಗಿ ಪಾಲನೆ ಮಾಡಿದಂತಾಗುವುದಲ್ಲದೇ ರಾಜ್ಯದ ರಾಜಸ್ವ ಸಂಗ್ರಹಣೆಯು ಸಹ ಉತ್ತಮಗೊಳ್ಳಲಿದೆ.

249. ಪಟ್ಟಣ ಪ್ರದೇಶ ಮತ್ತು ಅರೆಪಟ್ಟಣ ಪ್ರದೇಶಗಳಲ್ಲಿ ವಾಸ್ತವಿಕ ಸ್ಥಿರಾಸ್ತಿ ಮಾರುಕಟ್ಟೆಯನ್ನು ಗಮನದಲ್ಲಿಟ್ಟುಕೊಂಡು, ಸ್ಥಿರಾಸ್ತಿಯ ಮಾರುಕಟ್ಟೆ ಮೌಲ್ಯವನ್ನು ಪರಿಷ್ಕರಿಸಲು ಉದ್ದೇಶಿಸಲಾಗಿದೆ.

250. ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 45-ಎ ತಿದ್ದುಪಡಿಯನ್ನು ಪ್ರಸ್ತಾಪಿಸಲಾಗಿದೆ. ಆಯಾ ವಿಭಾಗದ ಪ್ರಾದೇಶಕ ಕಂದಾಯ ಆಯುಕ್ತರು ಅಪಮೌಲ್ಯ ಮೇಲ್ಮನವಿ ಅಪೀಲುಗಳನ್ನು ಅಹವಾಲು ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ ಮತ್ತು ಕಲಂ 45(ಎ) (2) ಮತ್ತು 45(ಎ) (3)ರ ಅಡಿಯಲ್ಲಿ ದಂಡನೀಯ ಉಪಬಂಧಗಳನ್ನು ತರಲು ಪ್ರಸ್ತಾಪಿಸಿದೆ. ಪ್ರಸ್ತುತ ಈ ದಂಡನೀಯ ಉಪಬಂಧಗಳು ಕಲಂ 45(ಎ) (5) ರಲ್ಲಿ ಮಾತ್ರ ಇರುತ್ತದೆ.

251. ದಸ್ತಾವೇಜುಗಳಲ್ಲಿ ನಮೂದಿಸುವ ವಿಷಯಗಳ ಕುರಿತು ಕಾನೂನು ತಿಳುವಳಿಕೆ ಅಡಿ ಮುದ್ರಾಂಕ ಶುಲ್ಕ ವಿಧಿಸುವ ದಿಶೆಯಲ್ಲಿ ಹಾಗೂ ಸರ್ಕಾರಕ್ಕೆ ಕಾನೂನು ಪ್ರಕಾರ ಸಲ್ಲಬೇಕಾದ ರಾಜಸ್ವ ಸಂಗ್ರಹಣೆಯ ಉದ್ದೇಶದಿಂದ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕೆಲವು ಅನುಚ್ಛೇದಗಳನ್ನು ತಿದ್ದುಪಡಿ ಮಾಡಲು ಉದ್ದೇಶಿಸಿರುತ್ತೇನೆ.

252. ಹಕ್ಕು ದಾಖಲೆ ನಿಕ್ಷೇಪಣಾ ಪತ್ರಗಳ ಮೇಲೆ ಮುದ್ರಾಂಕ ಶುಲ್ಕ ಆಕರಣೆಗೆ ಸಂಬಂಧಿಸಿದಂತೆ ಅನುಚ್ಛೇದವನ್ನು ಸರಿಯಾಗಿ ಅರ್ಥೈಸುವಲ್ಲಿ ಉಂಟಾಗಿದ್ದ ತಪ್ಪು ತಿಳುವಳಿಕೆ ನಿವಾರಣೆಗಾಗಿ ಹಾಗೂ ರಾಜಸ್ವ ಸೋರಿಕೆಯನ್ನು ತಡೆಗಟ್ಟುವ ಸಲುವಾಗಿ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಅನುಚ್ಛೇದ 6ಕ್ಕೆ ವಿವರಣೆ ಸೇರ್ಪಡೆ ಮಾಡಲು ಉದ್ದೇಶಿಸಿರುತ್ತೇನೆ.

253. ಸ್ವತ್ತುಗಳ ಮರು ಹಸ್ತಾಂತರ ಪತ್ರಗಳನ್ನು ರದ್ದತಿ ಪತ್ರಗಳೆಂದು ತಪ್ಪಾಗಿ ವರ್ಗೀಕರಿಸುವ ಮೂಲಕ ಸರ್ಕಾರಕ್ಕೆ ಉಂಟಾಗುತ್ತಿದ್ದ ರಾಜಸ್ವ

ಸೋರಿಕೆಯನ್ನು ತಡೆಗಟ್ಟುವ ದಿಶೆಯಲ್ಲಿ ಅನುಚ್ಛೇದ 14ನ್ನು ತಿದ್ದುಪಡಿ ಮಾಡಲು ಉದ್ದೇಶಿಸಿರುತ್ತೇನೆ.

254. ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಅನುಚ್ಛೇದ 30ರ ನ್ಯೂನ್ಯತೆಯನ್ನು ಸರಿಪಡಿಸಲು ಅನುಚ್ಛೇದ 30(ಸಿ) ಯನ್ನು ತಿದ್ದುಪಡಿ ಮಾಡಲಾಗಿದೆ ಮತ್ತು ಲೀಸ್ ಪತ್ರಗಳಲ್ಲಿ ಹಿಂತಿರುಗಿಸುವ ಮೊತ್ತವು ವಾಸ್ತವವಾಗಿ ಮುಂಗಡ ಹಣಕ್ಕೆ ಸಮಾನವಾಗುವುದರಿಂದ ಅದರ ಮೇಲೆ ಮುದ್ರಾಂಕ ಶುಲ್ಕವನ್ನು ಆಕರಣೆ ಮಾಡಲು ಪ್ರಸ್ತಾಪಿಸಿರುತ್ತೇನೆ. ಇದಕ್ಕಾಗಿ ಅನುಚ್ಛೇದ 30(ಡಿ) ಎಂಬ ಹೊಸ ಅನುಚ್ಛೇದವನ್ನು ಸೇರಿಸಲು ಉದ್ದೇಶಿಸಿರುತ್ತೇನೆ.

255. ಮೂವತ್ತು ವರ್ಷಕ್ಕಿಂತ ಹೆಚ್ಚಿನ ಅವಧಿ ಬಾಕಿ ಇರುವ ಲೀಸ್ ಹಸ್ತಾಂತರಣ ದಸ್ತಾವೇಜುಗಳಿಗೆ ಸ್ವತ್ತುಗಳ ಮಾರುಕಟ್ಟೆ ಮೌಲ್ಯದ ಕನ್ವೇಯನ್ಸ್ ದರದನ್ವಯ ಮುದ್ರಾಂಕ ಶುಲ್ಕ ವಿಧಿಸಲು ಉದ್ದೇಶಿಸಿರುತ್ತೇನೆ. ಇದಕ್ಕಾಗಿ ಅನುಚ್ಛೇದ 53ನ್ನು ತಿದ್ದುಪಡಿ ಮಾಡಲು ಉದ್ದೇಶಿಸಿರುತ್ತೇನೆ.

256. ಹೊಸಪೇಟೆ-ಕಾರವಾರ ರಸ್ತೆ, ಧಾರವಾಡ-ಅನ್‌ಮೋಡ್ ರಸ್ತೆ, ಚಿಕ್ಕನಾಯಕನಹಳ್ಳಿ-ಹಾಸನ ರಸ್ತೆಗಳಲ್ಲಿ ಕಬ್ಬಿಣದ ಅದಿರು ಸಾಗಿಸುವ ಲಾರಿಗಳು ಹೆಚ್ಚಾಗಿ ಓಡಾಡುತ್ತಿದ್ದು ರಸ್ತೆಗಳು ಹಾಳಾಗಿವೆ. ಈ ರಸ್ತೆಗಳಲ್ಲಿ ಮಿತಿಗಿಂತ ಹೆಚ್ಚಿನ ತೂಕದ ಅದಿರನ್ನು ಲಾರಿಗಳು ಸಾಗಿಸುವುದರಿಂದ ರಸ್ತೆಗಳು ಮತ್ತಷ್ಟು ಹಾಳಾಗುತ್ತಿವೆ. ಈ ರಸ್ತೆಗಳಲ್ಲಿ ಸೂಕ್ತ ಸ್ಥಳಗಳಲ್ಲಿ ಕಂಪ್ಯೂಟರೀಕೃತ ಚೆಕ್‌ಪೋಸ್ಟ್ ನಿರ್ಮಿಸಿ ಟೋಲ್ ಹಾಕಲಾಗುವುದು. ಈ ವ್ಯವಸ್ಥೆಯಿಂದ ಓವರ್‌ಲೋಡಿಂಗ್‌ನ್ನು ತಡೆದು ರಸ್ತೆಗಳನ್ನು ಸುಸ್ಥಿತಿಯಲ್ಲಿಡಬಹುದು. ಅದಿರಿನ ಸಾಗಣಿಕೆಯ ಬಗ್ಗೆ ವಿಶೇಷ ಮಾಹಿತಿ ಸಂಗ್ರಹಿಸಿ ಇಡಲು ಸಾಧ್ಯವಾಗಲಿದೆ. ಚೆಕ್‌ಪೋಸ್ಟ್‌ಗಳು ನಿರ್ಮಿಸಲು 5 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

## ಪರಿಷ್ಕೃತ ಅಂದಾಜುಗಳು 2005-2006

257. 2005-06 ರಲ್ಲಿ ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ಜಮೆಗಳನ್ನು 34592.06 ಕೋಟಿ ರೂಪಾಯಿಗಳೆಂದು ನಿರೀಕ್ಷಿಸಲಾಗಿತ್ತು. ಆದರೆ ಪರಿಷ್ಕೃತ ಅಂದಾಜಿನ ರೀತ್ಯಾ ಒಟ್ಟು ಜಮೆಗಳು 35123.98 ಕೋಟಿ ರೂ.ಗಳಾಗಿದೆ. ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು 34615.15 ಕೋಟಿ ರೂ.ಗಳಾಗಿತ್ತು. ಈಗ ಪರಿಷ್ಕೃತ ಅಂದಾಜಿನ ರೀತ್ಯಾ ಒಟ್ಟು ವೆಚ್ಚವು 35094.98 ಕೋಟಿ ರೂ.ಗಳಾಗಿದೆ. ಸಾರ್ವಜನಿಕ ವೆಚ್ಚದ ನಿವ್ವಳ ಲೆಕ್ಕ ತೆಗೆದುಕೊಂಡ ನಂತರ ಈ ವರ್ಷದ ಅಂತಿಮ ಕೊರತೆಯು 51.57 ಕೋಟಿ ರೂ.ಗಳಾಗುವ ನಿರೀಕ್ಷೆ ಇದೆ. 2005-06ರ ಮುಂಗಡ ಪತ್ರವನ್ನು ಮಂಡಿಸುವಾಗ ಈ ಕೊರತೆಯನ್ನು 49.57 ಕೋಟಿ ರೂ.ಗಳೆಂದು ತೋರಿಸಲಾಗಿತ್ತು.

## ಆಯವ್ಯಯ ಅಂದಾಜುಗಳು 2006-07

258. 2006-07 ನೇ ಸಾಲಿನ ಒಟ್ಟು ಜಮೆ 41878.13 ಕೋಟಿ ರೂ.ಗಳಾಗುವ ನಿರೀಕ್ಷೆ ಇದೆ. ಇದರಲ್ಲಿ 35875.08 ಕೋಟಿ ರೂ.ಗಳ ರಾಜಸ್ವ ಜಮೆ ಮತ್ತು 6003.05 ಕೋಟಿ ರೂ.ಗಳ ಬಂಡವಾಳ ಜಮೆ ಸೇರಿರುತ್ತದೆ. ಒಟ್ಟು ವೆಚ್ಚವನ್ನು 41850.66 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 34340.54 ಕೋಟಿ ರೂ.ಗಳು ರಾಜಸ್ವ ವೆಚ್ಚವಾಗಿದ್ದು 7510.12 ಕೋಟಿ ರೂ.ಗಳು ಬಂಡವಾಳ ವೆಚ್ಚವಾಗಿವೆ.

259. ಸರ್ಕಾರವು ತೆರಿಗೆ ರಾಜಸ್ವದ ಮೂಲಕ 22533.79 ಕೋಟಿ ರೂ.ಗಳನ್ನು ತೆರಿಗೆಯೇತರ ರಾಜಸ್ವದ ಮೂಲಕ 4088.43 ಕೋಟಿ ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನು ಇಟ್ಟುಕೊಂಡಿದೆ. ಇದಲ್ಲದೆ ಸಣ್ಣ ಉಳಿತಾಯ ಮತ್ತು ಇತರೆ ಒಪ್ಪಂದ ಸಾಲಗಳಿಂದ 1200.00 ಕೋಟಿ ರೂ.ಗಳನ್ನು ಮತ್ತು ಕೇಂದ್ರ ಸರ್ಕಾರದ ಒಟ್ಟು ಸಾಲಗಳಿಂದ 1179.41

ಕೋಟಿ ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನು ಸರ್ಕಾರ ಇಟ್ಟುಕೊಂಡಿದೆ.

260. 2005-06 ರ ಪರಿಷ್ಕೃತ ಅಂದಾಜು ರೀತ್ಯಾ ಕ್ರೋಢೀಕೃತ ರಾಜಸ್ವ ಉಳಿಕೆಯು ಮತ್ತು ಕ್ರೋಢೀಕೃತ ವಿತ್ತೀಯ ಕೊರತೆಯು ಕ್ರಮವಾಗಿ ರೂ.1186.79 ಮತ್ತು ರೂ.4764.09 ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದ್ದು ಇದು ಜಿಎಸ್‌ಡಿಪಿಯ ಶೇಕಡ 0.71 ಮತ್ತು ಶೇಕಡ 2.85 ಆಗಿರುತ್ತದೆ. 2006-07ರ ಕ್ರೋಢೀಕೃತ ರಾಜಸ್ವ ಉಳಿಕೆ ಮತ್ತು ಕ್ರೋಢೀಕೃತ ವಿತ್ತೀಯ ಕೊರತೆಯನ್ನು ಕ್ರಮವಾಗಿ 1534.54 ಕೋಟಿ ರೂಪಾಯಿಗಳೆಂದು ಮತ್ತು 5210.56 ಕೋಟಿ ರೂಪಾಯಿಗಳೆಂದು ಅಂದಾಜಿಸಲಾಗಿದ್ದು ಇದು ಅನುಕ್ರಮವಾಗಿ ಜಿಎಸ್‌ಡಿಪಿಯ ಶೇಕಡ 0.83 ಮತ್ತು ಶೇಕಡ 2.82 ಎಂದು ಅಂದಾಜಿಸಲಾಗಿದೆ. ಇದು 2002ನೇ ಇಸವಿಯ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ರೀತ್ಯಾ ಇದೆ.

261. ಮುಂಗಡ ಪತ್ರದಲ್ಲಿ ಮಂಡಿಸಿರುವ ಕಾರ್ಯಕ್ರಮಗಳ ಅನುಷ್ಠಾನದ ಫಲಶೃತಿ ಸದನಕ್ಕೆ ಅರಿವಾಗಬೇಕೆಂಬುದು ನನ್ನ ಆಶಯ. ಇದರಿಂದ ಸಾರ್ವಜನಿಕ ಸಂಪನ್ಮೂಲಗಳ ಸದ್ಬಳಕೆಗೆ ನೆಲೆ ಸಿಗುತ್ತದೆ; ದುರ್ಬಳಕೆಗಳಿಗೆ ಕಡಿವಾಣ ಬೀಳುತ್ತದೆ ಎನ್ನುವ ನಂಬಿಕೆ ನನ್ನದು.

262. ಈ ಪ್ರಕ್ರಿಯೆಯನ್ನು ಸಾಧ್ಯವಾಗಿಸಲು ನೀರಾವರಿ, ಮೂಲ ಸೌಕರ್ಯ, ಆರೋಗ್ಯ ಶಿಕ್ಷಣ ಇತ್ಯಾದಿ ವಲಯಗಳಲ್ಲಿ ಪರಿಣಿತರ ತಂಡಗಳನ್ನು ರಚಿಸಲು ಮತ್ತು ಸಾರ್ವಜನಿಕ ಚರ್ಚೆಗೆ ಅನುವಾಗುವಂತೆ ವರದಿಗಳನ್ನು ಮಂಡಿಸಲು ನಾನು ಉದ್ದೇಶಿಸಿದ್ದೇನೆ.

263. ಸಮಗ್ರ ಅಭಿವೃದ್ಧಿ ಸಾಧಿಸಿ, ಸಮೃದ್ಧ ಹಾಗೂ ಸಶಕ್ತ ಕರ್ನಾಟಕ ನಿರ್ಮಾಣದ ಪ್ರಕ್ರಿಯಲ್ಲಿ ನಾಡಿನ ಸಮಸ್ತ ಸಮುದಾಯಗಳನ್ನು

ಪಾಲುದಾರರನ್ನಾಗಿ ಮಾಡಿಕೊಳ್ಳುವುದು ನಮ್ಮ ಸರ್ಕಾರದ ಆಶಯವಾಗಿದೆ. ನಾವು ಎಲ್ಲ ವರ್ಗಗಳ ಹಿತರಕ್ಷಣೆಗೆ ಬದ್ಧವಾಗಿದ್ದೇವೆ. ಬಸವಣ್ಣನ ಆಶಯದಂತೆ "ಇವನಾರವ, ಇವನಾರವ ಎಂದೆಣಿಸದೆ, ಇವ ನಮ್ಮವ ಇವ ನಮ್ಮವ" ಎಂದು ಎಲ್ಲರ ಪ್ರಗತಿಗೆ ಸಮಾನ ಅವಕಾಶ ಕಲ್ಪಿಸುತ್ತೇನೆ.

264. ಮಾನ್ಯರೇ, ಈ ಆಯವ್ಯಯ ಪತ್ರದ ಬಗ್ಗೆ ಅಂತಿಮವಾಗಿ ಹೇಳುವುದಾದರೆ,

- ಇದು ತೆರಿಗೆ ಹೊರೆಯಿಲ್ಲದ ಹಗುರವಾದ ಆಯವ್ಯಯ ಪತ್ರ.
- ಸಂಪನ್ಮೂಲಗಳಿಂದ ತುಂಬಿ ತುಳುಕುತ್ತಿರುವ ಮುಂಗಡ ಪತ್ರ.
- ಮಹಿಳೆಯರ ಬದುಕು ಬವಣೆಗಳಿಗೆ ಆಸರೆಯಾಗಿರುವ ಆಯವ್ಯಯ ಪತ್ರ.
- ರೈತರ ನೋವಿಗೆ ಎದೆ ತುಂಬಿ ಮಿಡಿಯುತ್ತಿರುವ ಮುಂಗಡ ಪತ್ರ.
- ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರ ದುಗುಡ ದುಮ್ಮಾನಗಳಿಗೆ ಸ್ಪಂದಿಸುತ್ತಿರುವ ಆಯವ್ಯಯ ಪತ್ರ.
- ಕನ್ನಡ ನಾಡು, ನುಡಿ, ಕಲೆ, ಸಂಸ್ಕೃತಿಗೆ ಬೆಳಕಾಗಿರುವ ಮುಂಗಡ ಪತ್ರ.

265. ನನಗೆ ಇದಕ್ಕಿಂತ ಬೇರೆ ಭಾಗ್ಯ ಬೇಕಿಲ್ಲ. ನಾಡಿನ ಸಮಸ್ತ ಜನಸಮುದಾಯದ ಆಶಯಗಳಿಗೆ ಸ್ಪಂದಿಸಿರುವ ತೃಪ್ತಿ ನನಗಿದೆ. ರಾಜ್ಯದ ವಿತ್ತೀಯ ಶಿಸ್ತಿನ ಹಾದಿಯಲ್ಲಿ ಮುನ್ನಡೆದ ಹೆಮ್ಮೆಯಿದೆ.

266. "ಶ್ರೀವ್ಯಯ ನಾಮ ಸಂವತ್ಸರದ" ಹೊಸ್ತಿಲಿನಲ್ಲಿ ನಿಂತು ನಾಡಿನ ಸಮಸ್ತ ಜನರಿಗೆ ಹಾಗೂ ಸದನದ ಗೌರವಾನ್ವಿತ ಸದಸ್ಯರಿಗೆ ನಾನು ಯುಗಾದಿ ಹಬ್ಬದ ಶುಭಾಶಯಗಳನ್ನು ಸಲ್ಲಿಸುತ್ತೇನೆ.

267. ನಾನು ಈಗ 2006-07 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸದನದ ಪರಿಶೀಲನೆಗೆ ಮಂಡಿಸುತ್ತಿದ್ದೇನೆ. ಮುಂಗಡಪತ್ರದ ಬಗ್ಗೆ ಸದನದಲ್ಲಿ ಸವಿವರವಾಗಿ ಚರ್ಚಿಸಲಾಗುವುದು. ಚರ್ಚೆಯ ನಂತರ ಸರ್ಕಾರವು ಪೂರ್ಣ ಮುಂಗಡಪತ್ರಕ್ಕೆ ಲೇಖಾನುದಾನವನ್ನು ಕೋರುತ್ತದೆ. ಈಗ ನಾನು 2006 ರ ಜುಲೈ 31 ಕ್ಕೆ ಅಂತ್ಯಗೊಳ್ಳುವ ನಾಲ್ಕು ತಿಂಗಳುಗಳಿಗೆ ಲೇಖಾನುದಾನವನ್ನು ಕೋರುತ್ತಿದ್ದೇನೆ.

*ಜೈ ಹಿಂದ್ - ಜೈ ಕರ್ನಾಟಕ*

# ಬಜೆಟ್ ವಿಹಂಗಮ ನೋಟ

# ಬಜೆಟ್ ವಿಹಂಗಮ

| ಕ್ರ. ಸಂ. | ಬಾಬ್ತು | ಬಜೆಟ್ ಅಂದಾಜು 2005-06 | ಪರಿಷ್ಕೃತ ಅಂದಾಜು 2005-06 | ಬಜೆಟ್ ಅಂದಾಜು 2006-07 |
|---|---|---|---|---|
| | ಪ್ರಾರಂಭ ಶಿಲ್ಕು | 72.66 | 22.57 | 51.57 |
| | ಎ. ರಾಜಸ್ವ ಲೆಕ್ಕ | | | |
| **I.** | **ಜಮೆ :** | | | |
| | ರಾಜ್ಯ ತೆರಿಗೆ | 18680.16 | 19504.80 | 22533.79 |
| | ಕೇಂದ್ರ ತೆರಿಗೆಯಲ್ಲಿ ಪಾಲು | 3760.40 | 3922.65 | 4608.90 |
| | ಕೇಂದ್ರ ಸರ್ಕಾರದ ಅನುದಾನಗಳು | 2687.61 | 2620.19 | 4643.96 |
| | ತೆರಿಗೆಯೇತರ ರಾಜಸ್ವ | 4090.30 | 3637.19 | 4088.43 |
| | **ಒಟ್ಟು-ಎ. I** | **29218.47** | **29684.83** | **35875.08** |
| **II.** | **ವೆಚ್ಚ :** | | | |
| | ಸಾಮಾಜಿಕ ಸೇವೆ | 8566.71 | 9109.14 | 11244.66 |
| | ಆರ್ಥಿಕ ಸೇವೆ | 7020.72 | 7317.84 | 8578.22 |
| | ಸಾಮಾನ್ಯ ಸೇವೆ | 11616.58 | 10911.05 | 12987.48 |
| | ಸಹಾಯಾನುದಾನ ಮತ್ತು ಅಂಶದಾನ | 1160.00 | 1160.01 | 1530.18 |
| | **ಒಟ್ಟು-ಎ. II** | **28364.01** | **28498.04** | **34340.54** |
| ಎ. | ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ | 854.46 | 1186.79 | 1534.54 |

# ನೋಟ

*(ಕೋಟಿ ರೂಪಾಯಿಗಳಲ್ಲಿ)*

| ಕ್ರ. ಸಂ. | ಬಾಬ್ತು | ಬಜೆಟ್ ಅಂದಾಜು 2005-06 | ಪರಿಷ್ಕೃತ ಅಂದಾಜು 2005-06 | ಬಜೆಟ್ ಅಂದಾಜು 2006-07 |
|---|---|---|---|---|
| | ಬಿ. ಬಂಡವಾಳ ಲೆಕ್ಕ | | | |
| I. | ಜಮೆ : | | | |
| | ಭಾರತ ಸರ್ಕಾರದಿಂದ ಸಾಲ | 2191.12 | 1991.83 | 1179.41 |
| | ಬಹಿರಂಗ ಮಾರುಕಟ್ಟೆ ಸಾಲ (ನಿವ್ವಳ) | 1269.00 | 171.61 | -233.98 |
| | ಎಲ್ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ | 1015.00 | 4427.25 | 1200.00 |
| | ಸಾಲಗಳು ಮತ್ತು ಮುಂಗಡಗಳ ವಸೂಲಿ | 29.91 | 29.91 | 44.61 |
| | ಸಾರ್ವಜನಿಕ ಲೆಕ್ಕ (ನಿವ್ವಳ) ಇತರೆ | 868.56 | -1181.45 | 3813.01 |
| | **ಒಟ್ಟು-ಬಿ. I** | **5373.59** | **5439.15** | **6003.05** |
| II. | ಬಟವಾಡೆ : | | | |
| | ಬಂಡವಾಳ ವೆಚ್ಚ (ನಿವ್ವಳ) | 5364.54 | 5647.05 | 6553.52 |
| | ಕೇಂದ್ರ ಸಾಲಗಳ ಮರುಸಂದಾಯ | 563.42 | 417.54 | 464.05 |
| | ಎಲ್ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ | 88.89 | 198.61 | 256.36 |
| | ಸಾಲಗಳ ಮತ್ತು ಮುಂಗಡಗಳ ಬಟವಾಡೆ | 234.29 | 333.74 | 236.19 |
| | **ಒಟ್ಟು-ಬಿ. II** | **6251.14** | **6596.94** | **7510.12** |
| ಬಿ. | ಬಂಡವಾಳ ಲೆಕ್ಕ ಹೆಚ್ಚಳ / ಕೊರತೆ | **-877.55** | **-1157.79** | **-1507.07** |
| ಸಿ. | ವರ್ಷದ ಒಟ್ಟು ಹೆಚ್ಚಳ / ಕೊರತೆ | **-23.09** | **29.00** | **27.47** |
| ಡಿ. | ಮುಕ್ತಾಯ ಶಿಲ್ಕು ಕಳೆದಾಗ | **49.57** | **51.57** | **79.04** |

## ಅನುಬಂಧ - I

(ಪ್ಯಾರಾ 205)

## 2006-2007 ನೇ ಸಾಲಿನ ವಿಭಾಗವಾರು ರಾಜ್ಯ ಯೋಜನಾ ಹಂಚಿಕೆ

| | ವಿಭಾಗ | ಕೋಟಿ ರೂ.ಗಳಲ್ಲಿ | ಶೇಕಡಾ ಪ್ರಮಾಣ |
|---|---|---|---|
| **ಎ.** | **ಆರ್ಥಿಕ ಸೇವೆಗಳು** | | |
| | ಕೃಷಿ ಮತ್ತು ಸಂಬಂಧಪಟ್ಟ ಸೇವೆ | 936.22 | 5.79 |
| | ಗ್ರಾಮೀಣ ಅಭಿವೃದ್ಧಿ | 713.47 | 4.41 |
| | ವಿಶೇಷ ಪ್ರದೇಶ ಯೋಜನೆ | 143.50 | 0.89 |
| | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 4280.58 | 26.48 |
| | ಶಕ್ತಿ ಮೂಲಗಳು | 1711.35 | 10.59 |
| | ಕೈಗಾರಿಕೆ ಮತ್ತು ಖನಿಜಗಳು | 207.07 | 1.28 |
| | ಸಾರಿಗೆ | 1966.34 | 12.16 |
| | ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | 23.13 | 0.14 |
| | ಸಾಮಾನ್ಯ ಆರ್ಥಿಕ ಸೇವೆಗಳು | 321.93 | 1.99 |
| **ಬಿ.** | **ಸಮಾಜ ಸೇವೆಗಳು** | | |
| | ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ | 1283.62 | 7.94 |
| | ಆರೋಗ್ಯ | 395.56 | 2.45 |
| | ನೀರು ಸರಬರಾಜು ಮತ್ತು ನೈರ್ಮಲ್ಯ | 698.45 | 4.32 |
| | ವಸತಿ ಮತ್ತು ನಗರಾಭಿವೃದ್ಧಿ | 2134.65 | 13.20 |
| | ವಾರ್ತಾ ಮತ್ತು ಪ್ರಚಾರ | 5.78 | 0.04 |
| | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ | | |
| | ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ | 1063.97 | 6.58 |
| | ಕಾರ್ಮಿಕ ಮತ್ತು ಉದ್ಯೋಗ | 45.46 | 0.28 |
| **ಸಿ.** | **ಸಾಮಾನ್ಯ ಸೇವೆಗಳು** | 234.92 | 1.45 |
| | **ಒಟ್ಟು** | **16166.00** | **100.00** |

## ಅನುಬಂಧ-2

## (ಪ್ಯಾರಾ 213)

## ಪ್ರಸ್ತಾವಿತ ಸುಧಾರಣಾ ಕ್ರಮಗಳು

| ಕ್ರಮ ಸಂಖ್ಯೆ | ಸುಧಾರಣಾ ಕ್ರಮದ ವಿವರ |
|---|---|
| 1. | ಕಾಮಗಾರಿ ಗುತ್ತಿಗೆಗಳ ಅನುಸೂಚಿಯ ಸೇರಿಕೆ |
| 2. | ರೈಲು ಮೂಲಕ ಸಾಗಣೆಯಾಗುವ ಸರಕುಗಳ ತಪಾಸಣೆಗೆ ಅವಕಾಶ |
| 3. | ಜಂಟಿ ಆಯುಕ್ತರಿಗೆ ಸ್ವಯಂ ಪರಿಷ್ಕರಿಣಾ ಅಧಿಕಾರ ನೀಡಿಕೆ |
| 4. | ಕೈಗಾರಿಕಾ ಘಟಕಗಳಲ್ಲಿ ನಡೆಸುತ್ತಿರುವ ಕ್ಯಾಂಟೀನ್‌ಗಳ ಬಗ್ಗೆ ತೆರಿಗೆ ಕಡಿತ ಮಾಡುವ ಅವಕಾಶ |
| 5. | ದಂಡಗಳಲ್ಲಿ ಸೂಕ್ತ ಪರಿಷ್ಕರಣೆ |
| 6. | ಶೇ.4ಕ್ಕೆ ಒಳಗಾಗುವ ಬಟ್ಟೆಯಿಂದ ಮಾಡಿದ ಸರಕುಗಳನ್ನು ಅಧಿಸೂಚಿಸಲು ಸರ್ಕಾರಕ್ಕೆ ಅಧಿಕಾರ ನೀಡಿಕೆ |
| 7. | ತೆರಿಗೆ ರಾಜಿ ಸೌಲಭ್ಯವನ್ನು ಅಧಿಸೂಚನೆ ಮೂಲಕ ನೀಡಲು ಸರ್ಕಾರಕ್ಕೆ ಅಧಿಕಾರ ನೀಡಿಕೆ |
| 8. | ನಾಫ್ತಾ ಮೇಲೆ ಹೂಡುವಳಿ ತೆರಿಗೆ ರಿಬೇಟ್ ರದ್ದು |
| 9. | ಮಾರಾಟ ಬಿಲ್ಲುಗಳು ಹಾಗೂ ಡಿಸ್ಕೌಂಟ್ ನೀಡುವ ಮತ್ತು ಸರಕು ವಾಪಸಾತಿಯ ಬಗ್ಗೆಯ ದಾಖಲೆಗಳ ಮತ್ತು ಪ್ರಕರಣಗಳ ಪರಿಷ್ಕರಣೆ |
| 10. | ರಾಜಿ ಸೌಲಭ್ಯ ಪಡೆಯುವ ವ್ಯಾಪಾರಿಗಳ ಅನೊಂದಾಯಿತ ವ್ಯಕ್ತಿಗಳಿಂದ ಖರೀದಿ ಮೇಲಿನ ತೆರಿಗೆ ಭಾಧ್ಯತೆ ಬಗ್ಗೆ ಸ್ಪಷ್ಟೀಕರಣ |
| 11. | ವ್ಯಾಪಾರಿಗಳಿಗೆ ತೆರಿಗೆ ಬಾಕಿ ಇಲ್ಲದ ಬಗ್ಗೆ ದೃಢೀಕರಣ ಪತ್ರ ನೀಡಲು ಅವಕಾಶ |
| 12. | ಮೇಲ್ಮನವಿ ನ್ಯಾಯಾಧಿಕರಣದ ಮುಂದೆ ಮೇಲ್ಮನವಿಗಳನ್ನು ಸಲ್ಲಿಸಲು ಅಧಿಕಾರಿಗಳಿಗೆ ಅಧಿಕಾರ ನೀಡಲು ಆಯುಕ್ತರಿಗೆ ಅಧಿಕಾರ ನೀಡಿಕೆ (ಎಲ್ಲಾ ವಾಣಿಜ್ಯ ತೆರಿಗೆ ಕಾಯ್ದೆಗಳಡಿಯಲ್ಲಿ) |
| 13. | ವ್ಯಾಪಾರಿಗಳು ವಾರ್ಷಿಕ ಪಟ್ಟಿ ನೀಡುವಂತೆ ಮಾಡಲು ಅವಕಾಶ |
| 14. | ಗೊಂದಲ ನಿವಾರಿಸಲು ಕೆಲವು ನಮೂದುಗಳ ಪರಿಷ್ಕರಣೆ |

# ಅನುಬಂಧ - III
## (ಪ್ಯಾರಾ 236)
## ಪ್ರಸ್ತುತ ಹೆಚ್ಚುವರಿ ಅಬಕಾರಿ ಶುಲ್ಕ / ಹೆಚ್ಚುವರಿ ಕೌಂಟರ್ ವೇಲಿಂಗ್ ಶುಲ್ಕ
## (ಬ.ಲೀ.=ಬಲ್ಕ್ ಲೀಟರ್)
## (ಯು.ಪಿ.=ಅಂಡರ್ ಪ್ರೂಫ್)

| ಕ್ರಮ ಸಂಖ್ಯೆ | ವಸ್ತುವಿನ ಹೆಸರು | 8.64/9/12 ಬಲ್ಕ್ ಲೀಟರ್ ಮದ್ಯ ಹೊಂದಿರುವ ಪ್ರತಿ ಪೆಟ್ಟಿಗೆಗೆ ಘೋಷಿತ ದರಗಳ ಶ್ರೇಣಿ | | ಹೆಚ್ಚುವರಿ ಅಬಕಾರಿ ಶುಲ್ಕ/ಹೆಚ್ಚುವರಿ ಕೌಂಟರ್ ವೇಲಿಂಗ್ ಶುಲ್ಕದ ದರ, ಪ್ರತಿ 25* ಯು.ಪಿ. ಸಾಮರ್ಥ್ಯದ ಬಲ್ಕ್ ಲೀಟರ್‌ಗೆ | |
|---|---|---|---|---|---|
| | | ಇಂದ | ವರೆಗೆ | | |
| I | ಬಿಯರ್, ವೈನ್, ಟಾಡಿ ಮತ್ತು ಫೆನ್ನಿ ಇವುಗಳನ್ನು ಹೊರತು ಪಡಿಸಿ ಉಳಿದ ಬ್ರಾಂದಿ, ವಿಸ್ಕಿ, ಜಿನ್, ರಮ್ ಮತ್ತು ಅಂತಹ ಇತರ ಮದ್ಯಗಳು | | | (1) ಕರ್ನಾಟಕದಲ್ಲಿ ಉತ್ಪಾದನೆ ಯಾಗಿ, ಮಿಲಿಟರಿ ಕ್ಯಾಂಟೀನ್ ಸನ್ನದು, ಮಿಲಿಟರಿ ಕ್ಯಾಂಟೀನ್ ಸ್ಟೋರ್ಸ್ ಬಾಂಡಡ್ ವೇರ್‌ಹೌಸ್ ಸನ್ನದು ಅಥವಾ ಬಾರ್ಡರ್ ಸೆಕ್ಯುರಿಟಿ ಫೋರ್ಸ್ ಅಥವಾ ಪ್ಯಾರಾ ಮಿಲಿಟರಿ ಫೋರ್ಸಸ್ ಸನ್ನದು ಹೊಂದಿರುವ ಸನ್ನದುದಾರರಿಗೆ ವಿತರಿಸಿದ ಮದ್ಯವನ್ನು ಹೊರತುಪಡಿಸಿ, ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯದ ಮಾರಾಟ) ನಿಯಮ, 1968 | (1) ಕರ್ನಾಟಕದಲ್ಲಿ ಉತ್ಪಾದನೆಯಾಗಿ - (i) ಮಿಲಿಟರಿ ಕ್ಯಾಂಟೀನ್ ಸನ್ನದು, ಮಿಲಿಟರಿ ಸ್ಟೋರ್ಸ್ ಬಾಂಡೆಡ್ ವೇರ್‌ಹೌಸ್ ಸನ್ನದು ಅಥವಾ ಬಾರ್ಡರ್ ಸೆಕ್ಯುರಿಟಿ ಫೋರ್ಸ್ ಅಥವಾ ಪ್ಯಾರಾ-ಮಿಲಿಟರಿ ಫೋರ್ಸಸ್ ಸನ್ನದು ಹೊಂದಿರುವ ಸನ್ನದುದಾರರಿಗೆ ವಿರತಣೆಯಾದ ಸಂದರ್ಭದಲ್ಲಿ; ಅಥವಾ |

| ಕ್ರಮ ಸಂಖ್ಯೆ | ವಸ್ತುವಿನ ಹೆಸರು | 8.64/9/12 ಬಲ್ಕ್ ಲೀಟರ್ ಮದ್ಯ ಹೊಂದಿರುವ ಪ್ರತಿ ಪೆಟ್ಟಿಗೆಗೆ ಘೋಷಿತ ದರಗಳ ಶ್ರೇಣಿ | | ಹೆಚ್ಚುವರಿ ಅಬಕಾರಿ ಶುಲ್ಕ/ಹೆಚ್ಚುವರಿ ಕೌಂಟರ್ ವೇಲಿಂಗ್ ಶುಲ್ಕದ ದರ, ಪ್ರತಿ 25* ಯು.ಪಿ. ಸಾಮರ್ಥ್ಯದ ಬಲ್ಕ್ ಲೀಟರ್‌ಗೆ | |
|---|---|---|---|---|---|
| | | | | ಅಡಿಯಲ್ಲಿ, ಕರ್ನಾಟಕ ರಾಜ್ಯದಲ್ಲಿ ಮಾರಾಟದ ಸಲುವಾಗಿ ಡಿಸ್ಟ್ರಿಬ್ಯೂಟರ್ ಸನ್ನದುದಾರರಿಗೆ ವಿತರಣೆಯಾದ ಸಂದರ್ಭದಲ್ಲಿ;<br>ಅಥವಾ<br>(2) ಭಾರತದ ಇತರ ರಾಜ್ಯಗಳಲ್ಲಿ ಉತ್ಪಾದನೆಯಾಗಿ ಡಿಸ್ಟ್ರಿಬ್ಯೂಟರ್ ಸನ್ನದುದಾರನಿಂದ ಕರ್ನಾಟಕಕ್ಕೆ ಆಮದು ಮಾಡಿಕೊಂಡ ಸಂದರ್ಭದಲ್ಲಿ | (ii) ಭಾರತದ ಹೊರರಾಜ್ಯಗಳಲ್ಲಿರುವ ಸನ್ನದುದಾರರಿಗೆ ಮಾರಾಟ ಅಥವಾ ಸರಕು ಹಸ್ತಾಂತರ ರೂಪದಲ್ಲಿ ರಫ್ತು ಮಾಡಲ್ಪಟ್ಟ ಸಂದರ್ಭದಲ್ಲಿ;<br>ಅಥವಾ<br>(2) ಭಾರತದ ಹೊರರಾಜ್ಯಗಳಲ್ಲಿ ಉತ್ಪಾದನೆಯಾಗಿ ಮತ್ತು ಮಿಲಿಟರಿ ಕ್ಯಾಂಟೀನ್ ಸ್ಟೋರ್ಸ್ ಬಾಂಡೆಡ್ ವೇರ್‌ಹೌಸ್ ಸನ್ನದು ಹೊಂದಿರುವ ಸನ್ನದುದಾರರ ಮುಖಾಂತರ ಕರ್ನಾಟಕಕ್ಕೆ ಆಮದಾದ ಸಂದರ್ಭದಲ್ಲಿ |
| | | ರೂ.ಪೈ. | ರೂ.ಪೈ. | ರೂ.ಪೈ. | ರೂ.ಪೈ. |
| **ಪ್ರಸ್ತುತ** | | | | | |
| 01 | | 250-00 | 399-00 | 45-00 | 0-85 |
| 02 | | 400-00 | 449-00 | 65-00 | 1-05 |

| ಕ್ರಮ ಸಂಖ್ಯೆ | ವಸ್ತುವಿನ ಹೆಸರು | 8.64/9/12 ಬಲ್ಕ್ ಲೀಟರ್ ಮದ್ಯ ಹೊಂದಿರುವ ಪ್ರತಿ ಪೆಟ್ಟಿಗೆಗೆ ಘೋಷಿತ ದರಗಳ ಶ್ರೇಣಿ | | ಹೆಚ್ಚುವರಿ ಅಬಕಾರಿ ಶುಲ್ಕ/ಹೆಚ್ಚುವರಿ ಕೌಂಟರ್ ವೇಲಿಂಗ್ ಶುಲ್ಕದ ದರ, ಪ್ರತಿ 25* ಯು.ಪಿ. ಸಾಮರ್ಥ್ಯದ ಬಲ್ಕ್ ಲೀಟರ್‌ಗೆ | |
|---|---|---|---|---|---|
| 03 | | 450-00 | 649-00 | 75-00 | 1-50 |
| 04 | | 650-00 | 1199-00 | 90-00 | 2-20 |
| 05 | | 1200-00 | ಮೇಲ್ಪಟ್ಟು | 140-00 | 2-75 |
| **ಪ್ರಸ್ತಾವಿತ** | | | | | |
| 01 | | 250-00 | 299-00 | 40-00 | 1-00 |
| 02 | | 300-00 | 349-00 | 52-00 | 1-25 |
| 03 | | 350-00 | 449-00 | 85-00 | 1-75 |
| 04 | | 450-00 | 649-00 | 105-00 | 2-25 |
| 05 | | 650-00 | 849-00 | 120-00 | 2-50 |
| 06 | | 850-00 | 1049-00 | 135-00 | 2-75 |
| 07 | | 1050-00 | 1249-00 | 150-00 | 3-00 |
| 08 | | 1250-00 | 2049-00 | 180-00 | 3-25 |
| 09 | | 2050-00 | ಮೇಲ್ಪಟ್ಟು | ಬಲ್ಕ್ ಲೀಟರ್‌ಗೆ 225-00 ರೂ.ಗಳು ಅಥವಾ ಘೋಷಿತ ಬೆಲೆಯ ಶೇಕಡ 3 ರಷ್ಟು ಇವುಗಳಲ್ಲಿ ಯಾವುದು ಹೆಚ್ಚೋ ಅದು | 3-50 |

| ಕ್ರಮ ಸಂಖ್ಯೆ | ವಸ್ತುವಿನ ಹೆಸರು | 7.8/7.92/12 ಬಲ್ಕ್ ಲೀಟರ್ ಬೀರ್ ಹೊಂದಿರುವ ಪ್ರತಿ ಪೆಟ್ಟಿಗೆಗೆ ಘೋಷಿತ ದರಗಳ ಶ್ರೇಣಿ | | ಹೆಚ್ಚುವರಿ ಅಬಕಾರಿ ಶುಲ್ಕ/ಹೆಚ್ಚುವರಿ ಕೌಂಟರ್ ವೇಲಿಂಗ್ ಶುಲ್ಕದ ದರ, ಬಲ್ಕ್ ಲೀಟರ್‌ಗೆ | |
|---|---|---|---|---|---|
| II | ಬೀರ್ (ಸೀಸೆಯಲ್ಲಿ) | ಇಂದ | ವರೆಗೆ | (1) ಕರ್ನಾಟಕದಲ್ಲಿ ಉತ್ಪಾದನೆಯಾಗಿ, ಮಿಲಿಟರಿ ಕ್ಯಾಂಟೀನ್ ಸನ್ನದು, ಮಿಲಿಟರಿ ಕ್ಯಾಂಟೀನ್ ಸ್ಟೋರ್ಸ್ ಬಾಂಡೆಡ್ ವೇರ್‌ಹೌಸ್ ಸನ್ನದು ಅಥವಾ ಬಾರ್ಡರ್ ಸೆಕ್ಯುರಿಟಿ ಫೋರ್ಸ್ ಅಥವಾ ಪ್ಯಾರಾ ಮಿಲಿಟರಿ ಫೋರ್ಸಸ್ ಸನ್ನದು ಹೊಂದಿರುವ ಸನ್ನದುದಾರರಿಗೆ ವಿತರಿಸಿದ ಬೀರನ್ನು ಹೊರತುಪಡಿಸಿ, ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯದ ಮಾರಾಟ) ನಿಯಮ, 1968 ಅಡಿಯಲ್ಲಿ, ಕರ್ನಾಟಕ ರಾಜ್ಯದಲ್ಲಿ ಮಾರಾಟದ ಸಲುವಾಗಿ ಡಿಸ್ಟ್ರಿಬ್ಯೂಟರ್ ಸನ್ನದುದಾರರಿಗೆ ವಿತರಣೆಯಾದ ಸಂದರ್ಭದಲ್ಲಿ; | (1) ಕರ್ನಾಟಕದಲ್ಲಿ ಉತ್ಪಾದನೆಯಾಗಿ -<br>(i) ಮಿಲಿಟರಿ ಕ್ಯಾಂಟೀನ್ ಸನ್ನದು, ಮಿಲಿಟರಿ ಸ್ಟೋರ್ಸ್ ಬಾಂಡೆಡ್ ವೇರ್‌ಹೌಸ್ ಸನ್ನದು ಅಥವಾ ಬಾರ್ಡರ್ ಸೆಕ್ಯುರಿಟಿ ಫೋರ್ಸ್ ಅಥವಾ ಪ್ಯಾರಾ-ಮಿಲಿಟರಿ ಫೋರ್ಸಸ್ ಸನ್ನದು ಹೊಂದಿರುವ ಸನ್ನದುದಾರರಿಗೆ ವಿರತಣೆಯಾದ ಸಂದರ್ಭದಲ್ಲಿ;<br>ಅಥವಾ<br>(ii) ಭಾರತದ ಹೊರರಾಜ್ಯಗಳಲ್ಲಿರುವ ಸನ್ನದುದಾರರಿಗೆ ಮಾರಾಟ ಅಥವಾ ಸರಕು ಹಸ್ತಾಂತರ ರೂಪದಲ್ಲಿ ರಫ್ತು ಮಾಡಲ್ಪಟ್ಟ ಸಂದರ್ಭದಲ್ಲಿ; |

| ಕ್ರಮ ಸಂಖ್ಯೆ | ವಸ್ತುವಿನ ಹೆಸರು | 7.8/7.92/12 ಬಲ್ಕ್ ಲೀಟರ್ ಬೀರ್ ಹೊಂದಿರುವ ಪ್ರತಿ ಪೆಟ್ಟಿಗೆಗೆ ಘೋಷಿತ ದರಗಳ ಶ್ರೇಣಿ | | ಹೆಚ್ಚುವರಿ ಅಬಕಾರಿ ಶುಲ್ಕ/ಹೆಚ್ಚುವರಿ ಕೌಂಟರ್ ವೇಲಿಂಗ್ ಶುಲ್ಕದ ದರ, ಬಲ್ಕ್ ಲೀಟರ್‌ಗೆ | |
|---|---|---|---|---|---|
| | | | | ಅಥವಾ<br>(2) ಭಾರತದ ಇತರ ರಾಜ್ಯಗಳಲ್ಲಿ ಉತ್ಪಾದನೆಯಾಗಿ ಡಿಸ್ಟಿಬ್ಯೂಟರ್ ಸನ್ನದುದಾರನಿಂದ ಕರ್ನಾಟಕಕ್ಕೆ ಆಮದು ಮಾಡಿಕೊಂಡ ಸಂದರ್ಭದಲ್ಲಿ | ಅಥವಾ<br>(2) ಭಾರತದ ಹೊರರಾಜ್ಯಗಳಲ್ಲಿ ಉತ್ಪಾದನೆಯಾಗಿ ಮತ್ತು ಮಿಲಿಟರಿ ಕ್ಯಾಂಟೀನ್ ಸ್ಟೋರ್ಸ್ ಬಾಂಡೆಡ್ ವೇರ್‌ಹೌಸ್ ಸನ್ನದು ಹೊಂದಿರುವ ಸನ್ನದುದಾರರ ಮುಖಾಂತರ ಕರ್ನಾಟಕಕ್ಕೆ ಆಮದಾದ ಸಂದರ್ಭದಲ್ಲಿ |
| | | ರೂ.ಪೈ. | ರೂ.ಪೈ. | ರೂ.ಪೈ. | ರೂ.ಪೈ. |
| **ಪ್ರಸ್ತುತ** | | | | | |
| 01 | | 125-00 (330 ಮಿ.ಲೀ. ಸೀಸೆಗಳಲ್ಲಿ) | 139-00 | 20-00 | 0-40 |
| 02 | | 140-00 | 150-00 | 20-00 | 0-40 |
| 03 | | 151-00 | 160-00 | 22-00 | 0-45 |

| ಕ್ರಮ ಸಂಖ್ಯೆ | ವಸ್ತುವಿನ ಹೆಸರು | 7.8/7.92/12 ಬಲ್ಕ್ ಲೀಟರ್ ಬೀರ್ ಹೊಂದಿರುವ ಪ್ರತಿ ಪೆಟ್ಟಿಗೆಗೆ ಘೋಷಿತ ದರಗಳ ಶ್ರೇಣಿ | | ಹೆಚ್ಚುವರಿ ಅಬಕಾರಿ ಶುಲ್ಕ/ಹೆಚ್ಚುವರಿ ಕೌಂಟರ್ ವೇಲಿಂಗ್ ಶುಲ್ಕದ ದರ, ಬಲ್ಕ್ ಲೀಟರ್‌ಗೆ | |
|---|---|---|---|---|---|
| 04 | | 161-00 | ಮೇಲ್ಪಟ್ಟು | 22-00 | 0-50 |
| **ಪ್ರಸ್ತಾವಿತ** | | | | | |
| 01 | | 125-00 (330 ಮಿ.ಲೀ. ಸೀಸೆಗಳಲ್ಲಿ) | ಮೇಲ್ಪಟ್ಟು | 29-00 | 2-00 |
| 02 | | 140-00 | ಮೇಲ್ಪಟ್ಟು | 29-00 | 2-00 |

## ಅನುಬಂಧ IV
## (ಪ್ಯಾರಾ 246)

| ಹಾಲಿ ಇರುವ ತೆರಿಗೆ | | | | ಪ್ರಸ್ತಾಪಿತ ತೆರಿಗೆ | | |
|---|---|---|---|---|---|---|
| ಕ್ರಮ ಸಂಖ್ಯೆ | ಐಟಂ ಸಂಖ್ಯೆ | ವಾಹನದ ವರ್ಗ | ತ್ರೈಮಾಸಿಕ ತೆರಿಗೆ ರೂ. | ಐಟಂ ಸಂಖ್ಯೆ | ವಾಹನದ ವರ್ಗ | ತ್ರೈಮಾಸಿಕ ತೆರಿಗೆ ರೂ. |
| 1 | 2 | 3 | 4 | 5 | 6 | 7 |
| 1 | 1 | ಕೇಂದ್ರ ಸರ್ಕಾರದ ಉದ್ಯೋಗಿಗಳು ಅಥವಾ ರಕ್ಷಣಾ ದಳದ ಸಿಬ್ಬಂದಿ ಹೊಂದಿರುವ ದ್ವಿಚಕ್ರ ವಾಹನಗಳಿಗೆ (ಮೋಟಾರ್ ಸ್ಕೂಟರ್ ಮತ್ತು ಯಾಂತ್ರಿಕ ಶಕ್ತಿಯಿಂದ ಚಲಾಯಿಸಲ್ಪಡಲು ಯಂತ್ರ ಜೋಡಿತ ಸೈಕಲ್‌ಗಳು ಒಳಗೊಂಡಂತೆ) | 25.00 | 1 | ಕೇಂದ್ರ ಸರ್ಕಾರದ ಉದ್ಯೋಗಿಗಳು ಅಥವಾ ರಕ್ಷಣಾ ದಳದ ಸಿಬ್ಬಂದಿ ಅಥವಾ ಭಾರತ ಸರ್ಕಾರದ ಒಡೆತನಕ್ಕೊಳಪಟ್ಟ ಸಾರ್ವಜನಿಕ ಸ್ವಾಮ್ಯದ ಉದ್ದಿಮೆ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ನೌಕರರು ಹೊಂದಿರುವ ದ್ವಿಚಕ್ರ ವಾಹನಗಳಿಗೆ (ಮೋಟಾರ್ ಸ್ಕೂಟರ್ ಮತ್ತು ಯಾಂತ್ರಿಕ ಶಕ್ತಿಯಿಂದ ಚಲಾಯಿಸಲ್ಪಡಲು ಯಂತ್ರ ಜೋಡಿತ ಸೈಕಲ್‌ಗಳು ಒಳಗೊಂಡಂತೆ) | 25.00 |
| 2 | 3ಎ | ಭಾಗ ಎ ಷೆಡ್ಯೂಲ್‌ನ ಐಟಂ 10 ರಲ್ಲಿ ವಿಧಿಸಲಾಗುತ್ತಿರುವ ಆರ್ಟಿಕ್ಯುಲೇಟೆಡ್ ವಾಹನವನ್ನು | ರೂ. 2200=00+ ಪ್ರತಿ 250 ಕೆ.ಜಿ. ಅಥವಾ ಭಾಗಕ್ಕೆ | | ಭಾಗ ಎ ಷೆಡ್ಯೂಲ್‌ನ ಐಟಂ 10 ರಲ್ಲಿ ವಿಧಿಸಲಾಗುತ್ತಿರುವ ಆರ್ಟಿಕ್ಯುಲೇಟೆಡ್ ವಾಹನವನ್ನು ಹೊರತುಪಡಿಸಿ ಮಲ್ಟಿ | ರೂ. 2200=00+ ಪ್ರತಿ 250 |

| ಹಾಲಿ ಇರುವ ತೆರಿಗೆ | | | | ಪ್ರಸ್ತಾಪಿತ ತೆರಿಗೆ | | |
|---|---|---|---|---|---|---|
| ಕ್ರಮ ಸಂಖ್ಯೆ | ಐಟಂ ಸಂಖ್ಯೆ | ವಾಹನದ ವರ್ಗ | ತ್ರೈಮಾಸಿಕ ತೆರಿಗೆ ರೂ. | ಐಟಂ ಸಂಖ್ಯೆ | ವಾಹನದ ವರ್ಗ | ತ್ರೈಮಾಸಿಕ ತೆರಿಗೆ ರೂ. |
| | | ಹೊರತುಪಡಿಸಿ ಮಲ್ಟಿ ಅಕ್ಸಲ್ ವಾಹನದ ಸಮಗ್ರ ತೂಕ 15000 ಕೆ.ಜಿ. ಮೀರಿ, ಪ್ರತಿ 250 ಕೆ.ಜಿ. ಅಥವಾ ಅದರ ಭಾಗಕ್ಕೆ | ರೂ.75=00 ರಂತೆ | | ಅಕ್ಸಲ್ ವಾಹನದ ಸಮಗ್ರ ತೂಕ 15000 ಕೆ.ಜಿ. ಮೀರಿ, ಪ್ರತಿ 250 ಕೆ.ಜಿ. ಅಥವಾ ಅದರ ಭಾಗಕ್ಕೆ | ಕೆ.ಜಿ. ಅಥವಾ ಭಾಗಕ್ಕೆ ರೂ.50=00 ರಂತೆ |
| 3 | 10 | ತನಗೆ ತಾನೇ ಯಾವುದೇ ಭಾರವನ್ನು ಹೊರಲಾಗದ, (ನೀರು, ಇಂಧನ, ಅಕ್ಯುಮಲೇಟರ್ ಮತ್ತು ಯಂತ್ರ ಚಾಲನೆಗೆ ಸಹಕಾರಿಯಾದ ಉಪಕರಣಗಳನ್ನು ಹೊರತುಪಡಿಸಿ), ದೊಡ್ಡ ಪ್ರಮಾಣದ ಟ್ರೈಲರ್ ಎಳೆಯಲು, ಜೋಡಿಯ ಸಮಗ್ರ ಭಾರ ಸಹಿತ ಎಳೆಯಲು ನಿರ್ಮಿಸಿದ ವಾಹನ (ಜಿ) 15000 ಕೆ.ಜಿ.ಗೆ ಮೀರಿದ | ರೂ. 2300=00+ ಪ್ರತಿ 250 ಕೆ.ಜಿ. ಅಥವಾ ಭಾಗಕ್ಕೆ ರೂ.75=00 ರಂತೆ | 10 | ತನಗೆ ತಾನೇ ಯಾವುದೇ ಭಾರವನ್ನು ಹೊರಲಾಗದ, (ನೀರು, ಇಂಧನ, ಅಕ್ಯುಮಲೇಟರ್ ಮತ್ತು ಯಂತ್ರ ಚಾಲನೆಗೆ ಸಹಕಾರಿಯಾದ ಉಪಕರಣಗಳನ್ನು ಹೊರತುಪಡಿಸಿ), ದೊಡ್ಡ ಪ್ರಮಾಣದ ಟ್ರೈಲರ್ ಎಳೆಯಲು, ಜೋಡಿಯ ಸಮಗ್ರ ಭಾರ ಸಹಿತ ಎಳೆಯಲು ನಿರ್ಮಿಸಿದ ವಾಹನ (ಜಿ) 15000 ಕೆ.ಜಿ.ಗೆ ಮೀರಿದ | ರೂ. 2300=00+ ಪ್ರತಿ 250 ಕೆ.ಜಿ. ಅಥವಾ ಭಾಗಕ್ಕೆ ರೂ.35=00 ರಂತೆ |

| ಹಾಲಿ ಇರುವ ತೆರಿಗೆ | | | | ಪ್ರಸ್ತಾಪಿತ ತೆರಿಗೆ | | |
|---|---|---|---|---|---|---|
| ಕ್ರಮ ಸಂಖ್ಯೆ | ಐಟಂ ಸಂಖ್ಯೆ | ವಾಹನದ ವರ್ಗ | ತ್ರೈಮಾಸಿಕ ತೆರಿಗೆ ರೂ. | ಐಟಂ ಸಂಖ್ಯೆ | ವಾಹನದ ವರ್ಗ | ತ್ರೈಮಾಸಿಕ ತೆರಿಗೆ ರೂ. |
| 4 | 14 | (2) ಕೇಂದ್ರ ಸರ್ಕಾರದ ಉದ್ಯೋಗಿಗಳು ಅಥವಾ ರಕ್ಷಣಾ ದಳದ ಸಿಬ್ಬಂದಿ ಹೊಂದಿರುವ ಮೋಟಾರ್ ಕಾರ್‌ಗಳು / ಜೀಪುಗಳು. | 187.50 | | (2) ಕೇಂದ್ರ ಸರ್ಕಾರದ ಉದ್ಯೋಗಿಗಳು ಅಥವಾ ರಕ್ಷಣಾ ದಳದ ಸಿಬ್ಬಂದಿ ಅಥವಾ ಭಾರತ ಸರ್ಕಾರದ ಒಡೆತನಕ್ಕೊಳಪಟ್ಟ ಸಾರ್ವಜನಿಕ ಸ್ವಾಮ್ಯದ ಉದ್ದಿಮೆ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ನೌಕರರು ಹೊಂದಿರುವ ಮೋಟಾರ್ ಕಾರ್‌ಗಳು / ಜೀಪುಗಳು. | 187.50 |